ಡಾ.ಬ್ರಹ್ಮರ್ಷಿ ಪಿತಾಮಹ ಸುಭಾಷ್ ಪತ್ರೀಜಿ ಆಶೀರ್ವಾದಗಳೊಂದಿಗೆ



ಧ್ಯಾನದಿಂದಲೇ ಜ್ಞಾನ

ತಟವರ್ತಿ ವೀರರಾಘವರಾವ್

ಕನ್ನಡ ಅನುವಾದ :

ಸುಮಲತ ಜಿ.ಎಸ್.ರಾಜು

ಧ್ಯಾನದಿಂದಲೇ ಜ್ಞಾನ

ರಚನೆ : ತಟವರ್ತಿ ವೀರರಾಘವರಾವು
ಕನ್ನಡ ಅನುವಾದ : ಜಿ.ಎಸ್.ಸುಮಲತರಾಜು.

ಶ್ರೀರಾಮ ಪಬ್ಲಿಕೇಶನ್ಸ್
ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,
ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು – 560 066

ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್
ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

Dhyanadindale Gnana

Edited & Published by **Srirama Publications,** Sri Ramadhama Pyaramid Dyanakendra, Narayanappa Garden, Whitefiled, Bangalore - 560 066. **M.: 9449695503, 8050082689, 9886532204**

ಮೊದಲನೇ ಮುದ್ರಣ	:	2023
ಹಕ್ಕುಗಳು	:	ಪ್ರಕಾಶಕರು
ಪ್ರಕಾಶಕರು	:	**ಶ್ರೀರಾಮ ಪಬ್ಲಿಕೇಶನ್ಸ್** ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ, ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು – 560 066 ಮೊ.: 9449695503, 9886532204
ಬಳಸಿದ ಕಾಗದ	:	70 ಜಿ.ಎಸ್.ಎಂ. ಮ್ಯಾಪಲಿಥೊ ಡೆಮಿ 1/8
ಪ್ರತಿಗಳು	:	1000
ಬೆಲೆ	:	70/–
ಪುಟಗಳು	:	iv+67=71
ಮುಖಚಿತ್ರ	:	ಚಂದ್ರಕಾಂತ ಪಟ್ಟಣ
ಅಕ್ಷರ ಜೋಡಣೆ	:	**ನಿರಂತರ ಸಾಯಿ ಕಮ್ಯೂನಿಕೇಷನ್ ಪ್ರೈ.ಲಿ** ಮೊ: 96328 12541

ಮುದ್ರಣ :

ಪೂರ್ಣಾ ಗ್ರಾಫಿಕ್ಸ್,

ಬೆಂಗಳೂರು 9844167475

ಸ್ವ-ಪರಿಚಯ

ನನ್ನ ಹೆಸರು ಎಚ್.ಎನ್.ಶ್ರೀನಿವಾಸ. ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್. ಪದವಿ ಪಡೆದ ಆರಂಭದಲ್ಲಿ, ಮೂರು ವರ್ಷಗಳ ಕಾಲ ಸರ್ಕಾರಿ ಉದ್ಯೋಗದಲ್ಲಿ ಕೆಲಸ ಮಾಡಿದ ನಂತರ, ಆ ಉದ್ಯೋಗದಲ್ಲಿ ನಿರಾಸಕ್ತಿ ಹೊಂದಿದ ನಾನು, 1990ರಲ್ಲಿ ನನ್ನ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿದೆ. ನನ್ನ ಆಧ್ಯಾತ್ಮಿಕ ಪ್ರಯಾಣವು 1999ರಲ್ಲಿ ಎಸ್.ಎಸ್.ವೈ. ಅಂದರೆ, ಸಿದ್ಧಸಮಾಧಿ ಯೋಗ ಗುರೂಜಿಯವರಿಂದ ಪ್ರಾರಂಭವಾಯಿತು. 2004ರಲ್ಲಿ ವೀರಾಂಜನೇಯ ದೇವಾಲಯವನ್ನು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ನಿರ್ಮಿಸಲಾಯಿತು. ಎಲ್ಲಾ ಆಚರಣೆಗಳು ದೇವಾಲಯದಲ್ಲಿ ನಿಯಮಿತವಾಗಿ ನಡೆಯುತ್ತಿದ್ದವು. ಆಧ್ಯಾತ್ಮದ ಬಗ್ಗೆ ನನಗೆ ಒಲವು ಹೆಚ್ಚಾದಂತೆ ನಾನು ಮತ್ತು ನನ್ನ ಪತ್ನಿ ಎಸ್.ಎನ್.ವಿಜಯಲಕ್ಷ್ಮಿ ಸೇರಿ 2008ರಲ್ಲಿ ನಾವು ದೇವಾಲಯದ ಪಕ್ಕದಲ್ಲಿ 'ಶ್ರೀ ರಾಮಧಾಮ ಧ್ಯಾನ ಮಂದಿರ' ಎಂಬ ಹೆಸರಿನ ಒಂದು ಧ್ಯಾನ ಮಂದಿರವನ್ನು ನಿರ್ಮಿಸಿದೆವು. ಇದನ್ನು ಸಿದ್ಧಸಮಾಧಿ ಯೋಗ ಸಂಸ್ಥಾಪಕರಾದ ಡಾ.ಋಷಿ ಪ್ರಭಾಕರ್ ಗುರೂಜಿಯವರು ಉದ್ಘಾಟಿಸಿದರು. ಅಲ್ಲಿ ಎಸ್.ಎಸ್.ವೈ. ಶಿಕ್ಷಕರಿಂದ ಸಾಮೂಹಿಕ ಧ್ಯಾನ ತರಬೇತಿಗಳನ್ನು ಆಯೋಜಿಸುತ್ತಿದ್ದೆವು. 2009ರಲ್ಲಿ ಬ್ರಹ್ಮರ್ಷಿ ಪಿತಾಮಹ ಡಾ.ಸುಭಾಷ್ ಪತ್ರೀಜಿಯವರು ಧ್ಯಾನ ಅಧಿವೇಶನಕ್ಕಾಗಿ ಶ್ರೀರಾಮಧಾಮ ಕೇಂದ್ರಕ್ಕೆ ಭೇಟಿ ನೀಡಿದಾಗ 'ಆನಾಪಾನಸತಿ ಧ್ಯಾನ ವಿಧಾನ'ವನ್ನು ಪರಿಚಯ ಮಾಡಿಸಿದರು. ಪತ್ರೀಜಿಯವರನ್ನು ಭೇಟಿಯಾದ ನಂತರ, ದಿನನಿತ್ಯದ ನನ್ನ ಆಧ್ಯಾತ್ಮಿಕ ಅಭ್ಯಾಸದ ಕಾಲಾವಧಿಯನ್ನು ಹೆಚ್ಚಿಸಿದೆ. ಪಿ.ಎಸ್.ಎಸ್.ಎಂ.ನ ತತ್ವಸಿದ್ಧಾಂತದಲ್ಲಿ ಗುರು–ಶಿಷ್ಯರ ಕುರಿತಾದ ಒಂದು ಪ್ರಮುಖವಾದ ಅಂಶವು ನನ್ನ ಗಮನ ಸೆಳೆಯಿತು. 'ಯಾರೂ ಶಾಶ್ವತವಾಗಿ ಗುರುಗಳಲ್ಲ, ಯಾರೂ ಶಾಶ್ವತವಾಗಿ ಶಿಷ್ಯರೂ ಅಲ್ಲ, ಅವರಿಗೆ ಅವರೇ ಗುರುಗಳು. ಮಾಸ್ಟರ್ ಆಗಿ ಬದುಕಲು ಕಲಿಯಿರಿ, ಎಂದಿಗೂ ಶಿಷ್ಯರಾಗಿಯೇ ಇರಬೇಡಿ' ಎಂಬ ಪತ್ರೀಜಿಯವರ ಮಾತುಗಳು ಆಧ್ಯಾತ್ಮದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿತು. 2013ರಲ್ಲಿ ಪತ್ರೀಜಿಯವರು ನನಗೆ ಪಿರಮಿಡ್ ವ್ಯಾಲಿ

ಇಂಟರ್‌ನ್ಯಾಷನಲ್ ಟ್ರಸ್ಟ್‌ನಲ್ಲಿ ಒಬ್ಬ ಟ್ರಸ್ಟಿಯಾಗಿ ಸೇವೆ ಮಾಡುವ ಸದವಕಾಶವನ್ನು ಒದಗಿಸಿದರು.

ಇದರಲ್ಲಿ ನನಗೆ 'ನಿತ್ಯಅನ್ನದಾನ ಸೇವೆ'ಯ ಜವಾಬ್ದಾರಿಯನ್ನು ವಹಿಸಲಾಯಿತು. ಪ್ರತಿಯೊಬ್ಬ ಮಾನವನು ಮಾಧವನಾಗಬೇಕಾದರೆ ಪ್ರತಿನಿತ್ಯವೂ ಶ್ರದ್ಧೆ, ಆಸಕ್ತಿಯಿಂದ ಧ್ಯಾನಾಭ್ಯಾಸ ಮಾಡಬೇಕು. ಅದರ ಜೊತೆಯಲ್ಲಿ 'ಸಸ್ಯಾಹಾರ', 'ಸ್ವಾಧ್ಯಾಯ', 'ಸಜ್ಜನ–ಸಾಂಗತ್ಯ, ಅಂದರೆ, ಸತ್ಸಂಗ' ಹಾಗೂ 'ಪಿರಮಿಡ್ ಶಕ್ತಿ ಬಳಕೆ' ಅವಶ್ಯಕ ಎಂದು ಆಧ್ಯಾತ್ಮಶಾಸ್ತ್ರ ತಿಳಿಸುತ್ತದೆ. ನಿರಂತರ, ಸಾಧನೆಯಿಂದ ಶಾರೀರಿಕ ಆರೋಗ್ಯ, ಮಾನಸಿಕ ಪ್ರಶಾಂತತೆ, ಬುದ್ಧಿ–ವಿಕಾಸ, ಆನಂದದ ಜೀವನ, ಆತ್ಮಜ್ಞಾನ ಮುಂತಾದವುಗಳು ಲಭಿಸುವುದು. ಹೊಸ ಯುಗದ ಆಧ್ಯಾತ್ಮ ಸಾಹಿತ್ಯವನ್ನು ಸ್ವಾಧ್ಯಾಯಕ್ಕಾಗಿ ಪ್ರಕಟಿಸುವ ಹಿನ್ನೆಲೆಯಲ್ಲಿ 'ಶ್ರೀರಾಮ ಪಬ್ಲಿಕೇಶನ್ಸ್' ಹೆಸರಿನ ಪುಟ್ಟ ಪ್ರಕಾಶನ ಸಂಸ್ಥೆಯನ್ನು ಆರಂಭಿಸಲಾಯಿತು. ಪತ್ರೀಜಿಯವರ ಮತ್ತು ತಟವರ್ತಿ ವೀರರಾಘವರಾವ್ ರವರ ಆದೇಶದ ಮೇರೆಗೆ ನಮ್ಮ ಪ್ರಕಾಶನದ ವತಿಯಿಂದ ಕೆಲವು ಆಧ್ಯಾತ್ಮಿಕ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದೆವು. ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಿಸಲಾಯಿತು. ಕೆಲವು ತೆಲುಗು ಪುಸ್ತಕಗಳನ್ನು ಮರುಮುದ್ರಣ ಮಾಡಲಾಯಿತು. ತೆಲುಗಿನ ಉತ್ತಮ ಪುಸ್ತಕಗಳು ಕನ್ನಡದ ಆಧ್ಯಾತ್ಮ ಸಾಧಕರಿಗೂ ದೊರಕಲೆಂದು ನಾವು ಇಂತಹ ಪ್ರಯತ್ನ ಮಾಡಿದ್ದೇವೆ.

ತಮ್ಮ ವಿಶ್ವಾಸಿಗಳು,

ಎಚ್.ಎನ್.ಶ್ರೀನಿವಾಸ
ಮತ್ತು
ಎಸ್.ಎನ್.ವಿಜಯಲಕ್ಷ್ಮಿ
ಸಂಸ್ಥಾಪಕರು,
ಶ್ರೀರಾಮಧಾಮ ಧ್ಯಾನಕೇಂದ್ರ

ಧ್ಯಾನದಿಂದಲೇ ಜ್ಞಾನ

ಮನುಷ್ಯರ ದುಃಖಕ್ಕೆ ಕಾರಣ ಅಜ್ಞಾನ. ದುಃಖವೆಂದರೆ ಅನೇಕ ಸಮಸ್ಯೆಗಳಿಂದ ಉಂಟಾಗುವ ನೋವು. ಅಂದರೆ ಆರೋಗ್ಯ ಸಮಸ್ಯೆಗಳು, ಆರ್ಥಿಕ ಸಮಸ್ಯೆಗಳು, ಕುಟುಂಬ ಸಮಸ್ಯೆಗಳಂತಹವು. ಇಂತಹ ದುಃಖದಿಂದ ಪೂರ್ತಿಯಾಗಿ ಹೊರಬರಬೇಕೆಂದರೆ ಮನುಷ್ಯರು 'ಜ್ಞಾನ'ವನ್ನು ಹೊಂದಲೇ ಬೇಕು, ಜ್ಞಾನ ಹೊಂದಲು ಪ್ರಯತ್ನಿಸದಂತೆ ಎಷ್ಟು ಪ್ರಯತ್ನಗಳನ್ನು ಮಾಡಿದರು ಅಂದರೆ ಪೂಜೆಗಳು, ಭಜನೆಗಳು, ಪ್ರಾರ್ಥನೆಗಳು, ನಮಾಜುಗಳು, ವ್ರತಗಳು ಇಂತಹವುಗಳನ್ನು ಎಷ್ಟು ಆರಾಧನೆ ಮಾಡಿದರೂ? ಗುರುಗಳ ಕೃಪೆಗೋಸ್ಕರ ಪ್ರಯತ್ನಿಸಿದರೂ? ಜಾತಕ ದೋಷಗಳು ವಾಸ್ತು ದೋಷಗಳು, ನಾಮ ದೋಷಗಳನ್ನು ಸರಿ ಮಾಡಿಕೊಂಡರೂ? ರುದ್ರಾಕ್ಷಿಗಳು, ತಾಯತಗಳು, ರಕ್ಷಾಕವಚಗಳು ಇಂತಹವುಗಳನ್ನು ಎಷ್ಟು ಧರಿಸಿದರೂ? ಎಷ್ಟು ವೈದ್ಯ ವಿಧಾನಗಳನ್ನು ಅನುಸರಿಸಿದರೂ? ದುಃಖದಿಂದ ಪೂರ್ಣವಾಗಿ ಹೊರ ಬರಲಾರರು.

ಆದರೆ ಎಲ್ಲಾ ಸಮಸ್ಯೆಗಳಿಗೂ 'ಜ್ಞಾನವೇ' ಶಾಶ್ವತ ಪರಿಹಾರ. ಹೀಗೆ ಜ್ಞಾನ ಸಂಪಾದಿಸಿಕೊಂಡು ಜೀವನದಲ್ಲಿ ಶಾಶ್ವತ ಪರಿಹಾರವನ್ನು ಹೊಂದಿದವರು ಎಷ್ಟೋ ಜನ ನಮಗೆ ಕಾಣಿಸುತ್ತಾರೆ. ಅಂತಹವರನ್ನು ಈ ಪ್ರಪಂಚದೊಳಗೆ ಬಹಳ ಶ್ರೇಷ್ಠರೆಂದು ಭಾವಿಸುತ್ತಾರೆ. ಅಂತಹವರಲ್ಲಿ ರಮಣ ಮಹರ್ಷಿ, ರಾಮಕೃಷ್ಣ ಪರಮಹಂಸ, ವಿವೇಕಾನಂದ, ಯೋಗಾನಂದ, ಯುಕ್ತೇಶ್ವರ, ಲಾಹಿರಿ ಮಹಾಶಯರು, ಮಳಯಾಳ ಸ್ವಾಮಿ, ವೀರ ಬ್ರಹ್ಮೇಂದ್ರ ಸ್ವಾಮಿ, ರಾಘವೇಂದ್ರ ಸ್ವಾಮಿ, ಕಬೀರ್, ರಾಧಾಸ್ವಾಮಿ ಅಂತಹವರು ಸ್ವಲ್ಪ ಜನ ಮಾತ್ರ. ಇನ್ನು ಸತ್ಯ ಸಾಯಿಬಾಬಾ, ಶಿರಡಿ ಸಾಯಿಬಾಬಾ, ಮೆಹರ್ ಬಾಬಾರಂತಹವರು ಇವರಷ್ಟೇ ಅಲ್ಲದೆ ಬುದ್ಧ, ಕೃಷ್ಣ, ಜೀಸಸ್ ಕ್ರೈಸ್ಟ್, ಮಹಮ್ಮದ್ ಮಹಾವೀರ ಪತ್ರೀಜಿ ಅಂತಹವರು ಬಹಳಷ್ಟು ಜನ ಇದ್ದಾರೆ.

ಇವರೆಲ್ಲರೂ ಅಪಾರವಾದ ಜ್ಞಾನವನ್ನು ಸಂಪಾದಿಸಿ ಕೊಂಡವರೇ. ದುಃಖದಿಂದ ಶಾಶ್ವತವಾಗಿ ಹೊರಬಂದವರೇ. ಇಹ, ಪರಲೋಕ ಜ್ಞಾನವನ್ನು ಹೊಂದಿದವರೇ! ಇವರೆಲ್ಲರೂ ಹಣಕ್ಕೆ, ಹಣ ಸಂಪಾದನೆಗೆ ಪ್ರಾಮುಖ್ಯತೆಯನ್ನು ಕೊಡಲಿಲ್ಲ, ಇವರ

ಜೀವನದಲ್ಲಿ ಯೋಗಸಾಧನೆ ಅಂದರೆ ಧ್ಯಾನ ಸಾಧನೆ ವಿಶೇಷವಾಗಿ ಮಾಡುವುದಷ್ಟೇ ಅಲ್ಲದೇ ಅಪಾರ ಜ್ಞಾನವನ್ನುಸಹ ಹೊಂದಿದರು. ಬಹಳಷ್ಟು ಹಣ ಇರುವವರಿಗಿಂತ, ಚಕ್ರವರ್ತಿಗಳಿಗಿಂತಲೂ ಸಹ ಉನ್ನತವಾದ ಕೀರ್ತಿಯನ್ನು ಗಳಿಸಿದರು. ಕಾರಣ ಅವರು ಹೊಂದಿದ ಜ್ಞಾನವೇ. ಈ ಜ್ಞಾನದಿಂದಲೇ ಅವರೆಲ್ಲಾ ದೇವರುಗಳೆಂದು ಕರೆಯಲ್ಪಡುತ್ತಿದ್ದಾರೆ. ಪೂಜಿಸಲ್ಪಡುತ್ತಿದ್ದಾರೆ.

ವಾಸ್ತವವಾಗಿ ಇವರು ಭೂಮಿಯ ಮೇಲೆ ಬಂದಿದ್ದು.... ಜ್ಞಾನವನ್ನು ಸಂಪಾದಿಸಿಕೊಳ್ಳಲು ತಾವು ಸಂಪಾದಿಸಿಕೊಂಡ ಜ್ಞಾನವನ್ನು ಪ್ರಪಂಚದಲ್ಲಿರುವವರೆಲ್ಲರಿಗೂ ಬೋಧಿಸಿ ಅವರೆಲ್ಲರನ್ನೂ ಸಹ ಜ್ಞಾನಿಗಳನ್ನಾಗಿ ಮಾಡಲು. ಹೀಗೆ ಇವರೆಲ್ಲರ ಬೋಧನೆಗಳಿಂದ ಬಹಳಷ್ಟು ಜನ ತಮ್ಮ ಅಜ್ಞಾನವನ್ನು ಹೋಗಲಾಡಿಸಿಕೊಂಡು ಜ್ಞಾನಿಗಳಾದರು. ದುಃಖದಿಂದ ಹೊರಬರಲು ಸಾಧ್ಯವಾಯಿತು. ಇವರೆಲ್ಲ ಆ ಜ್ಞಾನವನ್ನೇ ಅನೇಕ ರೀತಿಯ ಉಪಮಾನಗಳಿಂದ ಅವರವರ ನೈಪುಣ್ಯತೆಯಿಂದ ಬೋಧಿಸಿದರು. ಏನೇ ಆದರೂ ಅವರೆಲ್ಲರೂ ಮನುಕುಲಕ್ಕೆ ಬೋಧಿಸಿದ್ದು 'ಜ್ಞಾನವನ್ನೇ'. ಅಷ್ಟೇಅಲ್ಲ 'ಆತ್ಮಜ್ಞಾನವೇ' ಎಲ್ಲಾ ಸಮಸ್ಯೆಗಳಿಗೆ ಪರಿಹಾರವೆಂದು ಸಹ ಹೇಳಿದರು.

'ಜ್ಞಾನವನ್ನು' ಹೊಂದದಿದ್ದರೆ ಮನುಷ್ಯರು ಅಜ್ಞಾನದಲ್ಲಿಯೇ ಇರುತ್ತಾರೆ. ಅಜ್ಞಾನದ ಕಾರಣದಿಂದ ಮಾಡಬಾರದ ಕೆಲಸಗಳನ್ನು, ಕರ್ಮಗಳನ್ನು ಮಾಡುತ್ತಾರೆ, ಅದರ ಮೂಲಕ ದುಃಖ ಅಂದರೆ ಕಷ್ಟಗಳನ್ನು ತಂದುಕೊಳ್ಳುತ್ತಾರೆ, ಜೀವನವನ್ನು ನರಕ ಮಾಡಿಕೊಳ್ಳುತ್ತಾರೆ. ಆದರೆ 'ಜ್ಞಾನ' ಹೊಂದುವುದರಿಂದ ಮಾಡಬಾರದ ಕೆಲಸಗಳನ್ನು ಮಾಡುವುದಿಲ್ಲ, ಮೇಲಾಗಿ ಮಾಡಬೇಕಾದಂತಹವುಗಳನ್ನೇ ಮಾಡುತ್ತಾರೆ.

ಆದರಿಂದಾಗಿ ಕಷ್ಟಗಳು ಬರುವುದಿಲ್ಲ ಮೇಲಾಗಿ ಆನಂದವನ್ನು ಸಹ ಹೊಂದುತ್ತಾರೆ ಅಷ್ಟೇಅಲ್ಲ ಜ್ಞಾನ ಹೆಚ್ಚುತ್ತಾ ಹೋದಂತೆ ಅವರು ಹಿಂದೆ ಮಾಡಿದ ಪಾಪಕರ್ಮಗಳು ಭಸ್ಮವಾಗುತ್ತಿರುತ್ತವೆ. ಇದರಿಂದಾಗಿ ಪ್ರಸ್ತುತ ಅನುಭವಿಸುತ್ತಿರುವ ಕಷ್ಟಗಳು ತೊಲಗುವುದಷ್ಟೇ ಅಲ್ಲದೇ ಭವಿಷ್ಯತ್ತಿನಲ್ಲಿ ಬರಬಹುದಾದ ಕಷ್ಟಗಳು ಸಹ ಬರುವುದಿಲ್ಲ, ಆದ್ದರಿಂದ 'ಜ್ಞಾನ' ಹೊಂದಿದಷ್ಟೂ ದುಃಖ ಕಡಿಮೆಯಾಗುತ್ತದೆ. ವಿಶೇಷವಾದ ಜ್ಞಾನವನ್ನು ಹೊಂದಿದರೆ ದುಃಖದಿಂದ ಶಾಶ್ವತವಾಗಿ ಹೊರಬರುತ್ತಾರೆ. ಅಷ್ಟೇ ಅಲ್ಲ 'ಜ್ಞಾನ' ಹೆಚ್ಚಿದಷ್ಟು ಜೀವನದಲ್ಲಿ ಕೆಲವು ತಿಳಿಯದ ಸತ್ಯಗಳನ್ನು ತಿಳಿದುಕೊಳ್ಳುತ್ತಾರೆ.

ಆದರೆ ಅಜ್ಞಾನದಲ್ಲಿ ಇರುವವರು ಈ ಶರೀರವೇ ನಾನೆಂದು ಭಾವಿಸುತ್ತಾರೆ ಆದ್ದರಿಂದ ಶರೀರಕ್ಕೇ ಪ್ರಾಮುಖ್ಯತೆ ಕೊಡುತ್ತಾರೆ. ಎಷ್ಟುಹೊತ್ತು ದೇಹ ಸುಖಕ್ಕೋಸ್ಕರ, ದೇಹ ಆರೋಗ್ಯಕ್ಕೋಸ್ಕರ, ದೇಹಸೌಂದರ್ಯಕ್ಕೋಸ್ಕರ, ದೇಹ ಸೌಷ್ಟವಕ್ಕೋಸ್ಕರ, ದೇಹದ ಲಾಭಗಳಿಗೋಸ್ಕರ ಅವಸ್ಥೆ ಪಡುತ್ತಿರುತ್ತಾರೆ. ತಮ್ಮ ಹಣವನ್ನು ಶಕ್ತಿ ಯುಕ್ತಿಗಳೆಲ್ಲವನ್ನೂ ದೇಹಕ್ಕೋಸ್ಕರವೇ ಉಪಯೋಗಿಸುತ್ತಾರೆ. ಇನ್ನೂ ಶರೀರ ಸುಖಕ್ಕೋಸ್ಕರ ದೇಹ ಆನಂದಕ್ಕೋಸ್ಕರ ತಪ್ಪುಗಳು, ಪಾಪಗಳನ್ನು ಮಾಡುತ್ತಾರೆ ಅವುಗಳ ಫಲಿತಾಂಶವನ್ನು ದುಃಖದ ರೂಪದಲ್ಲಿ ಅನುಭವಿಸುತ್ತಾರೆ. ಹೀಗೆ ಅಜ್ಞಾನದ ಕಾರಣದಿಂದಾಗಿ ಬಹಳಷ್ಟು ನಷ್ಟ ಹೊಂದುತ್ತಾರೆ.

ಆದರೆ ಜ್ಞಾನವನ್ನು ಹೊಂದುತ್ತಿದ್ದರೆ ನಾನು ದೇಹ ಅಲ್ಲ, ಆತ್ಮ ಎಂದು ತಿಳಿಯುತ್ತದೆ. ಆಗ ಅವರ ಕೆಲಸಗಳು ಬದಲಾಗುತ್ತವೆ, ಪ್ರಾಮುಖ್ಯತೆಗಳು ಬದಲಾಗುತ್ತವೆ, ಜವಾಬ್ದಾರಿಗಳು ಬದಲಾಗುತ್ತವೆ. ದೇಹಕ್ಕೋಸ್ಕರ, ದೇಹಸುಖಗಳಿಗೋಸ್ಕರ ತಪ್ಪುಗಳು, ಪಾಪಗಳನ್ನು ಮಾಡುವುದಿಲ್ಲ. ಅಷ್ಟೇಅಲ್ಲ ಜ್ಞಾನ ಹೆಚ್ಚುತ್ತಾ ಹೋದಂತೆ ಸೃಷ್ಟಿ ಸಿದ್ಧಾಂತಗಳು, ನಿಯಮಗಳು, ಧರ್ಮಗಳ ಬಗ್ಗೆ ತಿಳಿಯುತ್ತವೆ. ಆದ್ದರಿಂದ ಅವುಗಳಿಗೆ ಅನುಗುಣವಾಗಿ ಜೀವಿಸುತ್ತಾರೆ.

'ಜ್ಞಾನ' ಹೆಚ್ಚುತ್ತಾ ಹೋದಂತೆ ಕಣ್ಣಿಗೆ ಕಾಣಿಸುವವುಗಳ ಬಗ್ಗೆ ಅಷ್ಟೇಅಲ್ಲದೇ ಕಾಣಿಸದಂತಹವುಗಳ ಬಗ್ಗೆ ತಿಳುವಳಿಕೆ ಉಂಟಾಗುತ್ತದೆ, ಸೃಷ್ಟಿಯಲ್ಲಿನ ಬಹಳಷ್ಟು ವಿಷಯಗಳನ್ನು ತಿಳಿದುಕೊಳ್ಳುತ್ತಾರೆ. ಸೃಷ್ಟಿ ರಹಸ್ಯಗಳನ್ನು ತಿಳಿದುಕೊಳ್ಳುತ್ತಾರೆ. ಅದರಿಂದ ಮಾಡಬಾರದ ಕೆಲಸಗಳನ್ನು ಮಾಡುವುದಿಲ್ಲ. ಸೃಷ್ಟಿಯಲ್ಲಿ ಯಾವುದು ನಿತ್ಯ, ಯಾವುದು ಅನಿತ್ಯ ಎಂಬುದು ಅರ್ಥವಾಗುತ್ತಿರುತ್ತದೆ. ಅದರಿಂದಾಗಿ ಅನಿತ್ಯವಾದವುಗಳಿಗೆ ಪ್ರಾಮುಖ್ಯತೆ ಕೊಡುವುದಿಲ್ಲ, ನಿತ್ಯವಾದದ್ದಕ್ಕೆ ಪ್ರಾಮುಖ್ಯತೆ ಕೊಡುತ್ತಾರೆ ಜೀವನವನ್ನು ವ್ಯರ್ಥ ಮಾಡಿಕೊಳ್ಳುವುದಿಲ್ಲ. ಅಂತಹ 'ಜ್ಞಾನ' ಧ್ಯಾನದಿಂದಲೇ ಬರುತ್ತದೆ ಎಂದು ಪತ್ರೀಜಿ

ಹೇಳಿದ್ದಾರೆ, ಆದ್ದರಿಂದ ಅಂತಹ ಜ್ಞಾನ ಕಣ್ಣುಗಳನ್ನು ಮುಚ್ಚಿಕೊಂಡು ಕುಳಿತುಕೊಳ್ಳುವುದರಿಂದ ಹೇಗೆ ಬರುತ್ತದೆಯೋ? ತಿಳಿದುಕೊಳ್ಳೋಣ.

ಒಂದು ವಿಧದಲ್ಲಿ ಜ್ಞಾನ ಹೊಂದುವುದು ಅಷ್ಟು ಸುಲಭವಾದ ವಿಷಯವಲ್ಲ. ಸುಮ್ಮನೆ ಧ್ಯಾನದಲ್ಲಿ ಕೆಲವು ಗಂಟೆಗಳು ಕಣ್ಣುಗಳನ್ನು ಮುಚ್ಚಿಕೊಂಡು ಕುಳಿತುಕೊಂಡ ಮಾತ್ರಕ್ಕೆ ಜ್ಞಾನ ಉಂಟಾಗುವುದಿಲ್ಲ, ಧ್ಯಾನ ಪ್ರಾರಂಭಿಸಿದ ನಂತರ ಜ್ಞಾನ ಹೊಂದುವುದರೊಳಗೆ ಆಂತರಿಕವಾಗಿ ಮನಸ್ಸಿನಲ್ಲಿ ಬಹಳಷ್ಟು ಬದಲಾವಣೆಗಳು ಆಗುತ್ತವೆ, ಬಹಳಷ್ಟು ಪರಿವರ್ತನೆ ಉಂಟಾಗುತ್ತದೆ, ಬಹಳಷ್ಟು ಅಡ್ಡಿ–ಆತಂಕಗಳು ಏರ್ಪಡುತ್ತವೆ. ಅವೆಲ್ಲವುಗಳನ್ನು ಮೆಟ್ಟಿ ನಿಂತಾಗಲೇ ಜ್ಞಾನವನ್ನು ಹೊಂದುವ ಅವಕಾಶವಿದೆ.

ಒಂದು ವೇಳೆ ಇವೆಲ್ಲವುಗಳನ್ನು ಮೆಟ್ಟಿನಿಂತು ಕಷ್ಟಪಟ್ಟು ಸಾಧನೆ ಮಾಡಿ ಸ್ವಲ್ಪ ಪ್ರಮಾಣದ ಜ್ಞಾನವನ್ನು ಸಂಪಾದಿಸಿದರೂ! ಸ್ವಲ್ಪ ಅಜಾಗ್ರತೆಯಿಂದ ಚಿಕ್ಕ ತಪ್ಪು ಮಾಡಿದರೂ, ಸಂಪಾದಿಸಿಕೊಂಡ ಶಕ್ತಿ, ಜ್ಞಾನವನ್ನು ಕಳೆದುಕೊಳ್ಳಬೇಕಾಗುತ್ತದೆ. ಮತ್ತೇ ಮೊದಲಿಗೆ ಬರುವ ಅವಕಾಶ ಇರುತ್ತದೆ. ಅದಕ್ಕಾಗಿಯೇ 'ಓಷೋ' ಮಹಾಶಯ ಹೇಳುತ್ತಾರೆ. ಬೆಟ್ಟವನ್ನು ಹತ್ತುತ್ತಿರುವಾಗ ಶಿಖರವನ್ನು ಸೇರಿಕೊಳ್ಳುವುದರೊಳಗೆ ಎಲ್ಲಿ ಕಾಲು ಜಾರಿದರೂ ಕೊನೆಗೆ ಶಿಖರದ ಹತ್ತಿರ ಕಾಲು ಜಾರಿದರೂ ಒಂದು ಅಡಿ ಮಾತ್ರ ಕೆಳಗೆ ಇರುವುದಿಲ್ಲ ಬೆಟ್ಟದ ಮೊದಲಿಗೆ ಜಾರಿಬಿಡುತ್ತಾರೆ ಅಂದರೆ ಪ್ರಾರಂಭದ ಸ್ಥಾನಕ್ಕೆ ಸೇರಿಕೊಳ್ಳುತ್ತಾರೆ. ಮಾಡಿದ ಪ್ರಯತ್ನ, ಪಟ್ಟ ಶ್ರಮ ಎಲ್ಲವೂ ವ್ಯರ್ಥವಾಗುತ್ತದೆ. ಆದ್ದರಿಂದ ಜ್ಞಾನ ಹೊಂದುವ ಮಾರ್ಗದಲ್ಲಿ ಹಾಕುವ ಪ್ರತಿ ಹೆಜ್ಜೆಯನ್ನು ಬಹಳ ಜಾಗರೂಕತೆಯಿಂದ ಹಾಕಬೇಕು ಎನ್ನುತ್ತಾರೆ. ಮೇಲಕ್ಕೆ ಹೋಗದಿದ್ದರೂ ಪರವಾಗಿಲ್ಲ ಅಜಾಗ್ರತೆಯಿಂದ ಅಂದರೆ ತಪ್ಪುಗಳನ್ನು ಮಾಡುವುದರಿಂದ ಕೆಳಗೆ ಜಾರಿ ಮೊದಲಿಗೆ ಬರದಂತೆ ಇದ್ದರೆ ಸಾಕು ಎಂದು ಹೇಳುತ್ತಾರೆ. ಆದ್ದರಿಂದ ಅವೆಲ್ಲವುಗಳ ಬಗ್ಗೆ ವಿವರವಾಗಿ ತಿಳಿದುಕೊಳ್ಳೋಣ.

ಧ್ಯಾನದಲ್ಲಿ ಏನಾಗುತ್ತದೆ?

ಸ್ವಾಭಾವಿಕವಾಗಿ ಮನಸ್ಸು ನಾಲ್ಕು ರೀತಿಯ ಗುಣಗಳನ್ನು ಹೊಂದಿರುತ್ತದೆ. ೧. ತಮೋಗುಣ. ೨. ರಜೋಗುಣ. ೩. ಸಾತ್ವಿಕ ಗುಣ. ೪. ನಿರ್ಗುಣ.

ಇಲ್ಲಿ ತಮೋಗುಣ, ರಜೋಗುಣಗಳೇ ಅಶುದ್ಧ(ಮಲಿನ) ಗುಣಗಳು ತಮೋಗುಣ ಎಲ್ಲವುಗಳಿಗಿಂತ ಅಶುದ್ಧ ಗುಣ. ರಜೋಗುಣ ತಮೋಗುಣಕ್ಕಿಂತ ಸ್ವಲ್ಪ ಶುದ್ಧವಾದ ಗುಣವಾಗಿದ್ದರು ಸಹ ಅದು ಮಲಿನ ಗುಣವೇ. ಸಾತ್ವಿಕ ಗುಣವೇ ಶುದ್ಧ ಗುಣ, ಮನಸ್ಸು ಶೂನ್ಯವಾಗುವುದನ್ನೇ ನಿರ್ಗುಣ ಎನ್ನುತ್ತಾರೆ.

ನಿರ್ಗುಣ ಸ್ಥಿತಿಯಲ್ಲಿ ಮನಸ್ಸು ಇರುತ್ತದೆ ಆದರೆ ಅದರ ಪ್ರಭಾವ ಏನೂ ಇರುವುದಿಲ್ಲ. ಈ ವಿಧವಾದ ಮನಸ್ಸನ್ನು ರಮಣಮಹರ್ಷಿ ಅವರು ಸುಟ್ಟುಹೋದ ಹಗ್ಗಕ್ಕೆ ಹೋಲಿಸುತ್ತಾರೆ. ಸುಟ್ಟುಹೋದ ಹಗ್ಗ ನೋಡಲು ಹಗ್ಗದಂತೆ ಕಾಣಿಸುತ್ತದೆ ಆದರೆ ಅದಕ್ಕೆ ಸ್ವಲ್ಪವೂ ಹಿಡಿತವಿರುವುದಿಲ್ಲ. ನಿರ್ಗುಣ ಸ್ಥಿತಿಯಲ್ಲಿರುವವರ ಮನಸ್ಸು ಸಹ ಅದೇರೀತಿ ಇರುತ್ತದೆ.

ಸಹಜವಾಗಿ ಧ್ಯಾನ ಮಾಡದವರ ಮನಸ್ಸು ತಮೋ, ರಜೋ ಗುಣಗಳಿಂದ ತುಂಬಿರುತ್ತದೆ. ಅಂದರೆ ಮಲಿನವಾಗಿರುತ್ತದೆ. ಅಂದರೆ ಕೆಟ್ಟದಾಗಿರುತ್ತದೆ. ಅದರಿಂದಾಗಿ ಕೆಟ್ಟ ಕೆಲಸಗಳನ್ನೇ ಮಾಡುತ್ತಾರೆ. ಕಷ್ಟಗಳನ್ನು ತಂದುಕೊಳ್ಳುತ್ತಾರೆ, ಮನಸ್ಸಿನಲ್ಲಿರುವ ಆ ಕೆಟ್ಟದ್ದನ್ನು ಹೋಗಲಾಡಿಸಿಕೊಳ್ಳದವರೆಗೂ ಅವರು ಮಾಡುವ ಕೆಲಸಗಳಿಂದ ಅವರಿಗೆ ಕಷ್ಟಗಳು ಬರುತ್ತಲೇ ಇರುತ್ತವೆ. ಅನುಭವಿಸುತ್ತಲೇ ಇರುತ್ತಾರೆ, ಜೀವನಪರ್ಯಂತ ಎಷ್ಟು ಪ್ರಯತ್ನಗಳನ್ನು ಮಾಡಿದರು ಕಷ್ಟಗಳು ತಪ್ಪುವುದಿಲ್ಲ. ಅಂತಹವರು ಕಷ್ಟಗಳಿಂದ ಹೊರಬರಬೇಕೆಂದರೆ ಧ್ಯಾನ ಒಂದೇ ಮಾರ್ಗ ಕಾರಣ ಧ್ಯಾನದಿಂದ ಮಾತ್ರವೇ ಗುಣ ಬದಲಾಗುತ್ತದೆ. ಮನಸ್ಸು ಶುದ್ಧವಾಗುತ್ತದೆ ಆದ್ದರಿಂದ ಮೊದಲಿಗೆ ಧ್ಯಾನದಲ್ಲಿ ಮನಸ್ಸು ಹೇಗೆ ಶುದ್ಧವಾಗುತ್ತದೆಯೋ ಅಂದರೆ ಗುಣಗಳು ಹೇಗೆ ಬದಲಾಗುತ್ತವೆಯೋ ತಿಳಿದುಕೊಳ್ಳೋಣ.

ಚಂಚಲ ಮನಸ್ಸು ನಿಶ್ಚಲ

ಧ್ಯಾನವನ್ನು ಪ್ರಾರಂಭಿಸುವುದಕ್ಕಿಂಥ ಮುಂಚೆ ಯಾರ ಮನಸ್ಸಾದರೂ ಚಂಚಲವಾಗಿ ಇರುತ್ತದೆ. ಮನಸ್ಸು ಮಲಿನವಾಗಿ, ಚಂಚಲವಾಗಿ ಇರುವುದಕ್ಕೆ ಕಾರಣ ಅವರು ತೆಗೆದುಕೊಳ್ಳುವ ಆಹಾರ, ಅವರ ವ್ಯವಹಾರಗಳು.

ಮನಸ್ಸು ಚಂಚಲವಾಗಿ ಇರುತ್ತದೆ ಎಂಬುದು ತಿಳಿಯಬೇಕೆಂದರೆ ಒಂದು ಸಾರಿ ಕಣ್ಣುಗಳನ್ನು ಮುಚ್ಚಿಕೊಂಡರೆ ತಿಳಿಯುತ್ತದೆ. ಕಣ್ಣುಗಳನ್ನು ಮುಚ್ಚಿಕೊಂಡ ತಕ್ಷಣವೇ ವಿಧವಿಧವಾದ ಆಲೋಚನೆಗಳು ಬರುತ್ತವೆ ಹಾಗೆ ಯಾವಾಗಲೂ ಒಂದೇ ಆಲೋಚನೆ ಇರುವುದಿಲ್ಲ ಒಂದು ಸಾರಿ ಭೂತಕಾಲದ(ಹಿಂದಿನ) ಬಗ್ಗೆ ಆಲೋಚಿಸಿದರೆ! ತಕ್ಷಣವೇ ಭವಿಷ್ಯತ್ತಿಗೆ ಸಂಬಂಧಿಸಿದ ಆಲೋಚನೆಗಳು.... ಇಲ್ಲದೆ ಹೋದರೆ ಸಂಸಾರದ ಬಗ್ಗೆ.... ಆನಂತರ ಸಂಪಾದನೆಯ ಬಗ್ಗೆ.... ಹೀಗೆ ಆಲೋಚನೆಗಳು ವಿಧವಿಧವಾಗಿ ಬದಲಾಗುತ್ತಿರುತ್ತವೆ. ಒಂದು ರೀತಿಯಲ್ಲಿ ಮಂಗ ಒಂದು ಕೊಂಬೆಯಿಂದ ಇನ್ನೊಂದು ಕೊಂಬೆ ಮೇಲೆ, ಆ ಕೊಂಬೆಯಿಂದ ಇನ್ನೊಂದು ಕೊಂಬೆಗೆ ಯಾವ ರೀತಿ ಎಗರುತ್ತಾ ಇರುತ್ತದೆಯೋ.... ಅದೇರೀತಿ ಮನಸ್ಸಿನಲ್ಲಿರುವ ಆಲೋಚನೆಗಳು ಬದಲಾಗುತ್ತಿರುತ್ತವೆ. ಅಂದರೆ ಮನಸ್ಸು ಚಂಚಲವಾಗಿದೆ ಎಂಬುದನ್ನು ನಾವು ತಿಳಿದುಕೊಳ್ಳಬಹುದು.

ಅದೇರೀತಿ ಮನಸ್ಸು ಮಲಿನವಾಗಿದೆಯೇ? ಇಲ್ಲವೇ? ಎಂಬುದನ್ನು ಅವರು ಮಾಡುವ ಕೆಲಸಗಳನ್ನು ಆಧರಿಸಿ, ಆಲೋಚನಾ ವಿಧಾನವನ್ನು ಆಧರಿಸಿ ತಿಳಿದುಕೊಳ್ಳಬಹುದು. ಸಹಜವಾಗಿ ಮಲಿನವಾದ ಮನಸ್ಸನ್ನು ಉಳ್ಳವರು ಸ್ವಾರ್ಥದಿಂದ ವರ್ತಿಸುತ್ತಾರೆ. ಸದಾ ಅವರ ಕುಟುಂಬದ ಲಾಭಗಳನ್ನು ನೋಡಿಕೊಳ್ಳುತ್ತಾರೆ. ಇತರರ ಬಗ್ಗೆ ಆಲೋಚನೆ ಮಾಡುವುದಿಲ್ಲ. ತಮ್ಮ ಆನಂದಕ್ಕೋಸ್ಕರ ಇತರರನ್ನು ಕಷ್ಟಕ್ಕೊಳಪಡಿಸುವುದು, ನಷ್ಟಕ್ಕೊಳಪಡಿಸುವುದು, ಮೋಸಗೊಳಿಸುವುದು ಇಂತಹವುಗಳನ್ನು ಮಾಡುತ್ತಿರುತ್ತಾರೆ. ಇತರರಿಗೆ ಏನಾದರೂ, ಇತರ ಪ್ರಾಣಿಗಳಿಗೆ, ಪಕ್ಷಿಗಳಿಗೆ ಏನಾದರೂ ಸಹ ಹಿಡಿಸಿಕೊಳ್ಳುವುದಿಲ್ಲ. ಮೇಲಾಗಿ ಅವುಗಳನ್ನು ತಮ್ಮ ಆನಂದಕ್ಕೆ ಉಪಯೋಗಿಸಿಕೊಳ್ಳುತ್ತಾರೆ. ಅವುಗಳ ನಡುವೆ ಪಂದ್ಯಗಳನ್ನು ಇಡುತ್ತಾರೆ,

ಬಂಧಿಸುತ್ತಾರೆ, ಹಿಂಸಿಸುತ್ತಾರೆ, ಸಾಯಿಸುತ್ತಾರೆ, ಭಕ್ಷಿಸುತ್ತಾರೆ (ತಿನ್ನುತ್ತಾರೆ). ಇತರರ ಬಗ್ಗೆ, ಇತರ ಕುಲಗಳ ಬಗ್ಗೆ, ಮತಗಳ, ಬಗ್ಗೆ, ಪ್ರಾಂತ್ಯಗಳ ಬಗ್ಗೆ ದ್ವೇಷವನ್ನು ಪ್ರದರ್ಶಿಸುತ್ತಿರುತ್ತಾರೆ. ಬೇರೆಯವರಿಗೆ ಇರುವಂತಹವುಗಳನ್ನು ನೋಡಿ ಅಸೂಯೆ ಪಡುತ್ತಾರೆ. ಇಂತಹವೆಲ್ಲಾ ಮಲಿನ ಗುಣದ ಲಕ್ಷಣಗಳು.

ಹೀಗೆ ಮಲಿನವಾಗಿ, ಚಂಚಲವಾಗಿ ಇರುವ ಮನಸ್ಸನ್ನು 'ಧ್ಯಾನ'ದಲ್ಲಿ ಅಂದರೆ ಕಣ್ಣುಗಳನ್ನು ಮುಚ್ಚಿಕೊಂಡ ತಕ್ಷಣವೇ ಬರುವ ಆಲೋಚನೆಗಳನ್ನು ಮರಳಿಸಿ–ಮರು ನಿರ್ದೇಶನ ಮಾಡಿ ಶ್ವಾಸದ ಮೇಲೆ ಇರಿಸಬೇಕು ಅಂದರೆ ಉಸಿರನ್ನು ಗಮನಿಸಬೇಕು. ಹಾಗೆ ಶ್ವಾಸವನ್ನು ಗಮನಿಸುತ್ತಿದ್ದರೂ... ಮತ್ತೆ ಮನಸ್ಸು ಆಲೋಚನೆಗಳ ಒಳಗೆ ಹೋಗುತ್ತದೆ. ಆದರೂ ಸರಿ ಪುನಃ ಶ್ವಾಸದಮೇಲೆ ತೆಗೆದುಕೊಂಡು ಬರಬೇಕು. ಹೀಗೆ ಮಾಡುತ್ತಾ... ಮಾಡುತ್ತಾ... ಆಲೋಚನೆಗಳು ಕ್ರಮೇಣ ಕಡಿಮೆಯಾಗುತ್ತಾ ಬರುತ್ತವೆ. ಆಲೋಚನೆಗಳು ಹೀಗೆ ಕಡಿಮೆಯಾಗುತ್ತಾ... ಕಡಿಮೆಯಾಗುತ್ತಾ ನಿಧಾನವಾಗಿ ಆಲೋಚನೆಗಳೆಲ್ಲಾ ನಿಂತುಹೋಗುತ್ತವೆ. ಅದೇ ಧ್ಯಾನಸ್ಥಿತಿ. ಈ ಸ್ಥಿತಿಯಲ್ಲಿ ಚಂಚಲವಾಗಿರುವ ಮನಸ್ಸು ನಿಶ್ಚಲವಾದಂತೆ ಲೆಕ್ಕ. ಹೀಗೆ ಧ್ಯಾನದಲ್ಲಿ ಮೊದಲ ಸ್ಥಿತಿಯಲ್ಲಿ ಮನಸ್ಸಿನಲ್ಲಿ ಉಂಟಾಗುವ ಬದಲಾವಣೆ ಇದೇ. ಹೀಗೆ ಚಂಚಲ ಮನಸ್ಸು ನಿಶ್ಚಲವಾದಾಗ ಅಂದರೆ ಆಲೋಚನೆಗಳು ನಿಂತು ಹೋದಾಗ ನಮಗೆ ಬಹಳಷ್ಟು ಲಾಭಗಳು ಉಂಟಾಗುತ್ತವೆ. ಮುಖ್ಯವಾಗಿ ಅಪಾರವಾದ ಪ್ರಾಣಶಕ್ತಿ ಲಭಿಸುತ್ತದೆ, ಈ ಶಕ್ತಿಯಿಂದ ಬಹಳಷ್ಟು ಲಾಭಗಳು ಉಂಟಾಗುತ್ತವೆ. ಪ್ರಾಣಶಕ್ತಿ ಶರೀರದಲ್ಲಿ ಪ್ರವಹಿಸುತ್ತಿರುವಾಗ ಶರೀರದೊಳಗಿನ ನಾಡೀಮಂಡಲ ಶುದ್ಧಿಯಾಗುತ್ತದೆ. ಇದರ ಮೂಲಕ ಶರೀರದೊಳಗಿನ ಕೆಲವು ರೋಗಗಳು ಗುಣವಾಗುತ್ತವೆ ಅಷ್ಟೇಅಲ್ಲ ಶರೀರಕ್ಕೆ ಸ್ವಲ್ಪ ಪ್ರಾಣಶಕ್ತಿ ಲಭಿಸುವುದರಿಂದ ಶಕ್ತಿಯುತವಾಗುತ್ತದೆ. ಮೊದಲಿಗಿಂತ ಕೆಲಸಗಳನ್ನು ಚಟುವಟಿಕೆಯಿಂದ ಮಾಡಿಕೊಳ್ಳಬಲ್ಲವರಾಗುತ್ತೇವೆ. ಆಯಾಸ ಇರುವುದಿಲ್ಲ.

ಅಷ್ಟೇಅಲ್ಲ ಮನಸ್ಸು ನಿಶ್ಚಲವಾಗುವುದರಿಂದ ಅಂದರೆ ಶಾಂತಿಸುವುದರಿಂದ ಮಾನಸಿಕ ಪ್ರಶಾಂತತೆಯನ್ನು ಹೊಂದುತ್ತಾರೆ. ಒತ್ತಡಕ್ಕೆ ಒಳಗಾದವರು ಒತ್ತಡದಿಂದ ಹೊರಬರುತ್ತಾರೆ. ಮನಸ್ಸು ನಿಶ್ಚಲವಾಗುವುದರಿಂದ ಮನಸ್ಸನ್ನು ಒಂದರ ಮೇಲೆ ಕೇಂದ್ರೀಕರಿಸಬಲ್ಲ ಶಕ್ತಿ ಲಭಿಸುತ್ತದೆ. ಅಂದರೆ ಏಕಾಗ್ರತೆ ಉಂಟಾಗುತ್ತದೆ, ಇದರಿಂದ ಯಾವ ಕೆಲಸವನ್ನಾದರೂ ನೈಪುಣ್ಯತೆಯಿಂದ ಮಾಡಿಕೊಳ್ಳಬಲ್ಲವರಾಗುತ್ತಾರೆ. ಇದರಿಂದಾಗಿ ಯಾವ ಕ್ಷೇತ್ರದಲ್ಲಾದರೂ ಮಿಂಚಲು ಸಾಧ್ಯವಾಗುತ್ತದೆ.

ಹೆಸರುವಾಸಿಯಾಗುತ್ತಾರೆ. ಲಾಭವನ್ನು ಹೊಂದುತ್ತಾರೆ. ಅಷ್ಟೇಅಲ್ಲ ಮನಸ್ಸು ನಿಶ್ಚಲವಾಯಿತೆಂದರೆ ಮನಸ್ಸನ್ನು ಹತೋಟಿಗೆ ತಂದುಕೊಂಡಂತೆಯೇ. ಹೀಗೆ ಮನಸ್ಸನ್ನು ಹತೋಟಿಗೆ ತಂದುಕೊಂಡವರು ಅವರ ಕೋರಿಕೆಗಳನ್ನು, ಕೋಪವನ್ನು ಸ್ವಲ್ಪಮಟ್ಟಿಗೆ ಹತೋಟಿಯಲ್ಲಿ ಇಟ್ಟುಕೊಳ್ಳುತ್ತಾರೆ. ಇದರ ಮುಖಾಂತರ ಜೀವನದಲ್ಲಿ ಕೆಲವು ಲಾಭಗಳನ್ನು ಹೊಂದಬಲ್ಲರು.

ಹೀಗೆ ಮನಸ್ಸನ್ನು ನಿಶ್ಚಲ ಮಾಡಿಕೊಂಡವರು ವರ್ತಮಾನದಲ್ಲಿ ಬದುಕುತ್ತಾರೆ. ಇದರಿಂದ ಸ್ವಲ್ಪಮಟ್ಟಿಗೆ ದುಃಖವನ್ನು ಮೆಟ್ಟಿನಿಲ್ಲುತ್ತಾರೆ. ನಡೆದುಹೋದ ವಿಷಯಗಳ ಬಗ್ಗೆ, ಭವಿಷ್ಯತ್ತಿನಲ್ಲಿ ನಡೆಯಲಿರುವ ವಿಷಯಗಳ ಬಗ್ಗೆ ಬಹಳಷ್ಟು ಆಲೋಚಿಸುವುದಿಲ್ಲ, ನೋವು ಪಡುವುದಿಲ್ಲ. ಸಹಜವಾಗಿ ವರ್ತಮಾನದಲ್ಲಿ ಜೀವಿಸದೇ ಇರುವುದರಿಂದಲೇ ಮಾನವರು ಬಹಳ ದುಃಖ ಪಡುತ್ತಿದ್ದಾರೆ.

ಹೀಗೆ ಈ ಸ್ಥಿತಿಗೆ ಸೇರಿಕೊಂಡವರು ಅಂದರೆ ಮನಸ್ಸನ್ನು ನಿಶ್ಚಲ ಮಾಡಿಕೊಂಡಂತಹವರು ಜೀವನದಲ್ಲಿ ಕೆಲವು ಲಾಭಗಳನ್ನು ಹೊಂದಬಲ್ಲರು. ಆದರೆ ಇಲ್ಲಿ ಮನಸ್ಸು ನಿಶ್ಚಲವಾಯಿತೇ ಹೊರತು ನಿರ್ಮಲವಾಗಲಿಲ್ಲ. ಅಂದರೆ ಶುದ್ಧಿಯಾಗಲಿಲ್ಲ. ಅಂದರೆ ಗುಣ ಬದಲಾಗಲಿಲ್ಲ ಆದ್ದರಿಂದ ಅವರ ಪ್ರವರ್ತನೆಯಲ್ಲಿ ಹೇಳಿಕೊಳ್ಳುವಷ್ಟು ಬದಲಾವಣೆ ಕಾಣಿಸುವುದಿಲ್ಲ. ಮುಂಚಿನಂತೆಯೇ ಅವರ ಪ್ರವರ್ತನೆ, ಕೆಲಸಗಳು ಇರುತ್ತವೆ. ಮುಂಚಿನಂತೆಯೇ ತಪ್ಪುಗಳನ್ನು ಮಾಡುತ್ತಿರುತ್ತಾರೆ. ಸ್ವಾರ್ಥವನ್ನು ಪ್ರದರ್ಶಿಸುತ್ತಿರುತ್ತಾರೆ.

ಬಹಳಷ್ಟು ಜನರ ಸಾಧನೆ ಪ್ರಾಥಮಿಕ ಸ್ಥಿತಿಯಲ್ಲಿಯೇ ನಿಂತು ಹೋಗುತ್ತದೆ. ಈ ಸ್ಥಿತಿಯಲ್ಲಿ ಅವರು ಹೊಂದುವ ಕಡಿಮೆ ಲಾಭಗಳನ್ನು ನೋಡಿಕೊಂಡು ಅವರು ಮಾಡುತ್ತಿರುವ ಸಾಧನೆ ಬಹಳ ಉತ್ತಮವಾಗಿದೆ ಎಂದು ಭಾವಿಸುತ್ತಾರೆ. ಆದರಿಂದ ಸಾಧನೆಯನ್ನು ಹಾಗೆಯೇ ಮುಂದುವರಿಸುತ್ತಾರೆ ಇಲ್ಲವಾದರೆ ನಿಲ್ಲಿಸಿಬಿಡುತ್ತಾರೆ. ಕಾರಣ ಅವರು ಹೊಂದಿದ ಸ್ವಲ್ಪ ಮಟ್ಟದ ಲಾಭಗಳನ್ನೇ ಉತ್ತಮವಾದ ಲಾಭಗಳೆಂದು ಭಾವಿಸುತ್ತಾರೆ. ಆದರೆ ಅವರು ಮಾಡುತ್ತಿರುವ ಸಾಧನೆ ಅವರ ಗುಣದಲ್ಲಿ ಬದಲಾವಣೆಯನ್ನು ತೆಗೆದುಕೊಂಡು ಬಂದಿಲ್ಲವೆಂಬ ವಿಷಯ ಅವರಿಗೆ ತಿಳಿಯದು. ಬದಲಾಗಬೇಕು ಎಂದರೆ ಸಾಧನೆಯನ್ನು ಬಹಳಷ್ಟು ತೀವ್ರಗೊಳಿಸಬೇಕೆಂದು, ಅದರೊಂದಿಗೆ ಆಹಾರ ನಿಯಮಗಳನ್ನು ಕಠಿಣವಾಗಿ ಪಾಲಿಸಬೇಕೆಂಬ ಅರಿವು

ಇರುವುದಿಲ್ಲ. ಆದ್ದರಿಂದ ಈ ರೀತಿ ಧ್ಯಾನ ಮಾಡುವವರ ಮನಸ್ಸು ನಿಶ್ಚಲವಾಗುತ್ತದೆಯೇ ಹೊರತು ನಿರ್ಮಲವಾಗುವುದಿಲ್ಲ ಅಂದರೆ ಶುದ್ಧಿಯಾಗುವುದಿಲ್ಲ.

ಸಹಜವಾಗಿ ಮನಸ್ಸು ಮಲಿನವಾಗಿ ಅಂದರೆ ಕೆಟ್ಟದಾಗಿ ಇದ್ದರೆ ಕೆಟ್ಟ ಕೆಲಸಗಳನ್ನು ಮಾಡುತ್ತಾರೆ. ಧರ್ಮದಿಂದ ಪ್ರವರ್ತಿಸುವುದಿಲ್ಲ. ಸೃಷ್ಟಿಗೆ ವಿರುದ್ಧವಾದ ಕೆಲಸಗಳನ್ನು ಮಾಡುತ್ತಾರೆ. ಸ್ವಾರ್ಥದಿಂದ ಪ್ರವರ್ತಿಸುತ್ತಾರೆ. ಅವರ ಮತ್ತು ಅವರಿಗೆ ಸಂಬಂಧಿಸಿದವರ ಕ್ಷೇಮಕ್ಕೋಸ್ಕರವೇ ಪ್ರಯತ್ನಿಸುತ್ತಾರೆ. ಅವರ ಆನಂದಕ್ಕೋಸ್ಕರ ಇತರ ಪ್ರಾಣಿಗಳನ್ನು ಹಿಂಸಿಸುತ್ತಿರುತ್ತಾರೆ. ಎಷ್ಟೇ ಇದ್ದರೂ ತೃಪ್ತಿ ಇರುವುದಿಲ್ಲ. ಏನು ನೋಡಿದರೂ ಆಸೆ ಪಡುತ್ತಾರೆ. ಬೇರೆಯವರಿಗೆ ಇರುವಂತಹವುಗಳನ್ನು ನೋಡಿ ಅಸೂಯೆ ಪಡುತ್ತಾರೆ. ನಮ್ಮ ಹತ್ತಿರ ಇಲ್ಲವೆಂದು ಸಂಕಟ ಪಡುತ್ತಾರೆ. ಸಂಪಾದಿಸುವುದಕ್ಕೋಸ್ಕರ ತಪ್ಪುಗಳು, ಪಾಪಗಳನ್ನು ಮಾಡುತ್ತಾರೆ. ಅಧರ್ಮದಿಂದ ಪ್ರವರ್ತಿಸುತ್ತಾರೆ.

ಮನಸ್ಸಿನ ಮಲಿನವನ್ನು ಆಧರಿಸಿ ಚಟಗಳಿಗೆ ಗುಲಾಮರಾಗುತ್ತಾರೆ. ಕುಡಿಯುವುದು, ಜೂಜು, ವೇಶ್ಯಾವಾಟಿಕೆ, ಅಮಲು ಪದಾರ್ಥಗಳನ್ನು ಸೇವಿಸುವುದು, ಬೆಟ್ಟಿಂಗ್, ಧೂಮಪಾನದಂತಹ ಅಭ್ಯಾಸಗಳಿಗೆ ಒಳಗಾಗುತ್ತಾರೆ. ಇವುಗಳಿಂದಾಗಿ ಆರ್ಥಿಕವಾಗಿ ಅಷ್ಟೇಅಲ್ಲದೇ, ಆರೋಗ್ಯಪರವಾಗಿ ಸಹ ನಷ್ಟ ಹೊಂದುತ್ತಾರೆ.

ಇಂತಹವರಿಗೆ ನಕಾರಾತ್ಮಕವಾದ (ನೆಗೆಟಿವ್ ಥಾಟ್ಸ್), ವಿನಾಶಕರವಾದ (ಡಿಜಾಸ್ಟಸ್ ಥಾಟ್ಸ್) ಆಲೋಚನೆಗಳು ಇರುತ್ತವೆ ಎಲ್ಲದಕ್ಕೂ ಭಯಪಡುತ್ತಾರೆ, ಯಾವುದೇ ಕೆಲಸವನ್ನು ಮಾಡಲು ಹಿಂಜರಿಯುತ್ತಾರೆ. ನಕಾರಾತ್ಮಕ ಫಲಿತಾಂಶಗಳು ಉಂಟಾಗುತ್ತವೆಯೇನೋ ಎಂದು ಭಯಪಡುತ್ತಾರೆ. ಇವರಿಗೆ ತ್ರಿಕರಣ ಶುದ್ಧಿ ಇರುವುದಿಲ್ಲ. ಒಂದನ್ನು ಆಲೋಚಿಸಿ ಇನ್ನೊಂದನ್ನು ಹೇಳುತ್ತಾರೆ, ಮತ್ತೊಂದನ್ನು ಮಾಡುತ್ತಾರೆ.

ಇವರು ತಮಗೆ ಇರುವಂತಹವುಗಳನ್ನು ನೋಡಿಕೊಂಡು ಗರ್ವಪಡುತ್ತಾರೆ ಅಹಂಕಾರದಿಂದ ಪ್ರವರ್ತಿಸುತ್ತಿರುತ್ತಾರೆ. ಎಲ್ಲರಿಗಿಂತಲೂ ನಾನೇ ಶ್ರೇಷ್ಠನಾಗಿರಬೇಕು ಎಂದುಕೊಳ್ಳುತ್ತಾರೆ, ಎಲ್ಲದರಲ್ಲಿಯೂ ಅಧಿಕವಾಗಿ ಇರಬೇಕೆಂದುಕೊಳ್ಳುತ್ತಾರೆ. ಇದೆಲ್ಲದಕ್ಕೂ ಕಾರಣ ಮಲಿನ ಗುಣಗಳೇ, ಮನಸ್ಸಿನೊಳಗಿನ ಕೆಟ್ಟದ್ದೇ ಇದಕ್ಕೆ ಕಾರಣ.

ಇಂತಹವರು ಒಳ್ಳೆಯದನ್ನು ಮಾಡಬೇಕೆಂದುಕೊಂಡರೂ ಮಾಡಲಾರರು. ತಮಗೇ ಎಲ್ಲವೂ ತಿಳಿದಿದೆ ಎಂದುಕೊಳ್ಳುತ್ತಾರೆ. ಬೇರೆಯವರು ಹೇಳಿದ್ದನ್ನು ಕೇಳುವುದಿಲ್ಲ,

ಮೂರ್ಖತನದಿಂದ ಪ್ರವರ್ತಿಸುತ್ತಾರೆ. ಸಹಜವಾಗಿ ಇಂತಹವರಿಗೆ ತಮೋ, ರಜೋಗುಣಗಳು ಇರುತ್ತವೆ. ಈ ತಮೋ, ರಜೋ ಗುಣಗಳು ಮಲಿನ ಗುಣಗಳು. ಇದರಲ್ಲಿ ತಮೋಗುಣವೇ ಬಹಳ ಮಲಿನ ಗುಣ.

ಇಂತಹ ಮಲಿನ ಮನಸ್ಸುಳ್ಳವರು ಸೃಷ್ಟಿಗೆ ವಿರುದ್ಧವಾದ ಕೆಲಸಗಳನ್ನು ಮಾಡುವುದರಿಂದ ಅಂದರೆ ತಪ್ಪುಗಳು, ಪಾಪಗಳು ಮಾಡುವುದರಿಂದ ಸಹಜವಾಗಿ ಅವರು ಮಾಡಿದ ಕರ್ಮಗಳಿಗೆ ಫಲಿತಾಂಶವನ್ನು ಕಷ್ಟಗಳ ರೂಪದಲ್ಲಿ ಅನುಭವಿಸುತ್ತಾರೆ. ಜೀವನದಲ್ಲಿ ಸಮಸ್ಯೆಗಳನ್ನು, ಈ ಕಷ್ಟಗಳು, ಸಮಸ್ಯೆಗಳನ್ನು ಹೋಗಲಾಡಿಸಿ ಕೊಳ್ಳುವುದಕ್ಕೋಸ್ಕರ ಪೂಜೆಗಳು, ಪ್ರಾರ್ಥನೆಗಳು, ನಮಾಜುಗಳು, ಭಜನೆಗಳು, ಆರಾಧನೆಗಳು ಇಂತಹವುಗಳನ್ನು ಹೆಚ್ಚಿನದಾಗಿ ಮಾಡುತ್ತಿರುತ್ತಾರೆ. ದೀಕ್ಷೆಗಳನ್ನು ತೆಗೆದುಕೊಳ್ಳುತ್ತಾರೆ, ಜಾತಕಗಳನ್ನು ತೋರಿಸಿಕೊಳ್ಳುತ್ತಾರೆ, ವಾಸ್ತು ಸರಿಪಡಿಸಿಕೊಳ್ಳುತ್ತಾರೆ. ದೀಕ್ಷಾ ಕಂಕಣಗಳು, ರಕ್ಷಾಕವಚಗಳನ್ನು ಧರಿಸುತ್ತಾರೆ, ಎಷ್ಟೇ ಮಾಡಿದರೂ ಕಷ್ಟಗಳು ಬರುತ್ತಲೇ ಇರುತ್ತವೆ. ಇದಕ್ಕೆ ಕಾರಣ ಅವರು ಮಾಡುತ್ತಿರುವ ಕರ್ಮಗಳೇ. ಇಂತಹ ಕರ್ಮಗಳನ್ನು ಮಾಡಲು ಕಾರಣ ಅವರ ಗುಣವೇ. ಗುಣದಲ್ಲಿ ಬದಲಾವಣೆ ಬರದೇ ಇರುವುದಕ್ಕೆ ಕಾರಣ ಸಾಧನೆಯಲ್ಲಿ ತೀವ್ರತೆಯ ಕೊರತೆ. ಇದಕ್ಕೆ ಕಾರಣ ಸಾಧನೆಯನ್ನು ಬದಲಾವಣೆಗೋಸ್ಕರ ಅಲ್ಲದೇ ಲಾಭಗಳಿಗೋಸ್ಕರ ಮಾಡುವುದೇ ಆಗಿದೆ.

ಹೀಗೆ ಜೀವನದಲ್ಲಿ ಲಾಭಗಳಿಗೋಸ್ಕರ ಧ್ಯಾನ ಮಾಡುವವರು, ಅವರು ಮಾಡುವ ಸಾಧನೆಯಿಂದ ಮನಸ್ಸು ನಿಶ್ಚಲವಾಗುತ್ತದೆಯೇ ಹೊರತು ನಿರ್ಮಲವಾಗುವುದಿಲ್ಲ ಅಂದರೆ ಶುದ್ಧಿಯಾಗುವುದಿಲ್ಲ. ಅಂದರೆ ಒಳ್ಳೆಯದಾಗಿ ಬದಲಾಗುವುದಿಲ್ಲ. ಹೀಗೆ ಎಷ್ಟು ಸಮಯ? ಅಂದರೆ ಎಷ್ಟು ವರ್ಷಗಳು ಧ್ಯಾನ ಮಾಡಿದರು ಇದೇ ಸ್ಥಿತಿಯಲ್ಲಿಯೇ ಇರುತ್ತಾರೆ. ಕಾರಣ ಬೆಳಗ್ಗೆ ಸ್ವಲ್ಪ ಹೊತ್ತು, ರಾತ್ರಿ ಸ್ವಲ್ಪ ಹೊತ್ತು ಧ್ಯಾನ ಮಾಡುವುದು, ಮಾಡುವ ಸಾಧನೆಯನ್ನು ಸಹ ಕ್ರಮವಾಗಿ ಮಾಡದೇ ಇರುವುದು, ಮಧ್ಯ ಮಧ್ಯದಲ್ಲಿ ಸೋಮಾರಿತನ ಬಂದು ಬಿಡುವುದು, ಸರಿಯಾದ ಆಹಾರ ನಿಯಮಗಳನ್ನು ಪಾಲಿಸದೇ ಇರುವುದರಿಂದ ಅವರು ಎಷ್ಟು ವರ್ಷಗಳು ಧ್ಯಾನ ಮಾಡಿದರೂ ಈ ಸ್ಥಿತಿಯನ್ನು ದಾಟುವುದಿಲ್ಲ.

ಇದರಿಂದಾಗಿ ಧ್ಯಾನದಲ್ಲಿ ಇವರಿಗೆ ಆರೋಗ್ಯದಂತಹ ಕೆಲವು ಲಾಭಗಳು ಉಂಟಾದರೂ ಮನಸ್ಸು ಶುದ್ಧಿ ಆಗದಿರುವುದರಿಂದ ಇವರ ಪ್ರವರ್ತನೆಯಲ್ಲಿ

ಬದಲಾವಣೆ ಕಾಣಿಸುವುದಿಲ್ಲ. ಆದ್ದರಿಂದ ನೀವು ಮಾಡುವ ಕರ್ಮಗಳಿಂದ ಕಷ್ಟಗಳು, ಸಮಸ್ಯೆಗಳು ಬರುತ್ತಲೇ ಇರುತ್ತವೆ ರೋಗಗಳು ಕಡಿಮೆಯಾದಂತೆ ಕಾಣಿಸಿದರೂ ಮತ್ತೆ ಮತ್ತೆ ಬರುತ್ತಲೇ ಇರುತ್ತವೆ ಮನಶಾಂತಿ ಲಭಿಸಿದಂತೆ ಕಾಣಿಸಿದರೂ ಮತ್ತೆ ಮತ್ತೆ ಸಮಸ್ಯೆಗಳು ಬರುವುದರಿಂದ ಅಶಾಂತಿಗೆ ಒಳಗಾಗುತ್ತಿರುತ್ತಾರೆ. ಒಂದು ವಿಧದಲ್ಲಿ ಧ್ಯಾನ ಮಾಡುವುದಕ್ಕಿಂತ ಮುಂಚೆ ಜೀವನ ಹೇಗಿರುತ್ತದೆಯೋ? ಇಷ್ಟು ದಿನಗಳು ಧ್ಯಾನ ಮಾಡಿದರೂ ಜೀವನ ಹಾಗೆಯೇ ಇರುತ್ತದೆ.

ಇವರು ಏನೆಂದುಕೊಳ್ಳುತ್ತಾರೆಂದರೆ ಬಹಳಷ್ಟು ಕಾಲದಿಂದ ಧ್ಯಾನ ಮಾಡುತ್ತಿದ್ದೇನೆ ಮತ್ತೆ ಮತ್ತೆ ರೋಗಗಳು ಬರುತ್ತಿವೆಯಲ್ಲ? ಪುನಹಃ ಸಮಸ್ಯೆಗಳು ಬರುತ್ತಿವೆಯಲ್ಲ? ಮತ್ತೆ ಮತ್ತೆ ಅಶಾಂತಿ ಉಂಟಾಗುತ್ತಿದೆಯಲ್ಲ? ಎಷ್ಟು ವರ್ಷಗಳಿಂದ ಧ್ಯಾನಮಾಡಿದರೂ ಜೀವನದಲ್ಲಿ ಯಾವುದೇ ವಿಧವಾದ ಬದಲಾವಣೆ ಉಂಟಾಗುತ್ತಿಲ್ಲವಲ್ಲ? ಎಂದು ಸಂಕಟ ಪಡುತ್ತಿರುತ್ತಾರೆ. ಧ್ಯಾನ ಮಾಡಿದರೆ ಎಲ್ಲವೂ ಹೋಗುತ್ತವೆ ಎನ್ನುತ್ತಾರಲ್ಲ? ಏಕೆ ಹೋಗುತ್ತಿಲ್ಲ? ಅಂದುಕೊಳ್ಳುತ್ತಾರೆ ಆಲೋಚನೆ ಮಾಡಿದರೆ ಅವರಿಗೆ ಇದೇನೂ ಅರ್ಥವಾಗುವುದಿಲ್ಲ.

ಹತ್ತಿರದವರು ಸಹ ನೀನು ಧ್ಯಾನ ಮಾಡುತ್ತಿದ್ದೀಯಾ? ಮತ್ತೆ ನಿನಗೆ ಪುನಹಃ ರೋಗ ಬಂದಿದೆಯಲ್ಲ? ನಿನಗೆ ಆಪರೇಷನ್ ಏಕೆ ಮಾಡಬೇಕಾಗಿ ಬಂತು? ಎಂದೂ ಸಹ ಕೇಳುತ್ತಾರೆ. ಇನ್ನು ಸ್ವಲ್ಪ ಜನ ನೀನು ಧ್ಯಾನ ಮಾಡುತ್ತಿದ್ದೀಯಲ್ಲವೇ? ನಿನ್ನ ಪ್ರವರ್ತನೆ ಅದೇರೀತಿ ಇದೆಯಲ್ಲಾ? ನೀನು ಏನು ಬದಲಾಗಿದ್ದೀಯಾ? ಎಂದು ಕೇಳುತ್ತಿರುತ್ತಾರೆ. ಇನ್ನು ಸ್ವಲ್ಪ ಜನ ಅವನು ಬಹಳ ವರ್ಷಗಳಿಂದ ಧ್ಯಾನ ಮಾಡುತ್ತಿದ್ದಾನೆ ಅಲ್ಲವೇ? ಅವನು ಹೀಗೇಕೆ ಪ್ರವರ್ತಿಸುತ್ತಿದ್ದಾನೆ? ಎಂದು ಕೇಳುವವರೂ ಸಹ ಇದ್ದಾರೆ.

ಇದೆಲ್ಲದಕ್ಕೂ ಕಾರಣ ಅವರು ಎಷ್ಟು ಸಮಯದಿಂದ ಧ್ಯಾನ ಮಾಡುತ್ತಿದ್ದರೂ ಪ್ರಾರಂಭದ ಸ್ಥಿತಿಯಲ್ಲಿಯೇ ಇದ್ದಾರೆ ಹೊರತು ನಂತರದ ಸ್ಥಿತಿಗೆ ಅವರು ಸೇರಿಕೊಳ್ಳುತ್ತಿಲ್ಲ. ಅಂದರೆ ಮನಸ್ಸನ್ನು ನಿಶ್ಚಲ ಮಾಡಿಕೊಂಡಿದ್ದಾರೆ ಹೊರತು, ನಿರ್ಮಲ ಮಾಡಿಕೊಂಡಿಲ್ಲ. ಅಂದರೆ ಮನಸ್ಸನ್ನು ಶುದ್ಧಿ ಮಾಡಿಕೊಂಡಿಲ್ಲ. ಅದಕ್ಕಾಗಿಯೇ ಅವರ ವರ್ತನೆಯಲ್ಲಿ ಬದಲಾವಣೆ ಕಾಣಿಸುತ್ತಿಲ್ಲ. ಎಂದಿನಂತೆಯೇ ತಪ್ಪುಗಳನ್ನು, ಪಾಪಗಳನ್ನು ಮಾಡುತ್ತಿದ್ದಾರೆ. ಇದರಿಂದಾಗಿ ಮತ್ತೆ ಮತ್ತೆ ರೋಗಗಳನ್ನು, ಸಮಸ್ಯೆಗಳನ್ನು ತಂದುಕೊಳ್ಳುತ್ತಿದ್ದಾರೆ.

ನಿಶ್ಚಲವಾದ ಮನಸ್ಸನ್ನು ನಿರ್ಮಲ ಮಾಡಿಕೊಳ್ಳಬೇಕು.

ಇಂತಹ ಪರಿಸ್ಥಿತಿಗಳನ್ನು ಮೆಟ್ಟಿನಿಲ್ಲಬೇಕೆಂದರೆ ಅವರು ಅಪಾರವಾದ ಧ್ಯಾನ ಸಾಧನೆಯನ್ನು ಮಾಡಬೇಕು. ಈ ಮಾರ್ಗದಲ್ಲಿ ಮತ್ತಷ್ಟು ಶ್ರಮ ಪಡಬೇಕು. ನಂತರದ ಸ್ಥಿತಿಗೆ ಸೇರಬೇಕು. ಎರಡನೆಯ ಸ್ಥಿತಿಗೆ ಸೇರಬೇಕು ಅಂದರೆ ನಿಶ್ಚಲವಾದ ಮನಸ್ಸನ್ನು ನಿರ್ಮಲ ಮಾಡಿಕೊಳ್ಳಬೇಕು ಅಂದರೆ ಶುದ್ಧಿಗೊಳಿಸಿಕೊಳ್ಳಬೇಕು. ಹಾಗೆ ಮಾಡಿಕೊಳ್ಳಬೇಕೆಂದರೆ ನಿಶ್ಚಲವಾದ ಮನಸ್ಸಿನೊಂದಿಗೆ ಅಂದರೆ ಧ್ಯಾನ ಸ್ಥಿತಿಯಲ್ಲಿ ಗಂಟೆಗಳಗಟ್ಟಲೆ ಇರಬೇಕು ಹೀಗೆ ದಿನಗಳಗಟ್ಟಲೆ, ತಿಂಗಳುಗಳಗಟ್ಟಲೆ ಆಹಾರ ನಿಯಮಗಳನ್ನು ಅನುಸರಿಸುತ್ತಾ ಮಾಡಿದರೆ ಆಗ ನಿಧಾನವಾಗಿ ಅವರ ಮನಸ್ಸು ಶುದ್ಧವಾಗುತ್ತದೆ. ಅಂದರೆ ನಿಶ್ಚಲವಾದ ಮನಸ್ಸು ನಿರ್ಮಲವಾಗುತ್ತದೆ ಎಂದರೆ ಧ್ಯಾನದಲ್ಲಿ ಎರಡನೇ ಸ್ಥಿತಿಗೆ ಸೇರಿಕೊಳ್ಳುತ್ತಾರೆ. ಅವರು ಮನಸ್ಸಿನ ಮಲಿನ ಗುಣಗಳಾದ ತಮೋಗುಣವನ್ನು ಹೋಗಲಾಡಿಸಿಕೊಂಡು, ರಜೋಗುಣವನ್ನೂ ಹೋಗಲಾಡಿಸಿಕೊಂಡು ಸಾತ್ವಿಕ ಗುಣವನ್ನು ಸಂಪಾದಿಸಿಕೊಳ್ಳುತ್ತಾರೆ. ಅದರಿಂದ ಅವರ ಮನಸ್ಸು ಶುದ್ಧವಾಗುತ್ತದೆ ಅಂದರೆ ಒಳ್ಳೆಯದಾಗಿ ಬದಲಾಗುತ್ತದೆ ಅಂದರೆ ಪವಿತ್ರವಾಗುತ್ತದೆ.

ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಮನಸ್ಸು ನಿರ್ಮಲವಾಗಬೇಕೆಂದರೆ ಮೊದಲಿಗೆ ಮನಸ್ಸು ನಿಶ್ಚಲವಾಗಬೇಕು. ಮನಸ್ಸು ನಿಶ್ಚಲವಾಗದೇ ನಿರ್ಮಲ ವಾಗುವುದಿಲ್ಲ. ನಿಶ್ಚಲವಾದ ಸ್ಥಿತಿಯಲ್ಲಿ ಗಂಟೆಗಳ ಗಟ್ಟಲೆ ಇದ್ದಾಗಲೇ ಮನಸ್ಸು ನಿಧಾನವಾಗಿ ನಿರ್ಮಲವಾಗುತ್ತದೆ. ಉದಾಹರಣೆಗೆ ಒಂದು ಲೋಟದೊಳಗೆ ಶುದ್ಧವಾದ ನೀರನ್ನು ಹಾಕಿ ಅದರೊಳಗೆ ಸ್ವಲ್ಪ ಮರಳನ್ನು ಹಾಕಿ ಆ ನೀರನ್ನು ಚಮಚದಿಂದ ಕಲಕಿರಿ. ಆ ನೀರೆಲ್ಲಾ ಮಣ್ಣಿನೊಂದಿಗೆ ಬೆರೆತು ಮಲಿನವಾಗುತ್ತದೆ. ಪುನಹಃ ಆ ನೀರನ್ನು ಯಥಾಪ್ರಕಾರವಾಗಿ ಶುದ್ಧವಾಗಿ ಬದಲಾಯಿಸಬೇಕು ಎಂದರೆ ಮೊದಲಿಗೆ ಆ ನೀರನ್ನು ಅಲುಗಾಡಿಸದಂತೆ ನಿಶ್ಚಲವಾಗಿ ಇರಿಸಬೇಕು. ಹಾಗೆ ಅಲುಗಾಡಿಸದೆ ಕೆಲವು ಗಂಟೆಗಳ ಸಮಯ ಇರಿಸಿದರೆ ನಿಧಾನವಾಗಿ ನೀರಿನಲ್ಲಿ ಬೆರೆತ ಮರಳು ಲೋಟದ ಕೆಳಭಾಗದಲ್ಲಿ

ಇಳಿಯುತ್ತದೆ. ಹಾಗೆ ಆ ನೀರನ್ನು ಅಲುಗಾಡಿಸದಂತೆ ಕೆಲವು ದಿನಗಳ ಕಾಲ ಇರಿಸಿದರೆ ನೀರಿನೊಳಗಿನ ಮಲಿನವೆಲ್ಲಾ ಕೆಳಗೆ ಇಳಿದು ನೀರು ಯಥಾಪ್ರಕಾರ ಶುದ್ಧವಾಗಿ ಒಳ್ಳೆಯದಾಗಿ ಬದಲಾಗುತ್ತದೆ. ಆದರೆ ಆ ನೀರನ್ನು ನಿಶ್ಚಲವಾಗಿ ಇರಿಸದಂತೆ ಮಧ್ಯ ಮಧ್ಯದಲ್ಲಿ ಅಲುಗಾಡಿಸುತ್ತಿದ್ದರೆ ನೀರು ಸ್ವಚ್ಛವಾಗುವುದಿಲ್ಲ. ಮಾಮೂಲಿನಂತೆಯೇ ಕೊಳೆಯಾಗಿಯೇ ಇರುತ್ತದೆ.

ಅದರಿಂದಾಗಿ ನೀರು ನಿರ್ಮಲವಾಗಬೇಕೆಂದರೆ ಮೊದಲು ನಿಶ್ಚಲವಾಗಲೇಬೇಕು. ಅದೇರೀತಿ ಮನಸ್ಸು ನಿರ್ಮಲವಾಗಬೇಕೆಂದರೆ ಅಂದರೆ ಮನಸ್ಸಿನೊಳಗಿನ ಮಾಲಿನ್ಯ ಹೋಗಬೇಕೆಂದರೆ ಮನಸ್ಸನ್ನು ನಿಶ್ಚಲ ಸ್ಥಿತಿಯಲ್ಲಿ ಇರಿಸಲೇಬೇಕು. ಬೆಳಗ್ಗೆ ಸ್ವಲ್ಪ ಹೊತ್ತು, ರಾತ್ರಿ ಸ್ವಲ್ಪ ಹೊತ್ತು ಧ್ಯಾನದಲ್ಲಿ ಕುಳಿತುಕೊಂಡರೆ ಸಾಕಾಗುವುದಿಲ್ಲ. ನಿಶ್ಚಲ ಸ್ಥಿತಿಯಲ್ಲಿ ಗಂಟೆಗಟ್ಟಲೆ ಇರಲೇಬೇಕು. ಈ ರೀತಿ ದಿನಗಳ ಗಟ್ಟಲೆ, ತಿಂಗಳುಗಳ ಗಟ್ಟಲೆ ಮಾಡಿದರೆ ಖಂಡಿತವಾಗಿ ಮನಸ್ಸು ಶುದ್ಧವಾಗುತ್ತದೆ. ಅಂದರೆ ಅವರೊಳಗಿನ ಮಲಿನ ಗುಣಗಳು ಅಂದರೆ ರಜೋಗುಣ, ತಮೋಗುಣಗಳು ಹೊರಟುಹೋಗುತ್ತವೆ ನಿಧಾನವಾಗಿ ಅವರು ಸಾತ್ವಿಕ ಗುಣದೊಳಗೆ ಬರುತ್ತಾರೆ. ಈ ರೀತಿಯಾಗಿ ಮನಸ್ಸು ಬದಲಾದ ತಕ್ಷಣವೇ ಅವರ ಪ್ರವರ್ತನೆಯಲ್ಲಿ ಬಹಳಷ್ಟು ಬದಲಾವಣೆಗಳು ಕಾಣಿಸುತ್ತವೆ. ಒಂದು ವಿಧದಲ್ಲಿ ಹೇಳಬೇಕೆಂದರೆ ಮೊದಲಿನ ಪ್ರವರ್ತನೆಗೆ ಪೂರ್ತಿ ಭಿನ್ನವಾಗಿ ಬದಲಾಗುತ್ತದೆ. ಅವರಿಗೇ ಅರ್ಥವಾಗದ ರೀತಿಯಲ್ಲಿ ಅವರ ಪ್ರವರ್ತನೆ ಬದಲಾಗುತ್ತದೆ.

ಅವರ ಮನಸ್ಸಿನೊಳಗಿನ ಮಲಿನತೆ ಕಡಿಮೆಯಾಗುತ್ತಾ ಹೋದಂತೆ ಅವರು ಮಾಡುವ ಕೆಟ್ಟ ಕೆಲಸಗಳು ಅಂದರೆ ಬೇರೆಯವರಿಗೆ ಮೋಸ ಮಾಡುವುದು, ನೋಯಿಸುವುದು, ಬಯ್ಯುವುದು, ವಿಮರ್ಶಿಸುವುದು ವಿಲಾಸಕ್ಕೋಸ್ಕರ ಪರಿಹಾಸ್ಯ ಮಾಡುವುದು, ಅಪಹಾಸ್ಯ ಮಾಡುತ್ತಾ ಆಳಿಸುವುದು, ರ್‍ಯಾಗಿಂಗಳನ್ನು ಮಾಡಿ ಎದುರುಗಡೆ ಇರುವವರನ್ನು ನೋಯಿಸುವುದು ಇಂತಹವೆಲ್ಲಾ ನಿಧಾನವಾಗಿ ಕಡಿಮೆಯಾಗುತ್ತಾ ಹೋಗುತ್ತವೆ. ಅಂತಹ ಪ್ರವರ್ತನೆ ನಿಧಾನವಾಗಿ ಅವರಲ್ಲಿ ಕಾಣಿಸುವುದಿಲ್ಲ. ಕಾರಣ ಅವರ ಮನಸ್ಸು ಶುದ್ಧವಾಯಿತು.

ಅಷ್ಟೇಅಲ್ಲ ಬೇರೆಯವರ ವಸ್ತುಗಳನ್ನು ಆಸೆ ಪಡುವುದಿಲ್ಲ, ಅಪಹರಣ ಮಾಡುವುದಿಲ್ಲ, ಕಳ್ಳತನ ಮಾಡುವುದಿಲ್ಲ, ನೋಡದಂತೆ, ಕೇಳದಂತೆ ತೆಗೆದುಕೊಳ್ಳುವುದಿಲ್ಲ. ಹೊಟ್ಟೆಕಿಚ್ಚು ಪಡುವುದಿಲ್ಲ ಹೀಗೆ ಇವರ ಪ್ರವರ್ತನೆ ಬದಲಾಗುತ್ತದೆ.

ಅವರಿಗೆ ಇರುವ ಕೆಟ್ಟ ಅಭ್ಯಾಸಗಳಾದ ಸಿಗರೇಟ್ ಸೇದುವುದು, ಜೂಜಾಟ ಆಡುವುದು, ಬೆಟ್ಟಿಂಗ್ ಆಡುವುದು ಇಂತಹವುಗಳನ್ನೆಲ್ಲಾ ನಿಧಾನವಾಗಿ ಬಿಟ್ಟು ಬಿಡುತ್ತಾರೆ. ಅದೇರೀತಿ ಕೆಟ್ಟ ಅಭ್ಯಾಸಗಳು ಅಂದರೆ ಮಾಂಸಹಾರ ಸೇವನೆ, ಮಧ್ಯಪಾನ ಮಾಡುವುದು, ವೇಶ್ಯಾವಾಟಿಕೆ, ಮಾದಕ ಪದಾರ್ಥಗಳನ್ನು ಸೇವಿಸುವುದು ಇಂತಹವನ್ನು ಸಹ ಇದಕ್ಕಿಂತ ಮುಂಚೆ ಬಹಳಷ್ಟು ಸಾರಿ ಹೇಳಿದರೂ ಬಿಡದವರು... ಅವರಿಗೆ ತಿಳಿಯದಂತೆಯೇ ಅವರಷ್ಟಕ್ಕೆ ಅವರೇ ಬಿಟ್ಟು ಬಿಡುತ್ತಾರೆ. ನೋಡುವವರಿಗೆ ಆಶ್ಚರ್ಯ ಉಂಟಾಗುತ್ತದೆ.

ಇದಕ್ಕೆ ಕಾರಣ ಮನಸ್ಸು ಶುದ್ಧಿಯಾಗುವುದು. ವಾಸ್ತವವಾಗಿ ಈ ಅಭ್ಯಾಸಗಳನ್ನು, ಚಟಗಳನ್ನು ಬಿಡದೇ ಇರುವುದಕ್ಕೆ ಕಾರಣ ಮನಸ್ಸಿನ ಮಲಿನ ಗುಣಗಳಿಂದಲೇ. ಆದಕ್ಕಾಗಿಯೇ ಇಂತಹ ಅಭ್ಯಾಸಗಳು ಇರುವವರು ಈ ಅಭ್ಯಾಸಗಳಿಂದ ಆರೋಗ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದರೂ, ಸಂಪಾದನೆ ಮಾಡಿದ್ದೆಲ್ಲವನ್ನೂ ಕಳೆದುಕೊಳ್ಳುತ್ತಾ, ಸಂಸಾರದಲ್ಲಿ ಜಗಳವಾಡುತ್ತಿದ್ದರೂ ಬಿಡಲಾರರು. ಕೆಲವರು ಎಷ್ಟು ತಿಳುವಳಿಕೆ ಹೇಳಿದರೂ ಬಿಡಬೇಕು ಅನಿಸುತ್ತಿದೆ ಆದರೂ ನನ್ನ ಮನಸ್ಸು ಒಪ್ಪಿಕೊಳ್ಳುತ್ತಿಲ್ಲ ಎನ್ನುತ್ತಾರೆ, ಅವರಿಗೆ ಒಂದು ಕಡೆಯಿಂದ ಬಿಡಬೇಕು ಅನಿಸುತ್ತದೆ ಆದರೂ ಬಿಡಲಾರರು, ಆ ಸಮಯಕ್ಕೆ ಮನಸ್ಸು ಆ ಕಡೆಗೆ ಸೆಳೆಯುತ್ತಾ ಇರುತ್ತದೆ. ಶರೀರಕ್ಕೆ ಎಷ್ಟು ನಷ್ಟ ಉಂಟಾದರೂ.... ಮನಸ್ಸು ಮಾತ್ರ ಬೇಕು ಎನ್ನುತ್ತದೆ ಶರೀರ ಸಹಕರಿಸದೇ ಇದ್ದರೂ ಆ ಅಭ್ಯಾಸವನ್ನು ಬಿಡಲಾರು, ಇದಕ್ಕೆ ಕಾರಣ ಮಲಿನ ಮನಸ್ಸು.

ಆದರೆ ಮನಸ್ಸು ಶುದ್ಧವಾದ ತಕ್ಷಣವೇ ಅವರ ದೃಷ್ಟಿ ಆಕಡೆ ಹೋಗುವುದಿಲ್ಲ. ಆ ಕೆಲಸವನ್ನು ಮಾಡಬೇಕೆಂದು ಅನಿಸುವುದಿಲ್ಲ. ಶುದ್ಧವಾದ ಮನಸ್ಸು ಅವರಿಗೆ ತೊಂದರೆ ಕೊಡುವುದಿಲ್ಲ. ವಾಸ್ತವಕ್ಕೆ ಆ ಆಲೋಚನೆಯೇ ಅವರ ಮನಸ್ಸಿನೊಳಗೆ ಉಂಟಾಗುವುದಿಲ್ಲ. ಅವರೊಳಗಿನ ಬದಲಾವಣೆ ಅವರಿಗಷ್ಟೇ ಅಲ್ಲ ಇತರರಿಗೂ ಸಹ ಆಶ್ಚರ್ಯವನ್ನು ಉಂಟುಮಾಡುತ್ತದೆ.

ಹೀಗೆ ಮನಸ್ಸು ಶುದ್ಧಿಯಾಗುತ್ತಾ ಹೋದಂತೆ ಅವರ ವರ್ತನೆಯಲ್ಲಿ ಬದಲಾವಣೆಗಳು ಹೇಗೆ ಬರುತ್ತವೆಯೋ ತಿಳಿದುಕೊಳ್ಳೋಣ. ಲೋಟದೊಳಗಿರುವ ನೀರನ್ನು ನಿಶ್ಚಲವಾಗಿ ಇರಿಸಿದಾಗ ಮೊದಲಿಗೆ ಮಣ್ಣಿನೊಳಗಿನ ದೊಡ್ಡದೊಡ್ಡ ಭಾರವಾಗಿರುವ ಕಣಗಳು ಕೆಳಗೆ ಇಳಿಯುತ್ತವೆ, ನಂತರ ಅದಕ್ಕಿಂತಲೂ ಚಿಕ್ಕ ಕಣಗಳು ಕೆಳಗೆ ಇಳಿಯುತ್ತವೆ. ಕೊನೆಗೆ ಸೂಕ್ಷ್ಮಾತಿಸೂಕ್ಷ್ಮವಾದವುಗಳು ಸಹ

ಇಳಿದುಹೋಗುವುದರಿಂದ ನೀರು ಮುಂಚಿನಂತೆಯೇ ಸ್ವಚ್ಛವಾಗಿ, ಶುದ್ಧವಾಗಿ ತಯಾರಾಗುತ್ತದೆ.

ಇದೇರೀತಿ ಮನಸ್ಸು ಶುದ್ಧಿಯಾಗುತ್ತಾ ಹೋದಂತೆ ಮೊದಲಿಗೆ ದೊಡ್ಡದೊಡ್ಡ ಪಾಪಗಳು ಅಂದರೆ ಕೋಳಿಗಳನ್ನು ಸಾಯಿಸುವುದು, ಮೇಕೆಗಳನ್ನು, ಕುರಿಗಳನ್ನು ಸಾಯಿಸುವುದು ಹಂದಿಗಳು, ಹಸುಗಳನ್ನು ಸಾಯಿಸುವಂತಹ ದೊಡ್ಡ ದೊಡ್ಡ ಪಾಪಗಳನ್ನು ಬಿಟ್ಟು ಬಿಡುತ್ತಾರೆ. ಮನಸ್ಸು ಮತ್ತಷ್ಟು ಶುದ್ಧವಾಗುತ್ತಾ ಹೋದಂತೆ ಚಿಕ್ಕ-ಚಿಕ್ಕ ಪಾಪಗಳು ಅಂದರೆ ಇಲಿಗಳು, ಜಿರಳೆಗಳು ಇಂತಹವುಗಳನ್ನು ಸಾಯಿಸುವುದನ್ನು ನಿಲ್ಲಿಸುತ್ತಾರೆ. ಸಾಧನೆಯನ್ನು ಮತ್ತಷ್ಟು ತೀವ್ರಗೊಳಿಸಿದರೆ ಮನಸ್ಸು ಇನ್ನಷ್ಟು ಶುದ್ಧವಾಗುತ್ತದೆ. ಆಗ ಚಿಕ್ಕ ಚಿಕ್ಕ ಪಾಪಗಳು ಅಂದರೆ ಸೊಳ್ಳೆಗಳು, ಇರುವೆಗಳು ಇಂತಹವುಗಳನ್ನು ಸಾಯಿಸುವುದಿಲ್ಲ. ಮನಸ್ಸು ಇನ್ನಷ್ಟು ಬಹಳ ಚೆನ್ನಾಗಿ ಶುದ್ಧವಾದರೆ ಸೂಕ್ಷ್ಮಾತಿಸೂಕ್ಷ್ಮವಾದ ಪಾಪಗಳು ಅಂದರೆ ರೇಷ್ಮೆ ಸೀರೆಗಳನ್ನು ಉಡುವುದಿಲ್ಲ, ರೇಷ್ಮೆ ಬಟ್ಟೆಗಳನ್ನು ಧರಿಸುವುದಿಲ್ಲ ಹಾಗೆ ರೇಷ್ಮೆ ಬಟ್ಟೆಗಳನ್ನು ತಯಾರು ಮಾಡಲು ಕಾರಣವಾದ ರೇಷ್ಮೆಹುಳುಗಳ ಹಿಂಸೆಗೆ ಕಾರಣರಾಗುವುದಿಲ್ಲ.

ಅಂದರೆ ಮನಸ್ಸು ಶುದ್ಧವಾಗುತ್ತಾ ಹೋದಂತೆ ಮೊದಲಿಗೆ ದೊಡ್ಡ ದೊಡ್ಡ ಪಾಪಗಳನ್ನು ಮಾಡುವುದಿಲ್ಲ. ಅಂದರೆ ಇತರ ಮನುಷ್ಯರನ್ನು ಕೊಲೆ ಮಾಡುವುದಿಲ್ಲ, ಕಾಲುಗಳು, ಕೈಗಳನ್ನು ಕತ್ತರಿಸುವುದಿಲ್ಲ, ಆಸಿಡ್‌ನಿಂದ ದಾಳಿ ಮಾಡುವುದಿಲ್ಲ. ಮಾನಭಂಗಗಳು, ಕೊಲೆಗಳನ್ನು ಮಾಡುವುದಿಲ್ಲ. ಸ್ಯಾಡಿಸ್ಟ್‌ನಂತೆ, ರಾಕ್ಷಸನಂತೆ ಹೆಂಡತಿಯನ್ನು ಇತರ ಸ್ತ್ರೀಯರನ್ನು ಚಿತ್ರಹಿಂಸೆಗೆ ಒಳಪಡಿಸುವುದಿಲ್ಲ. ಅವರ ಮನಸ್ಸು ಇನ್ನಷ್ಟು ಶುದ್ಧವಾದರೆ ಚಿಕ್ಕ-ಚಿಕ್ಕ ತಪ್ಪುಗಳು ಅಂದರೆ ಕಳ್ಳತನಗಳು, ದರೋಡೆಗಳನ್ನು ಮಾಡುವುದು, ಅವುಗಳಿಗೋಸ್ಕರ ದೌರ್ಜನ್ಯ ಮಾಡುವುದು, ಹೊಡೆಯುವುದು, ಸ್ತ್ರೀಯರನ್ನು ವಶಪಡಿಸಿಕೊಳ್ಳಲು ಅವರಿಗೆ ಹೊಡೆಯುವುದು, ಕಿಡ್ನಾಪ್ ಮಾಡುವುದು, ಅಲ್ಪರ ಮೇಲೆ, ಬಲಹೀನರ ಮೇಲೆ ಅಧಿಕಾರ ಚಲಾಯಿಸುವುದು, ಅವರನ್ನು ನೋಯಿಸುವಂತಹ ಕೆಲಸಗಳನ್ನು ಮಾಡುವುದಿಲ್ಲ. ಅವರ ಮನಸ್ಸು ಇನ್ನಷ್ಟು ಶುದ್ಧವಾದರೆ ಚಿಕ್ಕ ಚಿಕ್ಕ ತಪ್ಪುಗಳು ಅಂದರೆ ಮೋಸ ಮಾಡುವುದು, ಇತರರಿಗೆ ತಿಳಿಯದಂತೆ ಕಳ್ಳತನ ಮಾಡುವುದು, ಸ್ತ್ರೀಯರನ್ನು, ಹೆಂಡತಿಯನ್ನು ಬಯ್ಯುವುದು, ಕೆಟ್ಟ ಪದಗಳಿಂದ ದೂಷಣೆ ಮಾಡುವುದು ಇಂತಹವುಗಳನ್ನು ಮಾಡುವುದಿಲ್ಲ. ಅವರ ಮನಸ್ಸು ಮತ್ತಷ್ಟು ಶುದ್ಧವಾಗುತ್ತಾ ಹೋದಂತೆ ಸೂಕ್ಷ್ಮಾತಿ ಸೂಕ್ಷ್ಮವಾದ ತಪ್ಪುಗಳು ಅಂದರೆ

ವಿಮರ್ಶಿಸುವುದು, ನಿಂದನೆ ಮಾಡುವುದು, ಪರೋಕ್ಷವಾಗಿ ಬಯ್ಯುವುದು ಇಂತಹವುಗಳನ್ನು ಮಾಡುವುದಿಲ್ಲ.

ಕೊನೆಗೆ ಮನಸ್ಸು ಪೂರ್ತಿಯಾಗಿ ಶುದ್ಧವಾದಾಗ ಯಾವುದೇ ವಿಧವಾದ ತಪ್ಪುಗಳು, ಪಾಪಗಳನ್ನು ಮಾಡುವುದಿಲ್ಲ, ತಮ್ಮಿಂದ ಇತರ ಜೀವಿಗಳಿಗೆ ಎಂತಹುದೇ ಕಷ್ಟ–ನಷ್ಟ, ಹಾನಿ, ನೋವನ್ನು ಉಂಟು ಮಾಡುವುದಿಲ್ಲ. ಈ ಸ್ಥಿತಿಗೆ ಬಂದವರು ಕಷ್ಟಗಳಿಂದ ಪೂರ್ತಿಯಾಗಿ ಹೊರಬರುತ್ತಾರೆ. ಭವಿಷ್ಯತ್ತಿನಲ್ಲಿ ಅವರ ಜೀವನದಲ್ಲಿ ಕಷ್ಟಗಳೇ ಇರುವುದಿಲ್ಲ ಇದಕ್ಕೆ ಕಾರಣ ತಪ್ಪುಗಳು ಪಾಪಗಳನ್ನು ಮಾಡುವುದಿಲ್ಲವಾದ್ದರಿಂದ. ಅಷ್ಟೇ ಅಲ್ಲ ಈ ಸ್ಥಿತಿಯಲ್ಲಿರುವವರಿಗೆ ನಕಾರಾತ್ಮಕ ಆಲೋಚನೆಗಳು ಇರುವುದಿಲ್ಲ, ಎಲ್ಲವೂ ಅನುಕೂಲವಾಗಿಯೇ ಇರುತ್ತವೆ. ಆದ್ದರಿಂದ ಜೀವನದಲ್ಲಿ ಅನುಕೂಲವಾದ ಫಲಿತಾಂಶಗಳೇ ಉಂಟಾಗುತ್ತಿರುತ್ತವೆ. ಇದರಿಂದಾಗಿ ಜೀವನದಲ್ಲಿ ಆನಂದವನ್ನು ಹೊಂದುತ್ತಾರೆ.

ಅಷ್ಟೇಅಲ್ಲ ಅವರ ಮನಸ್ಸು ಶುದ್ಧವಾಗುತ್ತದೆ. ಅವರ ಬುದ್ಧಿ ವಿಕಾಸ ಹೊಂದುತ್ತಿರುತ್ತದೆ. ಪೂರ್ತಿಯಾಗಿ ಶುದ್ಧವಾದರೆ ಪೂರ್ತಿಯಾಗಿ ವಿಕಾಸ ಹೊಂದುತ್ತದೆ, ಅದಕ್ಕಿಂತ ಮುಂಚೆ ಬುದ್ಧಿ ಇರುತ್ತದೆ ಹೊರತು ಮೊಗ್ಗಿನಂತೆ ಮುದುರಿಕೊಂಡು ಇರುತ್ತದೆ. ಅದರಿಂದ ಪರಿಮಳಗಳು ಹೊರಬರುವುದಿಲ್ಲ ಅಂದರೆ ಅವರಿಂದ ಯಾರಿಗೂ ಪ್ರಯೋಜನವಿರುವುದಿಲ್ಲ ಆದರೆ ಬುದ್ಧಿ ಹೂವಿನಂತೆ ವಿಕಾಸ ಹೊಂದುತ್ತಾ ಹೋದಂತೆ ಹೂವು ತನ್ನ ಸೌಂದರ್ಯವನ್ನು ಹೊರಸೂಸಿದಂತೆ ತನ್ನ ಪರಿಮಳವನ್ನು ಹೊರ ಚೆಲ್ಲಿದಂತೆ ಬುದ್ಧಿ ಬುದ್ಧನಂತೆ ವಿಕಾಸ ಹೊಂದಿದವರು ಇತರರಿಗೆ ಪ್ರಪಂಚಕ್ಕೆ ಬಹಳಷ್ಟು ಒಳಿತನ್ನು ಮಾಡುತ್ತಾರೆ, ಬಹಳಷ್ಟು ಲಾಭಗಳನ್ನು ಉಂಟುಮಾಡುತ್ತಾರೆ. ಅಷ್ಟೇಅಲ್ಲ ಬುದ್ಧಿ ವಿಕಸಿಸುತ್ತಾ ಹೋದಂತೆ ವಿವೇಕ ಉಂಟಾಗುತ್ತದೆ, ವಿಚಕ್ಷಣಾಜ್ಞಾನ ಏರ್ಪಡುತ್ತದೆ. ಇದರಿಂದಾಗಿ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು, ಯಾವುದು ನ್ಯಾಯ, ಯಾವುದು ಅನ್ಯಾಯ, ಯಾವುದು ಕ್ರಮ, ಯಾವುದು ಅಕ್ರಮ, ಯಾವುದು ಸವ್ಯ ಯಾವುದು ಅಪಸವ್ಯ, ಯಾವುದು ಧರ್ಮ, ಯಾವುದು ಅಧರ್ಮ, ಯಾವುದು ನಿತ್ಯ ಯಾವುದು ಅನಿತ್ಯ, ಯಾವುದು ಸತ್ಯ ಯಾವುದು ಅಸತ್ಯ ಎಂಬ ವ್ಯತ್ಯಾಸ ತಿಳಿಯುತ್ತದೆ. ಪ್ರತಿ ವಿಷಯವನ್ನು ಆಲೋಚಿಸುತ್ತಾರೆ ಸರಿಯಲ್ಲದ್ದನ್ನು ಬಿಟ್ಟು ಬಿಡುತ್ತಾರೆ. ಸರಿಯಾದದ್ದನ್ನೇ ಗ್ರಹಿಸುತ್ತಾರೆ. ಅದರಿಂದಾಗಿ ಮಾಡಬಾರದ ಕೆಲಸಗಳನ್ನು ಮಾಡುವುದಿಲ್ಲ ಅದರಿಂದಾಗಿ ಭವಿಷ್ಯತ್ತಿನಲ್ಲಿ ಕಷ್ಟಗಳು ಬರುವುದಿಲ್ಲ. ಇವರು

ಯಾರಾದರೂ ಹೇಳಿದ್ದನ್ನು ಕುರುಡರಂತೆ ನಂಬುವುದಿಲ್ಲ, ತಮ್ಮ ವಿವೇಕವನ್ನು ಉಪಯೋಗಿಸುತ್ತಾರೆ, ಈ ಸ್ಥಿತಿಯಲ್ಲಿನ ಸಾಧನೆಯನ್ನು ಅದೇ ರೀತಿ ಮುಂದುವರೆಸಿದರೆ ಮನಸ್ಸು ಇನ್ನಷ್ಟು ಶುದ್ಧವಾಗುತ್ತದೆ. ಆಗ ಅವರ ಬುದ್ಧಿ ಬುದ್ಧನಂತೆ ಕೆಲಸ ಮಾಡುತ್ತದೆ, ಈ ಸ್ಥಿತಿಯಲ್ಲಿ ಸ್ವಾರ್ಥ ಹೊರಟುಹೋಗುತ್ತದೆ. ಯಾರನ್ನೂ ದ್ವೇಷಿಸುವುದಿಲ್ಲ, ಯಾರ ಮೇಲೆಯೂ ಅಸೂಯೆ ಪಡುವುದಿಲ್ಲ ಈರ್ಷೆ ಇರುವುದಿಲ್ಲ, ಎಲ್ಲರನ್ನೂ ಇಷ್ಟಪಡುತ್ತಾರೆ. ಎಲ್ಲರನ್ನೂ ಪ್ರೀತಿಸುತ್ತಾರೆ. ಈ ಸ್ಥಿತಿಯಲ್ಲಿ ಯಾರಿಗೂ ಕೆಟ್ಟದ್ದನ್ನು ಮಾಡುವುದಿಲ್ಲ, ಸಾಧ್ಯವಾದಷ್ಟು ಒಳ್ಳೆಯದನ್ನೇ ಮಾಡುತ್ತಾರೆ. ಸಹಾಯ ಮಾಡುತ್ತಾರೆ. ಸೇವೆಗಳನ್ನು ಮಾಡುತ್ತಾರೆ. ಸಮಾಜಕೋಸ್ಕರ ಶ್ರಮ ಪಡುತ್ತಾರೆ. ಹೀಗೆ ಮನಸ್ಸನ್ನು ಶುದ್ಧಿ ಮಾಡಿಕೊಂಡು ಬುದ್ಧಿಯನ್ನು ವಿಕಸಿಸುವಂತೆ ಮಾಡಿಕೊಂಡವರಿಗೆ ಕರ್ಮಸಿದ್ಧಾಂತ ಹಾನಿ ಮಾಡುವುದಿಲ್ಲ. ಕರ್ಮಸಿದ್ಧಾಂತದಿಂದ ಅವರಿಗೆ ನಷ್ಟ ಉಂಟಾಗುವುದಿಲ್ಲ ಮೇಲಾಗಿ ಕರ್ಮಸಿದ್ಧಾಂತದಿಂದ ಇವರಿಗೆ ಎಲ್ಲವೂ ಲಾಭವೇ ಆಗುತ್ತದೆ. ಒಳ್ಳೆಯದನ್ನು ಮಾಡುತ್ತಿರುವುದರಿಂದ ಎಲ್ಲವೂ ಒಳ್ಳೆಯದೇ ಆಗುತ್ತದೆ.

ಆದರೆ ಮನಸ್ಸನ್ನು ಶುದ್ಧಿ ಮಾಡಿಕೊಳ್ಳಬೇಕು ಎಂದುಕೊಳ್ಳುವವರು ಸಾಧನೆಯೊಂದಿಗೆ ಮತ್ತಷ್ಟು ನಿಯಮಗಳನ್ನು ಪಾಲಿಸಬೇಕು. ಮುಖ್ಯವಾಗಿ ಆಹಾರದ ವಿಷಯದಲ್ಲಿ ಬಹಳಷ್ಟು ಜಾಗ್ರತೆಗಳನ್ನು ತೆಗೆದುಕೊಳ್ಳಬೇಕು. ಕಾರಣ ಮಲಿನವಾದ ಮನಸ್ಸು ಅಂದರೆ ತಮೋಗುಣ, ರಜೋಗುಣದಲ್ಲಿರುವ ಮನಸ್ಸು ತೀವ್ರ ಸಾಧನೆಯಿಂದ ಶುದ್ಧವಾಗಿ ಸಾತ್ವಿಕಗುಣದೊಳಗೆ ಬರುತ್ತದೆ. ಇಂತಹ ಸಮಯದಲ್ಲಿ ಆಹಾರ ನಿಯಮಗಳನ್ನು ಪಾಲಿಸುವಂತೆ ತಮೋಗುಣ ಪ್ರಧಾನವಾದ ರಜೋಗುಣ ಪ್ರಧಾನವಾದ ಆಹಾರಗಳನ್ನು ತೆಗೆದುಕೊಂಡಿದ್ದೇ ಆದರೆ ಮನಸ್ಸು ಮತ್ತೆ ಮಲಿನವಾಗಿ ತಮೋ ರಜೋಗುಣಗಳನ್ನು ಸ್ವಾಧೀನಪಡಿಸಿಕೊಳ್ಳುತ್ತದೆ. ಮಾಡಿದ ಸಾಧನೆಯೆಲ್ಲಾ ವ್ಯರ್ಥವಾಗುತ್ತದೆ. ಮತ್ತೆ ಮಾಮೂಲಾಗಿ ಬಿಡುತ್ತಾರೆ ಆದ್ದರಿಂದ ಆಹಾರದ ವಿಷಯದಲ್ಲಿ ಬಹಳಷ್ಟು ಜಾಗ್ರತೆ ವಹಿಸಬೇಕು, ಮುಖ್ಯವಾಗಿ ತಮೋಗುಣ ಪ್ರಧಾನವಾದ ರಜೋಗುಣ ಪ್ರಧಾನವಾದ ಆಹಾರಗಳನ್ನು ತೆಗೆದುಕೊಳ್ಳಬಾರದು ಪೂರ್ತಿಯಾಗಿ ಸಾತ್ವಿಕವಾದ ಆಹಾರವನ್ನು ತೆಗೆದುಕೊಳ್ಳಬೇಕು.

ಪ್ರಮುಖವಾಗಿ ಮಾಂಸಾಹಾರ, ಮೊಟ್ಟೆಗಳನ್ನು ಪೂರ್ತಿಯಾಗಿ ಬಿಡಬೇಕು ಕಾರಣ ಅವು ರಜೋಗುಣವನ್ನು ಉಂಟುಮಾಡುತ್ತವೆ ಅಷ್ಟೇಅಲ್ಲ ಮಾಂಸಾಹಾರದೊಂದಿಗೆ ಮಾಂಸಾಹಾರವನ್ನು ಬೇಯಿಸಿದ ಪಾತ್ರೆಗಳನ್ನು ಉಪಯೋಗಿಸಬಾರದು ಕಾರಣ ಮಾಂಸಾಹಾರದ ದೋಷ ಬಹಳಷ್ಟು ಕಾಲ ಪಾತ್ರೆಗಳಲ್ಲಿ ಇರುತ್ತದೆ.

ಓಷೋ ಏನು ಹೇಳಿದ್ದಾರೆ ಅಂದರೆ ನೀವು ಮಾಂಸಾಹಾರವನ್ನು ತೆಗೆದುಕೊಂಡರೆ "ವಿಷವನ್ನು ಊಟ ಮಾಡಿದಂತೆಯೇ" ಎನ್ನುತ್ತಾರೆ.

ಮಾಂಸಾಹಾರದಲ್ಲಿಯೇ ಅಲ್ಲ ಸಸ್ಯಹಾರದಲ್ಲಿಯೂ ಸಹ ರಜೋಗುಣವನ್ನು, ತಮೋಗುಣವನ್ನು ಉಂಟುಮಾಡುವ ಆಹಾರಗಳು ಪದಾರ್ಥಗಳು ಸಹ ಇವೆ. ಮುಖ್ಯವಾಗಿ ಬೆಳ್ಳುಳ್ಳಿಯನ್ನು ತ್ಯಜಿಸಬೇಕು. ಕಾರಣ ಬೆಳ್ಳುಳ್ಳಿ ಸಹ ಮಲಿನ ಗುಣವಾದ ರಜೋಗುಣವನ್ನು ಉಂಟುಮಾಡುತ್ತದೆ. ಅದರೊಂದಿಗೆ ಬಹಳಷ್ಟು ಮಸಾಲೆಗಳು, ಬಹಳಷ್ಟು ಖಾರವನ್ನು ತಿನ್ನಬಾರದು. ಮಸಾಲೆ ಪದಾರ್ಥಗಳು, ಖಾರವನ್ನು ಕಡಿಮೆ ಮಾಡುವುದು ಬಹಳ ಒಳ್ಳೆಯದು. ಅದೇರೀತಿ ತಣ್ಣಗಾದ, ಹಳಸಿಹೋದ, ಹುಳಿಬಂದ ಆಹಾರಗಳನ್ನು ತೆಗೆದುಕೊಳ್ಳಬಾರದು ಇವು ತುಂಬಾ ಮಲಿನವಾದ ತಮೋಗುಣವನ್ನು ಉಂಟುಮಾಡುತ್ತವೆ ಆದ್ದರಿಂದ ಬೆಳಗ್ಗೆ ತಯಾರಿಸಿ ಸಾಯಂಕಾಲ, ಸಾಯಂಕಾಲ ತಯಾರಿಸಿ ಮರುದಿನ ತೆಗೆದುಕೊಳ್ಳುವುದಾಗಲೀ, ತಯಾರಿಸಿ ಫ್ರಿಜ್ನಲ್ಲಿ ಇರಿಸಿದ ಆಹಾರಗಳನ್ನು ತೆಗೆದುಕೊಳ್ಳುವುದಾಗಲೀ ಮಾಡಬಾರದು. ಬಹಳಷ್ಟು ಹುಳಿಯಾದ ಮಜ್ಜಿಗೆಯೂ ಸಹ ತಮೋಗುಣವನ್ನು ಉಂಟುಮಾಡುತ್ತದೆ. ಈ ವಿಧವಾದ ಆಹಾರ ಪದಾರ್ಥಗಳು ಸಾಧಕರಿಗೆ ಬಹಳಷ್ಟು ನಷ್ಟವನ್ನುಂಟು ಮಾಡುತ್ತವೆ, ಏಕೆಂದರೆ ಆಹಾರದ ಪ್ರಭಾವ ದೇಹದಲ್ಲಿ ಕಾಣಿಸದಿದ್ದರೂ ಮನಸ್ಸಿನ ಮೇಲೆ ಅದರ ಪ್ರಭಾವ ಕಾಣಿಸುತ್ತದೆ. ತೆಗೆದುಕೊಳ್ಳುವ ಆಹಾರವನ್ನು ಆಧರಿಸಿಯೇ ಮನಸ್ಸು ಇರುತ್ತದೆ. ಆದ್ದರಿಂದ ಮನಸ್ಸನ್ನು ಶುದ್ಧಿ ಮಾಡಿಕೊಳ್ಳಬೇಕು ಎಂದುಕೊಳ್ಳುವವರು ಆಹಾರ ನಿಯಮಗಳನ್ನು ಖಚಿತವಾಗಿ ಪಾಲಿಸಬೇಕು.

ಆದ್ದರಿಂದ ಆಹಾರ ನಿಯಮಗಳನ್ನು ಪಾಲಿಸುತ್ತಾ ತೀವ್ರ ಸಾಧನೆಯನ್ನು ಮಾಡಿದರೆ ಖಂಡಿತವಾಗಿ ಅವರ ಮನಸ್ಸು ಶುದ್ಧವಾಗುತ್ತದೆ. ಇಲ್ಲಿ ಏನನ್ನು ಗಮನಿಸಬೇಕೆಂದರೆ ಮೊದಲಿನ ಸ್ಥಿತಿಯಲ್ಲಿರುವವರು ಯಾರಾದರೂ ಅಂದರೆ ರಜೋಗುಣ ತಮೋಗುಣಗಳಲ್ಲಿ ಇರುವವರು ಖಚಿತವಾಗಿ ಆ ಸ್ಥಿತಿಯನ್ನು ದಾಟಲು ಪ್ರಯತ್ನಿಸಬೇಕು ಕಾರಣ ಆ ಸ್ಥಿತಿ ಮಾನವನಿಗೆ ಹಾನಿಯನ್ನುಂಟುಮಾಡುತ್ತದೆ, ನಷ್ಟವನ್ನುಂಟುಮಾಡುತ್ತದೆ, ಕಷ್ಟಗಳಿಗೆ ಗುರಿಪಡಿಸುತ್ತದೆ. ಪ್ರಾರಂಭದ ಸ್ಥಿತಿಯನ್ನು ದಾಟಿದವನು ಕಷ್ಟಗಳಿಂದ ಹೊರಬಂದಂತೆಯೇ! ಆದರೆ ಈ ಸ್ಥಿತಿಯನ್ನು ದಾಟುವುದೇ ಬಹಳ ಬಹಳ ಕಷ್ಟ, ಕಾರಣ ಈ ಸ್ಥಿತಿಯಲ್ಲಿರುವವರಿಗೆ ಬಹಳಷ್ಟು ವಿಧದ ಕಷ್ಟಗಳು, ಅಡ್ಡಿ–ಆತಂಕಗಳು ಉಂಟಾಗುತ್ತಿರುತ್ತವೆ. ಅಂತಹವರು ಒಂದುವೇಳೆ ಧ್ಯಾನಸಾಧನೆಯನ್ನು

ಮಾಡಬೇಕೆಂದುಕೊಂಡರೂ ವಿಪರೀತವಾದ ಆಲೋಚನೆಗಳಿಂದ ಚಂಚಲ ಸ್ಥಿತಿಯಲ್ಲಿರುವ ಮನಸ್ಸು ಧ್ಯಾನದಲ್ಲಿ ಕುಳಿತುಕೊಳ್ಳಲು ಬಿಡುವುದಿಲ್ಲ. ಆದರಿಂದಾಗಿ ಇಂತಹವರು ಧ್ಯಾನದಲ್ಲಿ ಕುಳಿತುಕೊಳ್ಳಬೇಕೆಂದು ಪ್ರಯತ್ನಿಸಿದರೂ ಕುಳಿತುಕೊಳ್ಳಲಾರರು. ಸ್ವಲ್ಪಹೊತ್ತು ಕುಳಿತುಕೊಂಡು ನನ್ನಿಂದ ಆಗುವುದಿಲ್ಲ ಎಂದು ಎದ್ದುಬಿಡುತ್ತಾರೆ ಮತ್ತೇ ಕುಳಿತುಕೊಳ್ಳಲು ಇಷ್ಟಪಡುವುದಿಲ್ಲ. ಒಂದು ವೇಳೆ ಯಾರಾದರೂ ಛಲದಿಂದ ಧ್ಯಾನ ಮಾಡೋಣವೆಂದು ಪ್ರಯತ್ನಿಸಿದರೂ ಅವರಿಗೆ ಇನ್ನೂ ಬಹಳಷ್ಟು ವಿಧದ ಅಡ್ಡಿ–ಆತಂಕಗಳು, ಅವರೋಧಗಳು ಕಾಣಿಸುತ್ತವೆ.

ಹೀಗೆ ಮಾಡುತ್ತಿರುವವರಿಗೆ ಸಂಸಾರದಲ್ಲಿ ಕಷ್ಟಗಳು ಬರುತ್ತವೆ, ಸಾಧನೆ ಮಾಡುತ್ತಿದ್ದರೆ ಕುಟುಂಬದಲ್ಲಿರುವವರೇ ವಿರೋಧಿಸುತ್ತಾರೆ. ಸಹಕರಿಸುವುದಿಲ್ಲ ಮತ್ತೆ ಕೆಲವರಿಗೆ ಆರ್ಥಿಕವಾಗಿ ಕಷ್ಟಗಳು ಬರುತ್ತಿರುತ್ತವೆ. ಆದರಿಂದಾಗಿ ಇಂತಹ ಕಾರಣಗಳಿಂದ ಬಹಳ ಜನ ಧ್ಯಾನಸಾಧನೆಯನ್ನು ಮುಂದುವರಿಸಲಾರದೇ ಹೋಗುತ್ತಾರೆ. ಸಾಧನೆಯನ್ನು ಸಹ ನಿಲ್ಲಿಸಿ ಬಿಡುತ್ತಾರೆ.

ಆದರೆ ಕೆಲವರು ಎಷ್ಟೇ ಕಷ್ಟಗಳು ಉಂಟಾದರೂ ಛಲದಿಂದ ಸಾಧನೆಯನ್ನು ಮುಂದುವರಿಸಿದರೂ, ಆಹಾರ ಪದಾರ್ಥಗಳು ನಿಯಮಗಳನ್ನು ಪಾಲಿಸಲಾರದೇ ಹೋಗುತ್ತಾರೆ. ಕಾರಣ ಸಮಾಜದಲ್ಲಿ ಆಹಾರದ ಬಗ್ಗೆ ಶ್ರದ್ಧೆ ತೆಗೆದುಕೊಳ್ಳುವವರು, ಆಹಾರ ನಿಯಮಗಳನ್ನು ಪಾಲಿಸುವವರು ಯಾರೂ ಇಲ್ಲದೇ ಇರುವುದು. ಎಷ್ಟುಹೊತ್ತು ರುಚಿಗೆ ಪ್ರಾಧಾನ್ಯತೆ ಕೊಡುವುದರಿಂದ ಈ ಪರಿಸ್ಥಿತಿ ಉಂಟಾಗುತ್ತದೆ. ಏಕೆಂದರೆ ಸಮಾಜದಲ್ಲಿ ತೆಗೆದುಕೊಳ್ಳುವ ಆಹಾರ ಬಹಳಷ್ಟು ತಮೋಗುಣವನ್ನು ಉಂಟುಮಾಡುವಂತಹವೇ ಆಗಿವೆ. ಆದ್ದರಿಂದ ಸಾಧನೆ ಮಾಡುವವರು ಸಾತ್ವಿಕವಾದ ಸಸ್ಯಾಹಾರವನ್ನು ತೆಗೆದುಕೊಳ್ಳಬೇಕೆಂದುಕೊಂಡರೂ ಸಾಧ್ಯವಾಗುವುದಿಲ್ಲ. ಅವರಿಗೆ ಮನೆಯಲ್ಲಿಯೇ ಸಹಕಾರ ಇರುವುದಿಲ್ಲ. ಒಂದು ವೇಳೆ ಮನೆಯಲ್ಲಿ ಯಾವುದೋ ವಿಧವಾಗಿ ಜಾಗ್ರತೆ ವಹಿಸಿದರೂ, ಫಂಕ್ಷನ್ಸ್, ಪಾರ್ಟಿಗಳಿಗೆ ಹೋದಾಗ, ಪ್ರಯಾಣಗಳನ್ನು ಮಾಡುವಾಗ ಆಹಾರ ನಿಯಮಗಳನ್ನು ಪಾಲಿಸಲಾರದೇ ಹೋಗುತ್ತಾರೆ. ಕಾರಣ ತಯಾರಿಸುವುದು ಸಸ್ಯಾಹಾರವೇ ಆದರೂ ಬಹಳಷ್ಟು ರಜೋಗುಣ, ತಮೋಗುಣವನ್ನು ಉಂಟುಮಾಡುವ ಆಹಾರಗಳೇ ಇರುತ್ತವೆ. ಆದ್ದರಿಂದ ಬಹಳಷ್ಟು ಕಷ್ಟಗಳನ್ನು ಮೆಟ್ಟಿನಿಂತು ತೀವ್ರ ಸಾಧನೆ ಮಾಡಿ ಮನಸ್ಸನ್ನು ಶುದ್ಧಿ ಮಾಡಿಕೊಂಡರೂ ಆಹಾರ ಲೋಪದಿಂದ ಪುನಃ ಯಥಾಸ್ಥಿತಿಗೆ ಸೇರಿಕೊಳ್ಳುತ್ತಾರೆ. ತಿಂಗಳುಗಳಗಟ್ಟಲೆ,

ವರ್ಷಗಳಗಟ್ಟಲೆ ಮಾಡಿದ ಸಾಧನೆಯನ್ನೆಲ್ಲಾ ವ್ಯರ್ಥ ಮಾಡಿಕೊಳ್ಳುತ್ತಾರೆ ಮತ್ತೆ ಮೊದಲಿಗೆ ಬರುತ್ತಾರೆ. ಅಂದರೆ ಪ್ರಾರಂಭ ಸ್ಥಿತಿಯಲ್ಲಿಯೇ ಇರುತ್ತಾರೆ ಇದನ್ನಾಧರಿಸಿ ಸಾಧನೆಯಲ್ಲಿ ಅಭಿವೃದ್ಧಿಯನ್ನು ಹೊಂದುವುದು ಎಷ್ಟು ಕಷ್ಟವೆಂದು ನಾವು ಅರ್ಥಮಾಡಿಕೊಳ್ಳಬಹುದು. ಇದನ್ನಾಧರಿಸಿ ಧ್ಯಾನಸಾಧನೆಯಲ್ಲಿ ಅಭಿವೃದ್ಧಿ ಹೊಂದುವುದು ಸಾಮಾನ್ಯ ವಿಷಯವಲ್ಲವೆಂದು ಅರ್ಥವಾಗುತ್ತದೆ ಆದ್ದರಿಂದ ಒಂದು ವೇಳೆ ಯಾರಾದರೂ ಇವುಗಳೆಲ್ಲವನ್ನೂ ಮೆಟ್ಟಿನಿಂತು ಅಭಿವೃದ್ಧಿ ಸಾಧಿಸಿದರೆ ಅವರು ಬಹಳ ಶ್ರೇಷ್ಠರೆಂದು ನಾವು ಅರ್ಥಮಾಡಿಕೊಳ್ಳಬಹುದು.

ಅದಕ್ಕಾಗಿಯೇ ಪೂರ್ವದಲ್ಲಿ ಗುರುಗಳು ಈ ಜ್ಞಾನ ಮಾರ್ಗವನ್ನು ಬೋಧಿಸುವ ಮೊದಲು ಶಿಷ್ಯರಿಗೆ ಬಹಳಷ್ಟು ಕಠಿಣವಾದ ಪರೀಕ್ಷೆಗಳನ್ನು ನೀಡುತ್ತಿದ್ದರು, ಆ ಪರೀಕ್ಷೆಗಳನ್ನು ತಡೆದುಕೊಂಡು ಗೆದ್ದಂತಹ ಶಿಷ್ಯರಿಗೆ ಮಾತ್ರವೇ ಈ ಮಾರ್ಗವನ್ನು ಬೋಧಿಸುತ್ತಿದ್ದರು. ಉಳಿದವರಿಗೆ ಬೋಧಿಸಿದರೂ ಪ್ರಯೋಜನವಿರುವುದಿಲ್ಲವೆಂದು ಅವರಿಗೆ ತಿಳಿದಿತ್ತು. ಆಧ್ಯಾತ್ಮಿಕವಾಗಿ ಬೆಳೆಯಬೇಕೆಂದುಕೊಂಡರೂ ಜ್ಞಾನವನ್ನು ಸಂಪಾದಿಸಬೇಕೆಂದುಕೊಂಡರೂ ಬಹಳ ಬಹಳ ಕಷ್ಟಪಡಬೇಕು ಎಂದು ಅವರಿಗೆ ತಿಳಿದಿತ್ತು. ಅದಕ್ಕಾಗಿಯೇ ಅಂತಹವರನ್ನು ಆಶ್ರಮದೊಳಗೇ ಇರಿಸಿಕೊಂಡು ಆಹಾರ ನಿಯಮಗಳನ್ನು ಪಾಲಿಸುವಂತೆ ಮಾಡುತ್ತಾ... ಅವರಿಂದ ಸಾಧನೆಗಳನ್ನು ಮಾಡಿಸುತ್ತಿದ್ದರು, ಪ್ರತಿದಿನವೂ ಸ್ವಲ್ಪಹೊತ್ತು ಅವರಿಂದ ಜ್ಞಾನದಿಂದ ತುಂಬಿದ ಪುಸ್ತಕಗಳನ್ನು ಓದಿಸುತ್ತಿದ್ದರು. ಅವರ ಸ್ಥಿತಿಯನ್ನು ಆಧರಿಸಿ ಬೇಕಾದ ಜ್ಞಾನವನ್ನು ಬೋಧಿಸುತ್ತಿದ್ದರು ಸಂದೇಹಗಳನ್ನು ನಿವಾರಿಸುತ್ತಿದ್ದರು. ಅದರಿಂದಾಗಿ ಅವರು ಸ್ವಲ್ಪಕಾಲದಲ್ಲಿಯೇ ಸಾಧನೆಯಲ್ಲಿ ಅಭಿವೃದ್ಧಿಯನ್ನು ಹೊಂದುವುದಷ್ಟೇ ಅಲ್ಲದೇ ಆಧ್ಯಾತ್ಮಿಕವಾಗಿ ಬೆಳೆಯುತ್ತಿದ್ದರು. ಜ್ಞಾನವನ್ನು ಸಹ ಅಭಿವೃದ್ಧಿ ಪಡಿಸಿಕೊಳ್ಳುತ್ತಿದ್ದರು ಇದನ್ನೆಲ್ಲಾ ಅವರು ಏಕೆ ಮಾಡುತ್ತಿದ್ದರೆಂದರೆ ಸಾಧನೆ ಮಾಡುವುದು, ಸಾಧನೆಯಲ್ಲಿ ಅಭಿವೃದ್ಧಿಯನ್ನು ಹೊಂದುವುದು, ಆಧ್ಯಾತ್ಮಿಕವಾಗಿ ಬೆಳೆಯುವುದು, ಬುದ್ಧಿಯನ್ನು, ಜ್ಞಾನವನ್ನು ಸಂಪಾದಿಸಿಕೊಳ್ಳುವುದು ಸಾಮಾನ್ಯವಾದ ವಿಷಯವಲ್ಲ, ಅಷ್ಟು ಸುಲಭವಾದ ವಿಷಯವಲ್ಲ ಎಂದು ಅವರಿಗೆ ತಿಳಿದಿತ್ತು.

ಅಂತಹ ಕಷ್ಟಕರವಾದ ಸಾಧನೆಯನ್ನು ಪ್ರಸ್ತುತ ಪತ್ರೀಜಿ ಎಲ್ಲರಿಗೂ ಬೋಧಿಸಲು ಕಾರಣ ಭೂಮಂಡಲದಲ್ಲಿ ಈಗ ಬದಲಾವಣೆಗಳು ಉಂಟಾಗುತ್ತಿವೆ. ಭೂಮಿ ಫೋಟಾನ್ ಬಾಂಡ್ ಒಳಗೆ ಪ್ರವೇಶಿಸುತ್ತಿದೆ. ಕಲಿಯುಗ ಅಂತ್ಯವಾಗಿ 2012ರಿಂದ ಸತ್ಯಯುಗ

ಪ್ರಾರಂಭವಾಯಿತು, ಸತ್ಯಯುಗದೊಳಗೆ ಪ್ರವೇಶಿಸಿದ ಪ್ರತಿಯೊಬ್ಬರೂ ಸತ್ಯಯುಗದ ಲಕ್ಷಣಗಳನ್ನು ಸಂಪಾದಿಸಿಕೊಳ್ಳಬೇಕಾದ ಅವಶ್ಯಕತೆ ಇದೆ. ಇದಕ್ಕಾಗಿ ಪ್ರತಿಯೊಬ್ಬರೂ ಅತ್ಯವಶ್ಯಕವಾಗಿ ಮಾಂಸಾಹಾರವನ್ನು ತ್ಯಜಿಸಿ ಧ್ಯಾನ ಮಾಡಬೇಕಾದ ಅವಶ್ಯಕತೆ ಇದೆ ಆದಕ್ಕಾಗಿಯೇ ಪತ್ರೀಜಿ ಊರೂರು ತಿರುಗುತ್ತಾ ಪ್ರತಿಯೊಂದು ರಾಜ್ಯದಲ್ಲಿಯೂ ಎಲ್ಲಾ ದೇಶಗಳಲ್ಲಿಯೂ ಅಹಿಂಸೆಯ ಪ್ರಚಾರ, ಧ್ಯಾನ ಪ್ರಚಾರ ಮಾಡುತ್ತಿದ್ದಾರೆ, ಮಾಂಸಾಹಾರವನ್ನು ತ್ಯಜಿಸುವಂತೆ ಮಾಡುತ್ತಿದ್ದಾರೆ ಎಲ್ಲರಿಂದಲೂ ಧ್ಯಾನ ಮಾಡಿಸುತ್ತಿದ್ದಾರೆ. ಧ್ಯಾನಯಜ್ಞಗಳನ್ನು ಏರ್ಪಾಟು ಮಾಡಿ ಲಕ್ಷಗಟ್ಟಲೆ ಜನರಿಂದ ಧ್ಯಾನ ಮಾಡಿಸುತ್ತಿದ್ದಾರೆ. ಪ್ರತಿಯೊಬ್ಬರಲ್ಲೂ ಬದಲಾವಣೆಯನ್ನು ತೆಗೆದುಕೊಂಡು ಬರಲು ವಿಶೇಷವಾಗಿ ಶ್ರಮಿಸುತ್ತಿದ್ದಾರೆ. ಈಗಿನ ಪರಿಸ್ಥಿತಿಗಳಲ್ಲಿ ಅಂದರೆ ಪ್ರಸ್ತುತ ಯುಗದಲ್ಲಿ ಪ್ರತಿಯೊಬ್ಬರು ಎಷ್ಟೇ ಕಷ್ಟವಾದರೂ ಈ ಸಾಧನೆಯನ್ನು ಮಾಡಲೇಬೇಕು, ಪ್ರವರ್ತನೆಯಲ್ಲಿ ಬದಲಾವಣೆಯನ್ನು ತಂದುಕೊಳ್ಳಲೇಬೇಕು ಖಚಿತವಾಗಿ.

ಆದ್ದರಿಂದ ಧ್ಯಾನ ಮಾಡಲು ಏಕೆ ಇಷ್ಟೊಂದು ಕಷ್ಟ ಪಡಬೇಕು? ಅಂದರೆ ಕಷ್ಟ ಪಡದಂತೆ ಇರುವುದಕ್ಕಾಗಿಯೇ. ಏಕೆಂದರೆ ಉಗುರಿನಷ್ಟು ಧ್ಯಾನದ ಕಷ್ಟ ಬೆಟ್ಟದಷ್ಟು ಜೀವನದ ಕಷ್ಟಗಳನ್ನು ಇಲ್ಲದಂತೆ ಮಾಡುತ್ತದೆ ಆದ್ದರಿಂದ ಕಷ್ಟಪಡುವುದು ಕಷ್ಟಗಳನ್ನು ಇಲ್ಲದಂತೆ ಮಾಡಿಕೊಳ್ಳುವುದಕ್ಕಾಗಿಯೇ. ಯಾವುದು ಏನಾದರೂ, ಯಾರಾದರೂ ಸರಿಯೇ ಮೊದಲಿನ ಸ್ಥಿತಿಯನ್ನು ಖಚಿತವಾಗಿ ದಾಟಲೇಬೇಕು. ತಮೋ, ರಜೋ ಗುಣಗಳನ್ನು ಹೋಗಲಾಡಿಸಿಕೊಂಡು ಸಾತ್ವಿಕ ಗುಣದೊಳಗೆ ಪ್ರವೇಶಿಸಬೇಕು. ಆದಕ್ಕೆ ಮನಸ್ಸನ್ನು ಶುದ್ಧಿ ಮಾಡಿಕೊಳ್ಳಬೇಕು.

ಕನಿಷ್ಠ ಪಕ್ಷ ಮನುಷ್ಯ ಜೀವನದಲ್ಲಿ ಈ ಎರಡನೆಯ ಸ್ಥಿತಿಗಾದರೂ ಸೇರಿಕೊಳ್ಳಲು ಪ್ರಯತ್ನಿಸಬೇಕು ಅಂದರೆ ಮನಸ್ಸನ್ನು ಶುದ್ಧಿ ಮಾಡಿಕೊಳ್ಳಬೇಕು, ಕಾರಣ ಈ ಸ್ಥಿತಿಗೆ ಸೇರಿಕೊಂಡವರು ಮನಸ್ಸಿನೊಳಗಿನ ಮಾಲಿನ್ಯ ಹೋಗುವುದರಿಂದ ತಪ್ಪುಗಳು, ಪಾಪಗಳನ್ನು ಮಾಡುವುದಿಲ್ಲ. ಸೃಷ್ಟಿಗೆ ವಿರುದ್ಧವಾದ ಕೆಲಸಗಳನ್ನು ಮಾಡುವುದಿಲ್ಲ. ಅದರಿಂದಾಗಿ ಭವಿಷ್ಯತ್ತಿನಲ್ಲಿ ಕಷ್ಟಗಳು ಬರುವುದಿಲ್ಲ, ಇವರನ್ನು ಕರ್ಮಸಿದ್ಧಾಂತ ನಷ್ಟ ಪಡಿಸುವುದಿಲ್ಲ. ಮೇಲಾಗಿ ಮನಸ್ಸು ಶುದ್ಧಿ ಆಗುವುದರಿಂದ ಒಳ್ಳೆಯ ಕೆಲಸಗಳು, ಲೋಕಕಲ್ಯಾಣಕರವಾದ ಕೆಲಸಗಳು ಅಂದರೆ ಪುಣ್ಯ ಕರ್ಮಗಳನ್ನೇ ಮಾಡುತ್ತಾರೆ. ಅದರಿಂದಾಗಿ ಅವರಿಗೆ ಭೋಗಗಳೇ ಉಂಟಾಗುತ್ತವೆ. ಲಾಭಗಳೇ ಬರುತ್ತವೆ ಆದ್ದರಿಂದ ಆನಂದವಾಗಿ ಜೀವಿಸುತ್ತಾರೆ. ವಾಸ್ತವವಾಗಿ ಈ ಸ್ಥಿತಿಗೆ ಬಂದವರು ನಂತರದ ಸ್ಥಿತಿಯ

ಬಗ್ಗೆ ಪ್ರತ್ಯೇಕವಾಗಿ ಪ್ರಯತ್ನಿಸಬೇಕಾದ ಅವಶ್ಯಕತೆ ಇರುವುದಿಲ್ಲ, ಕಾರಣ ಈ ಸ್ಥಿತಿಯಲ್ಲಿರುವವರಿಗೆ ಬುದ್ಧಿ ವಿಕಾಸ ಹೊಂದುತ್ತದೆ. ಅದರಿಂದಾಗಿ ಅವರ ಬುದ್ಧಿಯೇ ಅವರನ್ನು ನಂತರದ ಸ್ಥಿತಿಗೆ ತೆಗೆದುಕೊಂಡು ಹೋಗುತ್ತದೆ. ಅಷ್ಟೇಅಲ್ಲ ಈ ಸ್ಥಿತಿಯಲ್ಲಿರುವವರಿಗೆ ದೊಡ್ಡದಾಗಿ ಯಾರೂ ಏನನ್ನೂ ಹೇಳುವ ಅವಶ್ಯಕತೆ ಇರುವುದಿಲ್ಲ, ಬೋಧಿಸಬೇಕಾದ ಅವಶ್ಯಕತೆಯಿರುವುದಿಲ್ಲ. ಕಾರಣ ಬುದ್ಧಿ ವಿಕಾಸ ಹೊಂದುವುದರಿಂದ ವಿವೇಕ ಉಂಟಾಗುತ್ತದೆ, ಇದರಿಂದಾಗಿ ವಿಚಕ್ಷಣಾ ಜ್ಞಾನ ಏರ್ಪಡುತ್ತದೆ. ಅದರಿಂದಾಗಿ ಅವರಿಗೆ ಯಾವುದು ಒಳ್ಳೆಯದೋ, ಯಾವುದು ಕೆಟ್ಟದ್ದೋ, ಯಾವುದು ನ್ಯಾಯವೋ, ಯಾವುದು ಅನ್ಯಾಯವೋ, ಯಾವುದು ಧರ್ಮವೋ, ಯಾವುದು ಅಧರ್ಮವೋ, ಯಾವುದು ಸತ್ಯವೋ, ಯಾವುದು ಅಸತ್ಯವೋ ಎಂಬ ವ್ಯತ್ಯಾಸ ತಿಳಿಯುತ್ತದೆ.

ಆದ್ದರಿಂದ ಅಧರ್ಮದ ಕೆಲಸಗಳನ್ನು ಮಾಡವುದಿಲ್ಲ. ಧರ್ಮದಿಂದಲೇ ವ್ಯವಹರಿಸುತ್ತಾರೆ. ಅಸತ್ಯವನ್ನು ಆಶ್ರಯಿಸುವುದಿಲ್ಲ. ಸತ್ಯವನ್ನೇ ಆಶ್ರಯಿಸುತ್ತಾರೆ. ಕೆಟ್ಟದ್ದನ್ನು ಪೂರ್ತಿಯಾಗಿ ಬಿಟ್ಟುಬಿಡುತ್ತಾರೆ ಒಳ್ಳೆಯದನ್ನೇ ಆಶ್ರಯಿಸುತ್ತಾರೆ, ಕಾರಣ ಅವರ ವಿವೇಕದಿಂದ ಈ ವ್ಯತ್ಯಾಸವನ್ನು ತಿಳಿದುಕೊಳ್ಳುತ್ತಾರೆ. ಆದ್ದರಿಂದ ಜೀವನದಲ್ಲಿ ಎಲ್ಲಾ ಲಾಭಗಳನ್ನೇ ಹೊಂದುತ್ತಾರೆ. ನಂತರದ ಸ್ಥಿತಿಗೆ ಸೇರಿಕೊಳ್ಳಲು ಪ್ರಯತ್ನಿಸುತ್ತಾರೆ ಅಂದರೆ ಜ್ಞಾನ ಹೊಂದಲು ಪ್ರಯತ್ನಿಸುತ್ತಾರೆ. ಸ್ವಲ್ಪಕಾಲದಲ್ಲಿಯೇ ಆ ಸ್ಥಿತಿಗೆ ಸೇರಿಕೊಳ್ಳುತ್ತಾರೆ. ಆದ್ದರಿಂದ ಯಾರಾದರೂ ಸರಿ ಮೊದಲಿನ ಸ್ಥಿತಿಯಿಂದ ಎರಡನೆಯ ಸ್ಥಿತಿಗೆ ಸೇರಬೇಕು. ಅಂದರೆ ನಿಶ್ಚಲವಾದ ಮನಸ್ಸನ್ನು ನಿರ್ಮಲ ಮಾಡಿಕೊಳ್ಳಬೇಕು. ಅಂದರೆ ಶುದ್ಧಿ ಮಾಡಿಕೊಳ್ಳಬೇಕು ಈ ಸ್ಥಿತಿಗೋಸ್ಕರ ತೀವ್ರವಾಗಿ ಕಷ್ಟ ಪಡಬೇಕು.

ಶುದ್ಧವಾದ ಮನಸ್ಸು ಶೂನ್ಯವಾಗುತ್ತದೆ.

ಅಷ್ಟೇಅಲ್ಲ ಸಾಧನೆಯನ್ನು ಅದೇ ಸ್ಥಿತಿಯಲ್ಲಿ ತಿಂಗಳುಗಳಗಟ್ಟಲೆ, ವರ್ಷಗಳಗಟ್ಟಲೆ ಮುಂದುವರಿಸಿದರೆ ಶುದ್ಧವಾದ ಮನಸ್ಸು ನಿಧಾನವಾಗಿ ಶೂನ್ಯವಾಗುತ್ತದೆ. ಮನಸ್ಸು ನಿಧಾನವಾಗಿ ಶೂನ್ಯವಾಗುತ್ತಾ ಇದ್ದರೆ ಆತ್ಮಕ್ಕೆ ಹತ್ತಿರವಾಗುತ್ತಾ ಇರುತ್ತಾರೆ ಆಗ ಅವರಲ್ಲಿ ಜ್ಞಾನ ಉದಯಿಸುತ್ತದೆ, ಜ್ಞಾನ ಉದಯಿಸುತ್ತಾ ಹೋದಂತೆ ಅವರ ಕೆಲಸಗಳಲ್ಲಿ ಬಹಳ ಬದಲಾವಣೆಗಳು ಕಾಣಿಸುತ್ತವೆ. ಬುದ್ಧಿಯ ಮೂಲಕ ತಿಳಿದುಕೊಂಡ ಧರ್ಮವನ್ನು ಆಚರಿಸುತ್ತಾರೆ, ಸತ್ಯವನ್ನೇ ಹೇಳುತ್ತಿರುತ್ತಾರೆ ಅಂದರೆ ವೇದಗಳಲ್ಲಿ ಬೋಧಿಸಲ್ಪಟ್ಟ "ಸತ್ಯಂ ವಧ. ಧರ್ಮಂ ಚರ" ಎಂಬ ಸಂದೇಶ ಈ ಸ್ಥಿತಿಯಲ್ಲಿ ಆಚರಣೆಯೊಳಗೆ ಬರುತ್ತಿರುತ್ತದೆ.

ಅವರ ಮನಸ್ಸು ಇನ್ನಷ್ಟು ಶೂನ್ಯವಾಗುತ್ತಾ ಹೋದಂತೆ ಆತ್ಮಕ್ಕೆ ಇನ್ನಷ್ಟು ಹತ್ತಿರವಾಗುತ್ತಾರೆ. ಆತ್ಮಕ್ಕೆ ಹತ್ತಿರವಾಗುತ್ತಾ ಹೋದಂತೆ ಅವರಲ್ಲಿ ಆತ್ಮಕ್ಕೆ ಸಂಬಂಧಿಸಿದ ಜ್ಞಾನ ಉಂಟಾಗುತ್ತದೆ. ಹಾಗೆ ಜ್ಞಾನ ಹೆಚ್ಚುತ್ತಾ ಹೋದಂತೆ ಬಹಳಷ್ಟು ತಿಳಿಯದ ವಿಷಯಗಳನ್ನು ತಿಳಿದುಕೊಳ್ಳುತ್ತಾರೆ. ಆತ್ಮದ ಲಕ್ಷಣಗಳು ಏರ್ಪಡುತ್ತಿರುತ್ತವೆ. ಆತ್ಮದ ಶಕ್ತಿಗಳು ನಿಧಾನವಾಗಿ ಸಂಕ್ರಮಿಸುತ್ತಾ ಇರುತ್ತವೆ.

ಹೀಗೆ ಆತ್ಮಜ್ಞಾನ ಉಂಟಾಗುತ್ತಾ ಹೋದಂತೆ ಕರ್ಮಗಳು ಭಸ್ಮವಾಗುತ್ತವೆ. ನಿಧಾನವಾಗಿ ವರ್ತಮಾನದ ಕರ್ಮಗಳು ಸಹ ಭಸ್ಮವಾಗುತ್ತವೆ. ಜ್ಞಾನ ಹೆಚ್ಚುತ್ತ ಹೋದಂತೆ ಸಂಚಿತ ಕರ್ಮಗಳು ಸಹ ಭಸ್ಮವಾಗುತ್ತವೆ. "ಜ್ಞಾನಾಗ್ನಿ ದಗ್ಧ ಕರ್ಮಾಣಾಂ" ಎಂದು ಗೀತೆಯಲ್ಲಿ ಹೇಳಲ್ಪಟ್ಟಿದೆ ಅಲ್ಲವೇ? ಹೀಗೆ ಕರ್ಮಗಳನ್ನೆಲ್ಲಾ ಭಸ್ಮ ಮಾಡಿಕೊಂಡವರು ದುಃಖದಿಂದ ಹೊರಬಂದಂತೆಯೇ. ಅಂದರೆ ಕಷ್ಟಗಳಿಂದ ಮುಕ್ತಿಯನ್ನು ಹೊಂದಿದಂತೆಯೇ.

ಅಷ್ಟೇಅಲ್ಲ ಆತ್ಮಕ್ಕೆ ಹತ್ತಿರವಾಗುತ್ತಾ ಹೋದಂತೆ ಆತ್ಮದ ಲಕ್ಷಣಗಳು ಏರ್ಪಡುತ್ತವೆ. ಆತ್ಮ ಎಂದರೆ ಸಾಕ್ಷಾತ್ತು ಭಗವಂತ ಆದ್ದರಿಂದ ಅವರಿಗೆ ಆ ಲಕ್ಷಣಗಳು ಉಂಟಾಗುತ್ತವೆ. ಆತ್ಮ ನಿತ್ಯಾನಂದ ಸ್ವರೂಪವಾದ್ದರಿಂದ ಆ ಸ್ಥಿತಿಯನ್ನು ಹೊಂದುವವರು ಅವರಿಗೆ ತಿಳಿಯದಂತೆ ಆನಂದಾನುಭವವನ್ನು ಅನುಭವಿಸುತ್ತಾರೆ. ಆತ್ಮ ಪ್ರೇಮ

ಸ್ವರೂಪವಾಗಿರುವುದರಿಂದ ಅವರು ಎಲ್ಲರನ್ನೂ ಪ್ರೀತಿಸುತ್ತಾರೆ. ಅವರಲ್ಲಿ ನಿಧಾನವಾಗಿ ದ್ವೇಷ, ಈರ್ಷೆ, ಅಸೂಯೆ ಕಡಿಮೆಯಾಗುತ್ತವೆ. ಸಕಲ ಜೀವರಾಶಿಯನ್ನು ಪ್ರೀತಿಸುತ್ತಾರೆ, ಆತ್ಮ ಅಂದರೆ ಭಗವಂತನಾಗಿರುವುದರಿಂದ ಈ ಸ್ಥಿತಿಯನ್ನು ಹೊಂದುವವರಿಗೆ ಕೋರಿಕೆಗಳು ಕಡಿಮೆಯಾಗುತ್ತವೆ. ಇರುವುದರಲ್ಲಿಯೇ ತೃಪ್ತಿ ಪಡುತ್ತಾರೆ ಭೋಗಗಳ ಮೇಲೆ ಆಸಕ್ತಿ ಕಡಿಮೆಯಾಗುತ್ತದೆ. ಸಂಪತ್ತಿನ ಮೇಲೆ ವ್ಯಾಮೋಹ ಕಡಿಮೆಯಾಗುತ್ತದೆ. ಧರ್ಮದ ಅರ್ಥವಾಗುತ್ತದೆ. ಧರ್ಮದ ಹಿರಿಮೆ ತಿಳಿಯುತ್ತದೆ. ಧರ್ಮವನ್ನು ಆಚರಿಸುತ್ತಾರೆ ಧರ್ಮವನ್ನು ಆಚರಿಸಲು ಭಯ ಪಡುವುದಿಲ್ಲ. ಸತ್ಯದ ಅರಿವಾಗುತ್ತದೆ. ಸತ್ಯದ ಹಿರಿಮೆ ತಿಳಿಯುತ್ತದೆ ಆದ್ದರಿಂದ ಸತ್ಯದಲ್ಲಿಯೇ ಬದುಕುತ್ತಾರೆ ಸತ್ಯವನ್ನೇ ಬೋಧಿಸುತ್ತಾರೆ, ಸತ್ಯವನ್ನೇ ಹೇಳುತ್ತಾರೆ. ಸತ್ಯವನ್ನು ಹೇಳಲು ಹಿಂಜರಿಯುವುದಿಲ್ಲ.

ಯಾವುದೇ ವಿಷಯದಲ್ಲಾದರೂ ಧೈರ್ಯದಿಂದ ವ್ಯವಹರಿಸುತ್ತಾರೆ. ಭಯ ಹೊರಟುಹೋಗುತ್ತದೆ. ಅನಂತ ಶಕ್ತಿಯನ್ನು ಹೊಂದಿದ ಆತ್ಮಕ್ಕೆ ಹತ್ತಿರವಾಗುತ್ತಿರುವುದರಿಂದ ಅವರಲ್ಲಿ ಶಕ್ತಿ ಹೆಚ್ಚುತ್ತಾ ಹೋಗುತ್ತದೆ, ಶಕ್ತಿವಂತರಾಗಿ ಕೆಲಸ ಮಾಡುತ್ತಾರೆ, ಅಸಾಧ್ಯವಾದ ಕೆಲಸಗಳನ್ನುಸಹ ಸುನಾಯಾಸವಾಗಿ ಮಾಡುತ್ತಾರೆ.

ಅವರ ಕೆಲಸಗಳು ಶಕ್ತಿಯುತವಾಗಿರುತ್ತವೆ. ಅವರ ಮಾತುಗಳು ಸಹ ಶಕ್ತಿಯುತವಾಗಿರುತ್ತವೆ. ಅವರು ಮಾಡುವ ಕೆಲಸಗಳು ಎಲ್ಲರಿಗೂ ಆದರ್ಶವಾಗಿರುತ್ತವೆ. ಅವರು ಹೇಳುವ ಮಾತುಗಳು ಇತರರ ಮೇಲ್ ಪ್ರಭಾವ ಬೀರುತ್ತವೆ. ಅನೇಕರು ಅವರನ್ನು ಅನುಸರಿಸುತ್ತಾರೆ. ಅವರು ಹೇಳುವ ಮಾತುಗಳ ಬಗ್ಗೆ, ಅವರು ಮಾಡುವ ಕೆಲಸಗಳ ಬಗ್ಗೆ ಆಸಕ್ತಿ ತೋರಿಸುತ್ತಾರೆ. ಒಂದು ರೀತಿಯಲ್ಲಿ ಬಹಳಷ್ಟು ಜನ ಅವರ ಮಾರ್ಗದಲ್ಲಿ ನಡೆಯುತ್ತಿರುತ್ತಾರೆ.

ನಾನೇ ಸರ್ವಸ್ವ! ಎಲ್ಲವೂ ನಾನೇ! ಎಂಬ ಸತ್ಯ ಅರ್ಥವಾಗುತ್ತದೆ. ಎಲ್ಲವೂ ಒಂದೇ ಎಂದು ಅರಿತುಕೊಳ್ಳುತ್ತಾರೆ. ಆದ್ದರಿಂದ ಎಲ್ಲರೊಂದಿಗೆ ಸ್ನೇಹದಿಂದ ಇರುತ್ತಾರೆ. ಅಂತಿಮವಾಗಿ ಪಕ್ಷಿಗಳು, ಪ್ರಾಣಿಗಳೊಂದಿಗೆ ಮಾತ್ರವಲ್ಲದೇ, ಕ್ರೂರ ಪ್ರಾಣಿಗಳೊಂದಿಗೆ ಸಹ ಸ್ನೇಹದಿಂದ ಇರುತ್ತಾರೆ. ಎಲ್ಲರ ಮೇಲೆ ದಯೆ, ಕರುಣೆ ತೋರಿಸುತ್ತಿರುತ್ತಾರೆ. ಯಾವುದನ್ನೂ ಹಿಂಸಿಸುವುದಿಲ್ಲ, ಯಾವುದನ್ನೂ ನೋಯಿಸುವುದಿಲ್ಲ. ಎಲ್ಲವನ್ನೂ ರಕ್ಷಿಸುತ್ತಾರೆ. ಪ್ರಪಂಚದಲ್ಲಿ ಈ ಸತ್ಯವನ್ನು ತಿಳಿಯದ ಇತರರು, ಇತರ ಜೀವಿಗಳು ಬೇರೇ ಎಂದುಕೊಳ್ಳುತ್ತಾ, ಅವರ ವಿಷಯದಲ್ಲಿ ತಪ್ಪುಗಳು, ಪಾಪಗಳನ್ನು ಮಾಡುತ್ತಾ ಅವುಗಳ ಫಲಿತಾಂಶವನ್ನು ಕಷ್ಟಗಳ ರೂಪದಲ್ಲಿ ಅನುಭವಿಸುತ್ತಾ, ಆನಂದವನ್ನು ಕಳೆದುಕೊಂಡವರ

ಆನಂದಕ್ಕೋಸ್ಕರ, ಅವರ ಒಳಿತಿಗೋಸ್ಕರ ಶ್ರಮಪಡುತ್ತಾರೆ. ತನಗಿಂತ ಇತರರ ಒಳಿತಿಗಾಗಿ, ಆನಂದಕ್ಕಾಗಿ ಹೆಚ್ಚಿನ ಪ್ರಾಮುಖ್ಯತೆ ಕೊಡುತ್ತಾರೆ.

ಇವರಿಗೆ ನಿಧಾನವಾಗಿ ಆತ್ಮಶಕ್ತಿಗಳು ಅಂದರೆ ಅತೀಂದ್ರಿಯ ಶಕ್ತಿಗಳು ದೊರೆಯುತ್ತವೆ. ಅತೀಂದ್ರಿಯ ಜ್ಞಾನವು ಸಹ ಉಂಟಾಗುತ್ತಿರುತ್ತದೆ. ಜನಸಾಮಾನ್ಯರು ಮಾಡಲಾರದ ಕೆಲಸಗಳನ್ನು ಮಾಡುತ್ತಿರುತ್ತಾರೆ. ಹೇಳಲಾರದ ವಿಷಯಗಳನ್ನು ಹೇಳುತ್ತಿರುತ್ತಾರೆ. ಅವರು ಮಾಡುವ ಕೆಲಸಗಳು, ಹೇಳುವ ಮಾತುಗಳು ಎಲ್ಲರನ್ನೂ ಆಶ್ಚರ್ಯ ಚಕಿತರನ್ನಾಗಿ ಮಾಡುತ್ತವೆ. ಇವರು ಸಾಮಾನ್ಯರಲ್ಲ, ದೈವಾಂಶ ಸಂಭೂತರೆಂದು ಸಾಮಾನ್ಯರು ಹೊಗಳುತ್ತಿರುತ್ತಾರೆ, ಕೊಂಡಾಡುತ್ತಿರುತ್ತಾರೆ, ದೇವರೆಂದು ಆರಾಧಿಸುವವರು ಸಹ ಇರುತ್ತಾರೆ.

ಈ ಸ್ಥಿತಿಯಲ್ಲಿ ಇವರಿಗೆ ಬಹಳಷ್ಟು ವಿಧದ ಅನುಭವಗಳು ಉಂಟಾಗುತ್ತಿರುತ್ತವೆ. ಅವುಗಳಿಂದಾಗಿ ಅವರ ಜ್ಞಾನವು ಸಹ ಇನ್ನಷ್ಟು ಹೆಚ್ಚುತ್ತಿರುತ್ತದೆ.

ಅವರ ಮನಸ್ಸು ಇನ್ನಷ್ಟು ಶೂನ್ಯವಾಗುತ್ತಾ ಹೋದಂತೆ ಅವರ ಆತ್ಮಸ್ಥಿತಿ ಹೆಚ್ಚುತ್ತಿರುತ್ತದೆ. ಹೀಗೆ ಆತ್ಮಸ್ಥಿತಿ ಹೆಚ್ಚಾದಂತೆಲ್ಲಾ ಅವರಲ್ಲಿ ಮೇಲಿನ ಲಕ್ಷಣಗಳೆಲ್ಲವೂ ಹೆಚ್ಚುತ್ತಾ ಹೋಗುತ್ತವೆ. ನಿಧಾನವಾಗಿ ಅವರಿಗೆ ಅಣಿಮ, ಮಹಿಮ, ಗರಿಮ, ಲಘಿಮ ದಂತಹ ಸಿದ್ಧಿಗಳು ಸಹ ಉಂಟಾಗುತ್ತವೆ. ಈ ಸ್ಥಿತಿಯಲ್ಲಿ ವಿಧವಿಧವಾದ ಶಕ್ತಿಗಳು ಸಹ ಉಂಟಾಗಬಹುದು. ಇವರಿಗೆ ದಿವ್ಯನೇತ್ರದ ಅನುಭವಗಳು ಸಹ ಉಂಟಾಗಬಹುದು. ಅಂತಹವರು ಭವಿಷ್ಯತ್ತಿನಲ್ಲಿ ನಡೆಯಬಹುದಾದಂತಹ ವಿಷಯಗಳನ್ನು ತಿಳಿದುಕೊಳ್ಳುತ್ತಾರೆ. ನಮ್ಮ ಎದುರುಗಡೆ ಇರುವವರು ಏನು ಯೋಚಿಸುತ್ತಿದ್ದಾರೆ ಎಂಬುದನ್ನು ಸಹ ತಿಳಿದುಕೊಳ್ಳುತ್ತಾರೆ. ಸೃಷ್ಟಿಯಲ್ಲಿ ನಡೆಯುವ ಕೆಲವು ವಿಷಯಗಳ ಬಗ್ಗೆ ಸಹ ತಿಳಿದುಕೊಳ್ಳುತ್ತಾರೆ.

ಇಂತಹ ಶಕ್ತಿಗಳನ್ನಾಗಲೀ, ಸಿದ್ಧಿಗಳನ್ನಾಗಲೀ ಪಡೆದವರಲ್ಲಿ ಕೆಲವರು ಅವುಗಳನ್ನು ಪ್ರದರ್ಶಿಸುತ್ತಾ ಜನಸಾಮಾನ್ಯರ ಹತ್ತಿರ ತಾವು ದೈವಾಂಶ ಸಂಭೂತರೆಂಬಂತೆ ಪ್ರವರ್ತಿಸುತ್ತಾರೆ. ಅವುಗಳನ್ನು ಪ್ರದರ್ಶಿಸುತ್ತಾ ಜನಸಾಮಾನ್ಯರನ್ನು ಆಕರ್ಷಿಸುತ್ತಾರೆ. ವಶಪಡಿಸಿಕೊಳ್ಳುತ್ತಾರೆ. ನಿಧಾನವಾಗಿ ಅವರ ಮೇಲೆ ಪ್ರಾಬಲ್ಯ ಸಾಧಿಸಿ ಅವರ ಮೂಲಕ ಸಂಪತ್ತನ್ನು ಹೆಚ್ಚಿಸಿಕೊಳ್ಳುತ್ತಾರೆ. ಭೋಗಗಳನ್ನು ಅನುಭವಿಸುತ್ತಿರುತ್ತಾರೆ. ಹೀಗೆ ಭೋಗಗಳಲ್ಲಿ ಮುಳುಗಿ ಕೊನೆಗೆ ತಮ್ಮ ಗುರಿ ಏನೆಂಬುದನ್ನು ಮರೆತುಬಿಡುತ್ತಾರೆ.

ಅಹಂಕಾರದಿಂದ ತಮಗೆ ದೊರೆತ ಶಕ್ತಿಗಳನ್ನು ಜ್ಞಾನ ವೃದ್ಧಿಗೆ ಉಪಯೋಗಿಸಿಕೊಳ್ಳದಂತೆ ತಮ್ಮ ಸ್ವಾರ್ಥಕ್ಕೆ ಉಪಯೋಗಿಸುವುದರಿಂದ, ಮಾಡಬಾರದ ಕೆಲಸಗಳನ್ನು ಮಾಡುವುದರಿಂದ, ಸೃಷ್ಟಿಗೆ ವಿರುದ್ಧವಾಗಿ ಪ್ರವರ್ತಿಸುವುದರಿಂದ ಅವರು ಸಂಪಾದಿಸಿಕೊಂಡ ಶಕ್ತಿಗಳೆಲ್ಲವನ್ನು ಕಳೆದುಕೊಳ್ಳುತ್ತಾರೆ. ಪುನಃ ಮಾಮೂಲುಸ್ಥಿತಿಗೆ ತಲುಪುತ್ತಾರೆ.

ಯಾರಾದರೆ ತಮಗೆ ದೊರೆತ ಶಕ್ತಿಗಳನ್ನು ಪ್ರಾಪಂಚಿಕ ಭೋಗಗಳಿಗೆ, ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳದಂತೆ ಜ್ಞಾನವೃದ್ಧಿಗೆ ಉಪಯೋಗಿಸುತ್ತಾರೋ ಅವರು ಆಧ್ಯಾತ್ಮಿಕವಾಗಿ ಆತ್ಮಪರವಾಗಿ ಇನ್ನಷ್ಟು ಇನ್ನಷ್ಟು ಬೆಳೆಯುತ್ತಾರೆ. ತಮ್ಮ ಜ್ಞಾನವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳುತ್ತಾರೆ. ಇಂತಹವರು ಭೋಗಗಳ ಮೇಲೆ ದೃಷ್ಟಿಯನ್ನು ಕೇಂದ್ರೀಕರಿಸುವುದಿಲ್ಲ. ಸಾಧನೆಯ ಮೇಲೆಯೇ ದೃಷ್ಟಿ ಇರಿಸುತ್ತಾರೆ. ಅವರ ಸಾಧನೆ ಯಾವ ಸ್ಥಿತಿಗೆ ಸೇರುತ್ತದೆ ಎಂದರೆ ಅವರು ಅವಿರತವಾಗಿ ಅಂದರೆ ಕುಳಿತುಕೊಂಡವರು ಎದ್ದೇಳದಂತೆ ಧ್ಯಾನಸ್ಥಿತಿಯಲ್ಲಿಯೇ ಇದ್ದುಬಿಡುತ್ತಾರೆ.

ಹೀಗೆ ಇರುವುದರಿಂದ ಅವರ ಮನಸ್ಸು ಪೂರ್ತಿಯಾಗಿ ಶೂನ್ಯವಾಗುತ್ತದೆ. ಒಂದು ರೀತಿಯಲ್ಲಿ ಸುಟ್ಟುಹೋದ ಹಗ್ಗದಂತೆ ತಯಾರಾಗುತ್ತದೆ. ಅಂದರೆ ಸುಟ್ಟು ಹೋದಾಗ ನೋಡಲು ಹಗ್ಗದಂತೆ ಇರುತ್ತದೆಯೇ ಹೊರತು ಯಾವುದೇ ರೀತಿಯ ಹಿಡಿತವನ್ನು ಹೊಂದಿರುವುದಿಲ್ಲ. ಹಿಡಿದುಕೊಂಡರೆ ಕೈಗೆ ಸಿಗುವುದಿಲ್ಲ. ಒಂದು ರೀತಿಯಲ್ಲಿ ಇದ್ದರೂ ಇಲ್ಲದಂತೆಯೇ. ಇದನ್ನೇ ಆತ್ಮಸ್ಥಿತಿ ಎನ್ನುತ್ತಾರೆ. ಆತ್ಮ ಸಾಕ್ಷಾತ್ಕಾರದ ಸ್ಥಿತಿಯೆಂದು ಹೇಳಬಹುದು. ಸಮಾಧಿ ಸ್ಥಿತಿ ಎಂದೂ ಸಹ ಕರೆಯುತ್ತಾರೆ. ತನ್ನನ್ನು ತಾನು ದೈವವೆಂದು ಅನುಭವಪೂರ್ವಕವಾಗಿ ತಿಳಿದುಕೊಂಡಸ್ಥಿತಿ.

ಇಲ್ಲಿ ನಾವು ಗಮನಿಸಬೇಕಾದ ಅಂಶವೆಂದರೆ ಮನಸ್ಸು ಶೂನ್ಯವಾಗುತ್ತಾ ಹೋದಂತೆ ಆತ್ಮಸ್ಥಿತಿ ಉಂಟಾಗುತ್ತದೆ, ಆತ್ಮ ಸ್ಥಿತಿಯು ಉದ್ಭವಿಸಿದಂತೆ ಆತ್ಮದ ಅನುಭವಗಳು, ಆತ್ಮ ಶಕ್ತಿಗಳು ಸಂಕ್ರಮಿಸುತ್ತವೆ. ಇದರ ಮೂಲಕ ಬಹಳಷ್ಟು ತಿಳಿದುಕೊಳ್ಳುತ್ತಾರೆ, ಸಾಮಾನ್ಯ ಜನರು ಮಾಡಲಾರದ ಬಹಳಷ್ಟು ಕೆಲಸಗಳನ್ನು ಮಾಡಬಲ್ಲರು.

ಆತ್ಮದ ಬಗ್ಗೆ

ಆತ್ಮ ಎಂಬುದು ಸರ್ವವ್ಯಾಪಿಯಾದ ಅನಂತವಾದ ಶಕ್ತಿ, ಎಲ್ಲರಲ್ಲಿಯೂ ಇರುವ ಭಗವತ್‌ಶಕ್ತಿ. ಆತ್ಮಶಕ್ತಿಯು ಎಷ್ಟು ಶ್ರೇಷ್ಠವಾದದ್ದೆಂದರೆ ಈ ಪ್ರಪಂಚದಲ್ಲಿರುವ ಎಲ್ಲಾ ಕಂಪ್ಯೂಟರ್‌ಗಳಿಗಿಂತ ಶತಕೋಟಿ ಪಟ್ಟು ಹೆಚ್ಚು ಶಕ್ತಿಯುಳ್ಳದ್ದು. ಒಂದು ವಿಧದಲ್ಲಿ ಆತ್ಮಶಕ್ತಿಯನ್ನು ಊಹಿಸಬಲ್ಲ ಶಕ್ತಿ ಮಾನವರಿಗೆ ಇಲ್ಲವೇ ಇಲ್ಲ ಎಂದು ಹೇಳಬಹುದು.

ಅಂತಹ ಆತ್ಮ ಪ್ರತಿಯೊಬ್ಬರಲ್ಲೂ ಇದೆ, ಆದ್ದರಿಂದ ಮಾನವರು ಮಾಡುವ ಕೆಲಸಗಳು, ಮಾನವ ತಿಳಿದುಕೊಳ್ಳುವ, ಕಲಿತುಕೊಳ್ಳುವ ವಿಷಯಗಳು ಆತ್ಮದಲ್ಲಿ ದಾಖಲಾಗುತ್ತಿರುತ್ತವೆ. ಒಂದು ವಿಧದಲ್ಲಿ ಮಾನವ ಹುಟ್ಟಿದಾಗಿನಿಂದ ಸಾಯುವವರೆಗೂ ಪ್ರತೀಕ್ಷಣ ಮಾಡಿದ ಕೆಲಸಗಳು, ಮಾತನಾಡಿದ ಮಾತುಗಳು ಎಲ್ಲವೂ ದಾಖಲಾಗುತ್ತವೆ. ಹೀಗೆ ಎಷ್ಟು ಜನ್ಮಗಳು ಕಳೆದರೂ ಅಷ್ಟು ಜನ್ಮಗಳು ಆತ್ಮದಲ್ಲಿ ಪೂರ್ತಿಯಾಗಿ ದಾಖಲಾಗುತ್ತವೆ. ಒಂದು ರೀತಿಯಲ್ಲಿ ಸಿ.ಸಿ ಕ್ಯಾಮೆರಾ ಇಟ್ಟಾಗ ಆ ಸಿ.ಸಿ ಕ್ಯಾಮರಾದ ಎದುರುಗಡೆ ಇರುವ ದೃಶ್ಯವೆಲ್ಲಾ ಎಷ್ಟು ದಿನಗಳವರೆಗೆ ಇರಿಸಿದರೆ ಅಷ್ಟು ದಿನಗಳು ಹೇಗೆ ರಿಕಾರ್ಡ್ ಮಾಡುತ್ತದೆಯೋ! ಅದೇ ರೀತಿ ಆ ಆತ್ಮದಲ್ಲಿ ಅವರ ಜನ್ಮಗಳೆಲ್ಲವೂ ದಾಖಲಾಗುತ್ತವೆ. ಅವರು ಕಲಿತುಕೊಂಡ ಜ್ಞಾನವೆಲ್ಲಾ ದಾಖಲಾಗುತ್ತದೆ. ಅವರು ಕಲಿತ ವಿದ್ಯೆಗಳು, ಭಾಷೆಗಳು. ಅವರು ಹೊಂದಿದ ಅನುಭವಗಳೆಲ್ಲಾ ದಾಖಲಾಗುತ್ತವೆ. ಅವರು ಮಾಡಿದ ಕರ್ಮಗಳೆಲ್ಲವೂ ದಾಖಲಾಗುತ್ತವೆ. ಹಾಗೆ ಅವರ ಹಿಂದಿನ ಜನ್ಮಗಳ ವೃತ್ತಾಂತವೆಲ್ಲಾ ಸಂಪೂರ್ಣವಾಗಿ ಆತ್ಮದಲ್ಲಿ ಸಂಗ್ರಹವಾಗುತ್ತದೆ. ಅಷ್ಟೇಅಲ್ಲ ಅವರ ಆಲೋಚನೆಗಳು ಸಹ ಆತ್ಮಕ್ಕೆ ತಿಳಿಯುತ್ತವೆ. ಅಷ್ಟು ಶಕ್ತಿಯುಳ್ಳದ್ದು ಆತ್ಮ.

ದಿವ್ಯನೇತ್ರ (ಮೂರನೇ ಕಣ್ಣು)

ಆತ್ಮಶಕ್ತಿಯು ಮಾನವ ಶರೀರವನ್ನೆಲ್ಲಾ ವ್ಯಾಪಿಸಿರುತ್ತದೆ. ಶರೀರದಲ್ಲಿನ ಪ್ರತಿಯೊಂದು ಜೀವಕೋಶದಲ್ಲಿಯೂ ಸಹ ವ್ಯಾಪಿಸಿರುತ್ತದೆ. ಒಂದು ರೀತಿಯಲ್ಲಿ ಆತ್ಮ ಶಕ್ತಿಯಿಂದಲೇ ಶರೀರದಲ್ಲಿನ ಕ್ರಿಯೆಗಳು, ಕೆಲಸಗಳು ನಡೆಯುತ್ತಿವೆ. ಜೀವಚಟುವಟಿಕೆಗಳು ನಿರ್ವಹಿಸಲ್ಪಡುತ್ತಿವೆ.

ಆತ್ಮ ಇಡೀ ಶರೀರವನ್ನು ವ್ಯಾಪಿಸಿದ್ದರೂಸಹ ಆತ್ಮದ ಕೇಂದ್ರ ಸ್ಥಾನ ಮಾತ್ರ ಭ್ರುಕುಟಿಯ ಸ್ಥಾನದಲ್ಲಿ ಇರುತ್ತದೆ. ಅಂದರೆ ಹಣೆಬೊಟ್ಟು ಇಟ್ಟುಕೊಳ್ಳುವ ಭಾಗದಲ್ಲಿ ಇರುತ್ತದೆ. ಆ ಭಾಗದಲ್ಲಿಯೇ ಮೂರನೇ ಕಣ್ಣು ಇರುತ್ತದೆ ಎನ್ನುತ್ತಾರೆ. ಆದಕ್ಕಾಗಿಯೇ ಆ ಭಾಗದಲ್ಲಿ ಶಿವನ ಮೂರನೇ ಕಣ್ಣನ್ನು ತೋರಿಸುತ್ತಾರೆ.

ಮೂರನೇ ಕಣ್ಣನ್ನೇ ದಿವ್ಯನೇತ್ರ ಎಂದೂಸಹ ಕರೆಯುತ್ತಾರೆ. ಮೂರನೇ ಕಣ್ಣು ಅಂದರೆ ಆ ಭ್ರುಕುಟಿಯ ಸ್ಥಾನದಲ್ಲಿ ಬೇರೇ ಒಂದು ಕಣ್ಣು ಮಡಚಿಕೊಂಡು ಇರುತ್ತದೆ ಎಂದು ಭಾವಿಸುತ್ತಾರೆ. ಮೂರನೇ ಕಣ್ಣು ಎಂದರೆ ವಿಶೇಷವಾದ ಕಣ್ಣೇನು ಅಲ್ಲ 'ಆತ್ಮ'ವನ್ನೇ ಮೂರನೇ ಕಣ್ಣು ಎನ್ನುತ್ತಾರೆ. 'ದಿವ್ಯನೇತ್ರ' ಎನ್ನುತ್ತಾರೆ.

ಮೂರನೇ ಕಣ್ಣು ತೆರೆಯುವುದು ಎಂದರೆ ಆತ್ಮಸ್ಥಿತಿಹೊಂದಿ ಆತ್ಮದಲ್ಲಿ ದಾಖಲಾಗಿರುವವುಗಳನ್ನೆಲ್ಲಾ ನೋಡುವುದು, ತಿಳಿದುಕೊಳ್ಳುವುದು. ಅವರ ಆತ್ಮಸ್ಥಿತಿ ಹೆಚ್ಚಾದಂತೆ ಅವರು ತಿಳಿದುಕೊಳ್ಳುವ ವಿಷಯಗಳು ಹೆಚ್ಚುತ್ತಾ ಹೋಗುತ್ತವೆ. ಈ ಆತ್ಮಸ್ಥಿತಿ ಎಂಬುದು ಮನಸ್ಸು ಶೂನ್ಯವಾಗುತ್ತಾ ಹೋದಂತೆ ಉಂಟಾಗುತ್ತದೆ. ಅಂದರೆ ದಿವ್ಯನೇತ್ರ ತೆರೆದುಕೊಳ್ಳುತ್ತಿರುತ್ತದೆ. ಅಂದರೆ ಕೆಲಸ ಮಾಡಲು ಪ್ರಾರಂಭಿಸುತ್ತದೆ. ಈ ದಿವ್ಯ ನೇತ್ರವು ಮನಸ್ಸು ಎಷ್ಟು ಶೂನ್ಯವಾದರೆ ಅಷ್ಟು ಹೆಚ್ಚು ಕೆಲಸ ಮಾಡುತ್ತದೆ. ಅಂದರೆ ಮೂರನೇ ಕಣ್ಣಿನ ವ್ಯಾಪ್ತಿ ಹೆಚ್ಚುತ್ತಾ ಹೋಗುತ್ತದೆ. ಅಂದರೆ ತಿಳಿದುಕೊಳ್ಳಬೇಕಾದ ವಿಷಯಗಳು ವಿಸ್ತಾರವಾಗುತ್ತವೆ.

ಈ ಮನೋ ಶೂನ್ಯವನ್ನು ಮೂರು ರೀತಿಯಲ್ಲಿ ಹೆಸರಿಸಲಾಗಿದೆ. (1) ಶೂನ್ಯ, (2) ಪರಿಶೂನ್ಯ, (3) ಮಹಾ ಪರಿಶೂನ್ಯ.

ಹೀಗೆ ಮನಸ್ಸು ಶೂನ್ಯವಾಗುತ್ತಾ ಹೋದಂತೆ ಅವರು ತಿಳಿದುಕೊಳ್ಳಬೇಕಾದ ವಿಷಯಗಳು, ಸೃಷ್ಟಿ ರಹಸ್ಯಗಳ ವ್ಯಾಪ್ತಿ ವಿಸ್ತರಿಸುತ್ತಿರುತ್ತದೆ. ಉದಾಹರಣೆಗೆ ಮನಸ್ಸು ಶೂನ್ಯವಾದಾಗ ಆತ್ಮಸ್ಥಿತಿ ಉಂಟಾದ ಪ್ರಾಥಮಿಕ ಹಂತದಲ್ಲಿ ಮೂರನೇ ಕಣ್ಣು ಅಂದರೆ ದಿವ್ಯನೇತ್ರ ಉತ್ತೇಜನಗೊಳ್ಳುವುದು ಪ್ರಾರಂಭವಾಗುತ್ತಾ ಇರುತ್ತದೆ. ಅಂತಹ ಸ್ಥಿತಿಯಲ್ಲಿ ಅವರಿಗೆ ಹಿಂದಿನ ಜನ್ಮಗಳು, ಹಿಂದಿನ ಜನ್ಮಗಳಲ್ಲಿ ಕಲಿತುಕೊಂಡ ವಿಷಯಗಳು, ಹೊಂದಿದ ಜ್ಞಾನ ಸ್ಮರಣೆಗೆ ಬರುತ್ತಿರುತ್ತದೆ. ಅಂತಹವರು ಆ ವಿಷಯಗಳನ್ನು ಎಲ್ಲರಿಗೂ ಹೇಳುತ್ತಿರುತ್ತಾರೆ. ಪುಸ್ತಕಗಳನ್ನು ಸಹ ಬರೆಯುತ್ತಿರುತ್ತಾರೆ. ಸಹಜವಾಗಿ ಅವರು ಹೇಳುವ ವಿಷಯಗಳು, ಬರೆಯುವ ವಿಷಯಗಳನ್ನು ಎಲ್ಲಿಯೂ ಸಹ ಓದಿರುವುದಿಲ್ಲ, ಕೇಳಿರುವುದಿಲ್ಲ. ಅವುಗಳನ್ನು ಹೇಳುತ್ತಿರುವಾಗ ಇತರರಿಗಷ್ಟೇ ಅಲ್ಲ, ಅವರಿಗೂ ಸಹ ಆಶ್ಚರ್ಯವನ್ನುಂಟು ಮಾಡುತ್ತದೆ. ಕೇಳುವವರು ಅಚ್ಚರಿಗೊಳ್ಳುತ್ತಾ ಅದು ಅವರ 'ಪೂರ್ವ ಜನ್ಮ ಸುಕೃತ' ಅದಕ್ಕಾಗಿಯೇ ಹೇಳುತ್ತಿದ್ದಾರೆ ನಾವು ಹಾಗೆ ಹೇಳಲು ಸಾಧ್ಯವೇ? ಎನ್ನುತ್ತಾರೆ. ಎಂದುಕೊಳ್ಳುತ್ತಾರೆ ಸಹ. ಇದರಲ್ಲಿ ಯಾವುದೇ ರಹಸ್ಯವಿಲ್ಲ. ಮನಸ್ಸು ಶೂನ್ಯವಾಗುವುದರಿಂದ, ಆತ್ಮ ಸ್ಥಿತಿಯನ್ನು ಹೊಂದುವುದರಿಂದ, ಮೂರನೇ ಕಣ್ಣು ಉತ್ತೇಜನವಾಗುವುದರಿಂದ ಹಿಂದಿನ ಜನ್ಮಗಳಲ್ಲಿ ಕಲಿತ, ಹೊಂದಿದ ಜ್ಞಾನ ಸ್ಮರಣೆಗೆ ಬರುವುದರಿಂದ ಹೀಗೆ ನಡೆಯುತ್ತದೆ. ಹೀಗೆ ಯಾರಿಗಾದರೂ ಸಂಭವಿಸುತ್ತದೆ ಆದರೆ ಅವರು ಮನಸ್ಸನ್ನು ಶೂನ್ಯ ಮಾಡಿಕೊಂಡು ಆತ್ಮ ಸ್ಥಿತಿ ಹೊಂದಬೇಕು.

ಇಂತಹ ಸ್ಥಿತಿಯಲ್ಲಿರುವವರು ತಮ್ಮ ಸಾಧನೆಯನ್ನು ಇನ್ನಷ್ಟು ತೀವ್ರಗೊಳಿಸಿದರೆ ಆತ್ಮ ಸ್ಥಿತಿಯು ಮತ್ತಷ್ಟು ಹೆಚ್ಚಾಗುತ್ತದೆ. ಆಗ ಅವರ ಆತ್ಮದಲ್ಲಿ ದಾಖಲಾದ ಹಿಂದಿನ ಜನ್ಮಗಳೆಲ್ಲವನ್ನು ಚಲನಚಿತ್ರದಲ್ಲಿ ನೋಡಿದಂತೆ ಬಹಳ ಸ್ಪಷ್ಟವಾಗಿ ನೋಡಲು ಸಾಧ್ಯವಾಗುತ್ತದೆ. ಅಂದರೆ ಅವರ ಮೂರನೇ ಕಣ್ಣು ಅಂದರೆ ದಿವ್ಯನೇತ್ರ ಚೆನ್ನಾಗಿ ತೆರೆದಿದೆ ಎನ್ನುತ್ತೇವೆ.

ಈ ಸ್ಥಿತಿಯಲ್ಲಿ ಅವರು ಯಾವ ಯಾವ ಜನ್ಮಗಳಲ್ಲಿ ಎಂತಹ ಕರ್ಮಗಳನ್ನು ಮಾಡಿದ್ದಾರೆ? ಅವುಗಳ ಫಲಿತಾಂಶವನ್ನು ನಂತರದ ಜನ್ಮಗಳಲ್ಲಿ ಹೇಗೆ ಅನುಭವಿಸುತ್ತಾರೆ? ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳುತ್ತಾರೆ. ಈ ಜ್ಞಾನವನ್ನು ಹೊಂದುವುದರಿಂದ ಯಾವ ಯಾವ ಕರ್ಮಗಳನ್ನು ಮಾಡಬೇಕು? ಯಾವ ಯಾವ ಕರ್ಮಗಳನ್ನು ಮಾಡಬಾರದು? ಎಂಬುದು ಚೆನ್ನಾಗಿ ಅರಿವಿಗೆ ಬರುತ್ತದೆ. ಇದರ ಮೂಲಕ ಅವರು ತಮ್ಮ ಪ್ರವರ್ತನೆಯನ್ನು ಬಹಳಷ್ಟು ಸರಿ ಮಾಡಿಕೊಳ್ಳುತ್ತಾರೆ. ಅವರ

ಜೀವನದಲ್ಲಿ ನಷ್ಟವನ್ನುಂಟು ಮಾಡುವ ಕೆಲಸಗಳನ್ನು ಮಾಡುವುದಿಲ್ಲ. ಸೃಷ್ಟಿಗೆ ವಿರುದ್ಧವಾದ ಕೆಲಸಗಳನ್ನು ಮಾಡುವುದಿಲ್ಲ. ಈ ವಿಷಯಗಳನ್ನು ಇತರರಿಗೆ ಬೋಧಿಸುತ್ತಾರೆ. ಅವರ ತಪ್ಪುಗಳನ್ನು ತಿಳಿಯಪಡಿಸುತ್ತಾರೆ. ಅವರು ತಪ್ಪುಗಳನ್ನು ಮಾಡದಂತೆ ಮಾಡುತ್ತಾರೆ. ಅವರು ಕಷ್ಟಗಳಲ್ಲಿ ಬೀಳದಂತೆ ಹೆಚ್ಚರಿಸುತ್ತಾರೆ. ಇದೆಲ್ಲಾ ಆತ್ಮಸ್ಥಿತಿಯನ್ನು ಹೊಂದುವುದರಿಂದ ಬಂದ ಜ್ಞಾನದಿಂದ ಸಾಧ್ಯವಾಗುತ್ತದೆ.

ಹೀಗೆ ಕರ್ಮಗಳನ್ನೆಲ್ಲಾ ಭಸ್ಮ ಮಾಡಿಕೊಂಡವರು ದುಃಖದಿಂದ ಹೊರಬಂದಂತೆಯೇ. ಅಂದರೆ ಕಷ್ಟಗಳಿಂದ ಮುಕ್ತಿಯನ್ನು ಹೊಂದಿದಂತೆಯೇ.

ಅಷ್ಟೇ ಅಲ್ಲ ಆತ್ಮಕ್ಕೆ ಹತ್ತಿರವಾಗುತ್ತಾ ಹೋದಂತೆ ಆತ್ಮದ ಲಕ್ಷಣಗಳು ಏರ್ಪಡುತ್ತವೆ. ಆತ್ಮ ಎಂದರೆ ಸಾಕ್ಷಾತ್ತು ಭಗವಂತ ಆದ್ದರಿಂದ ಅವರಿಗೆ ಆ ಲಕ್ಷಣಗಳು ಉಂಟಾಗುತ್ತವೆ ಆತ್ಮ ನಿತ್ಯಾನಂದ ಸ್ವರೂಪವಾದ್ದರಿಂದ ಆ ಸ್ಥಿತಿಯನ್ನು ಹೊಂದುವವರು ಅವರಿಗೆ ತಿಳಿಯದಂತೆ ಆನಂದಾನುಭವವನ್ನು ಅನುಭವಿಸುತ್ತಾರೆ. ಆತ್ಮ ಪ್ರೇಮ ಸ್ವರೂಪವಾಗಿರುವುದರಿಂದ ಅವರು ಎಲ್ಲರನ್ನೂ ಪ್ರೀತಿಸುತ್ತಾರೆ. ಅವರಲ್ಲಿ ನಿಧಾನವಾಗಿ ದ್ವೇಷ, ಈರ್ಷೆ, ಅಸೂಯೆ ಕಡಿಮೆಯಾಗುತ್ತವೆ ಸಕಲ ಜೀವರಾಶಿಯನ್ನು ಪ್ರೀತಿಸುತ್ತಾರೆ ಆತ್ಮ ಅಂದರೆ ಭಗವಂತನಾಗಿರುವುದರಿಂದ ಈ ಸ್ಥಿತಿಯನ್ನು ಹೊಂದುವವರಿಗೆ ಕೋರಿಕೆಗಳು ಕಡಿಮೆಯಾಗುತ್ತವೆ ಇರುವುದರಲ್ಲಿಯೇ ತೃಪ್ತಿ ಪಡುತ್ತಾರೆ ಭೋಗಗಳ ಮೇಲೆ ಆಸಕ್ತಿ ಕಡಿಮೆಯಾಗುತ್ತದೆ ಸಂಪತ್ತಿನ ಮೇಲೆ ವ್ಯಾಮೋಹ ಕಡಿಮೆಯಾಗುತ್ತದೆ.

ಇವರೇನಾದರೂ ಧ್ಯಾನ ಸಾಧನೆಯನ್ನು ಇನ್ನೂ ಹೆಚ್ಚು.... ಹೆಚ್ಚು.... ತೀವ್ರವಾಗಿ ಮುಂದುವರಿಸಿದರೆ ಅವರ ಮನಸ್ಸು ಪರಿಶೂನ್ಯವಾಗುತ್ತದೆ. ಇವರ ಆತ್ಮದ ಸ್ಥಿತಿ ಮತ್ತಷ್ಟು ವಿಸ್ತರಿಸುತ್ತದೆ. ಅಂದರೆ ಅವರ ಮೂರನೇ ಕಣ್ಣಿನ ವ್ಯಾಪ್ತಿ ಮತ್ತಷ್ಟು ಹೆಚ್ಚುತ್ತದೆ. ಇವರ ಆತ್ಮ ಇತರರಲ್ಲಿರುವ ಆತ್ಮ ಒಂದೇ ಆಗಿರುವುದರಿಂದ ಈ ಸ್ಥಿತಿಯಲ್ಲಿ ಇವರ ಆತ್ಮ ಇತರರ ಆತ್ಮಗಳೊಂದಿಗೆ ಸಂಪರ್ಕಿಸುತ್ತದೆ. ಆದ್ದರಿಂದ ಅವರ ಆತ್ಮದಲ್ಲಿ ದಾಖಲಾದ ಅವರ ಹಿಂದಿನ ಜನ್ಮಗಳನ್ನು ಸಹ ತಿಳಿದುಕೊಳ್ಳುತ್ತಾರೆ. ಕಾರಣ ಈ ಹಂತಕ್ಕೆ ಬೆಳೆದವರು ಅಂದರೆ ಮನಸ್ಸನ್ನು ಪರಿಶೂನ್ಯ ಮಾಡಿಕೊಂಡವರು ಈ ರೀತಿಯ ಶಕ್ತಿಯನ್ನು ಹೊಂದಿರುತ್ತಾರೆ. ಇಂತಹವರನ್ನು ಸವಿಕಲ್ಪ ಸಮಾಧಿ ಹೊಂದಿದರು ಎಂದು ಹೇಳುತ್ತಾರೆ.

ಅದಕ್ಕಾಗಿಯೇ ಶ್ರೀ ಕೃಷ್ಣ ಭಗವಾನನು ಗೀತೆಯಲ್ಲಿ ಈ ವಿಷಯವನ್ನು ಹೇಳಿದ್ದಾನೆ.

ಶ್ಲೋಕ: ಬಹೂನಿಮೇ ವ್ಯತೀ ತಾನಿ ಜನ್ಮಾನಿ ತವ ಚಾರ್ಜುನ।

ತಾ ನ್ಯಹಂ ವೇದ ಸರ್ವಾಣಿ ನ ತ್ವಂ ವೇತ್ತ ಪರಂತಪ॥ (ಭ.ಗೀ.4–5)

ತಾ:-ಅರ್ಜುನ ನಿನಗೂ ನನಗೂ ಅನೇಕ ಜನ್ಮಗಳು ಕಳೆದಿವೆ. ಅವೆಲ್ಲವೂ ನನಗೆ ತಿಳಿದಿವೆ. ಆದರೆ ನಿನಗೆ ತಿಳಿದಿಲ್ಲ.

ಇದನ್ನಾಧರಿಸಿ ಶ್ರೀ ಕೃಷ್ಣನಿಗೆ ದಿವ್ಯನೇತ್ರ ಇತ್ತೆಂದು ಅರ್ಜುನನಿಗೆ ಇರಲಿಲ್ಲವೆಂದು ನಾವು ತಿಳಿದುಕೊಳ್ಳಬಹುದು.

ಅಷ್ಟೇಅಲ್ಲ ಈ ಸ್ಥಿತಿಗೆ ಸೇರಿದವರು ಅಂದರೆ ಮನಸ್ಸನ್ನು ಪರಿಶೂನ್ಯ ಮಾಡಿಕೊಂಡವರು ಅಂದರೆ ಇತರರ ಆತ್ಮದಲ್ಲಿ ದಾಖಲಾದ ಹಿಂದಿನ ಜನ್ಮಗಳನ್ನು ತಿಳಿದುಕೊಂಡವರು ಇತರರ ಮನಸ್ಸಿನಲ್ಲಿ ಅಂದುಕೊಳ್ಳುವ ವಿಷಯಗಳು, ಅವರ ಆಲೋಚನೆಗಳನ್ನು ಸಹ ತಿಳಿದುಕೊಳ್ಳಬಲ್ಲರು.

ಕಾರಣ ಮನಸ್ಸಿನಲ್ಲಿ ಅಂದುಕೊಳ್ಳುವಂತಹವೆಲ್ಲ ಆತ್ಮಕ್ಕೆ ತಿಳಿಯುತ್ತವೆ. ಅವರ ಆತ್ಮ ಇವರ ಆತ್ಮ ಅನುಸಂಧಾನವಾಗುವುದರಿಂದ ಇತರರು ಏನೆಂದುಕೊಳ್ಳುತ್ತಿದ್ದಾರೆ! ಏನು ಆಲೋಚಿಸುತ್ತಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಈ ಶಕ್ತಿಯನ್ನು ಹೊಂದಿರುವವರು ಜನಸಾಮಾನ್ಯರು ಅವರ ಹತ್ತಿರಕ್ಕೆ ಬಂದಾಗ ಅವರು ಏನೆಂದುಕೊಳ್ಳುತ್ತಿದ್ದಾರೆ ಎಂದು ತಿಳಿದುಕೊಳ್ಳುವುದರಿಂದ ಅವರು ಕೇಳದೆಯೇ ಅವರ ಮನಸ್ಸಿನಲ್ಲಿರುವ ವಿಷಯವನ್ನು ಪ್ರಸ್ತಾಪಿಸುವುದು. ಕೇಳುವುದಕ್ಕೆ ಮುಂಚೆಯೇ ಅವರ ಸಮಸ್ಯೆಗೆ ಪರಿಹಾರವನ್ನು ಹೇಳುವುದು, ಅವರು ನನ್ನ ಹತ್ತಿರಕ್ಕೆ ಬಂದರೆ ಚೆನ್ನಾಗಿರುತ್ತೆ ಎಂದು ಅಂದುಕೊಳ್ಳುವವರ ಹತ್ತಿರಹೋಗಿ ಮಾತನಾಡಿಸುವುದು ಇಂತಹವುಗಳನ್ನು ಮಾಡಿದಾಗ ಸಹಜವಾಗಿ ಜನಸಾಮಾನ್ಯರು ಆಶ್ಚರ್ಯ ಚಕಿತರಾಗುತ್ತಾರೆ. ನನ್ನ ಮನಸ್ಸಿನಲ್ಲಿ ಅಂದುಕೊಂಡದ್ದು, ಅಂದುಕೊಳ್ಳುತ್ತಿರುವುದು ಅವರಿಗೆ ಹೇಗೆ ತಿಳಿಯಿತು? ಅವರು ನಿಜವಾಗಿಯೂ ದೇವರೇ? ಎಂದುಕೊಳ್ಳುತ್ತಾ ಅವರ ಪಾದಗಳ ಮೇಲೆ ಬೀಳುತ್ತಿರುತ್ತಾರೆ. ಅವರು ಮಹಿಮೆಯುಳ್ಳವರು ಎಂದುಕೊಳ್ಳುತ್ತಾ ಅವರಿಗೆ ಪೂರ್ತಿಯಾಗಿ ಗುಲಾಮರಾಗುತ್ತಾರೆ. ಇಂತಹ ವುಗಳು ಸಹಜವಾಗಿ ಕೆಲವರು ಬಾಬಾಗಳು, ಗುರುಗಳ ವಿಷಯದಲ್ಲಿ ಸಂಭವಿಸುತ್ತವೆ. ಇದಕ್ಕೆಲ್ಲ ಕಾರಣ ಅವರ ಆತ್ಮ ಸ್ಥಿತಿ ವಿಸ್ತರಿಸುವುದು.

ಇಂತಹ ಸ್ಥಿತಿಯಲ್ಲಿರುವವರು ಧ್ಯಾನ ಸಾಧನೆಯನ್ನು ಇನ್ನಷ್ಟು ತೀವ್ರವಾಗಿ ಮುಂದುವರೆಸಿದರೆ ಅಂದರೆ ಅವರ ಮನಸ್ಸನ್ನು 'ಮಹಾ ಪರಿಶೂನ್ಯ' ಮಾಡಿಕೊಂಡರೆ ಇವರ ಆತ್ಮ ಸಮಸ್ತ ಸೃಷ್ಟಿಯನ್ನೆಲ್ಲಾ ವ್ಯಾಪಿಸಿರುವ ಚೈತನ್ಯದೊಂದಿಗೆ ವಿಲೀನಗೊಳ್ಳುತ್ತದೆ.

ಆದರಿಂದಾಗಿ ಸೃಷ್ಟಿಯೆಲ್ಲಾ ಅಂದರೆ ಸಮಸ್ತ ಲೋಕಗಳನ್ನು ವ್ಯಾಪಿಸಿರುವ ಆತ್ಮಕ್ಕೆ ಸಮಸ್ತ ಲೋಕಗಳು, ಸಮಸ್ತ ಸೃಷ್ಟಿ ರಹಸ್ಯಗಳೆಲ್ಲಾ ಹೇಗೆ ತಿಳಿಯುತ್ತವೆ! ಎಲ್ಲಿ ಏನಿದೆ? ಎಲ್ಲಿ ಏನು ಸಂಭವಿಸುತ್ತಿದೆ ಎಂಬುದು ಹೇಗೆ ತಿಳಿಯುತ್ತದೆಯೋ ಇವರಲ್ಲಿರುವ ಆತ್ಮದ ಮೂಲಕ ಇವರು ಸಹ ಸಮಸ್ತ ಲೋಕಗಳ ಬಗ್ಗೆ ತಿಳಿದುಕೊಳ್ಳುತ್ತಾರೆ. ಇಂತಹವರಿಗೆ ತಿಳಿಯದ ವಿಷಯವೇ ಇಲ್ಲ. ಪಡೆಯದ ಜ್ಞಾನ ಎಂಬುದು ಇರುವುದಿಲ್ಲ. ಸಮಸ್ತ ಸಂದೇಹಗಳು ಮತ್ತು ಸಂಶಯಗಳನ್ನು ನಿವೃತ್ತಿ ಗೊಳಿಸಿಕೊಳ್ಳುತ್ತಾರೆ. ಉತ್ತರಗಳನ್ನು ತಿಳಿದುಕೊಳ್ಳುತ್ತಾರೆ. ಇನ್ನು ಇವರಿಗೆ ತಿಳಿಯದೇ ಇರುವುದು ಯಾವುದೂ ಇಲ್ಲ. ಈ ಸ್ಥಿತಿಯನ್ನೇ 'ನಿರ್ವಿಕಲ್ಪ ಸಮಾಧಿ' ಎನ್ನುತ್ತಾರೆ.

ಇಂತಹ ಸ್ಥಿತಿಗೆ ಸೇರಿದವರು ಶಿವನ ಮೂರನೇ ಕಣ್ಣಿನಂತಹ ಕಣ್ಣನ್ನು ಹೊಂದಿದ್ದಾರೆ ಎಂದು ತಿಳಿದುಕೊಳ್ಳಬಹುದು. ಇದು ಸೃಷ್ಟಿಯಲ್ಲಿ ಅತ್ಯುತ್ತಮ ಸ್ಥಿತಿ.

ಬುದ್ಧನು 'ಆನಾಪಾನಸತಿ' ಅಂದರೆ 'ಶ್ವಾಸದ ಮೇಲೆ ಗಮನ' ಇರಿಸಿದ ಮೊದಲ ಜಾವದಲ್ಲಿಯೇ (ಹೊತ್ತು) ಮನಸ್ಸು ಶೂನ್ಯವಾಗಿ ತನ್ನ ಜನ್ಮ ಪರಂಪರೆಯನ್ನೆಲ್ಲಾ ನೋಡಿಕೊಳ್ಳಲು ಸಾಧ್ಯವಾಯಿತು. ಅವರು ಧ್ಯಾನ ಸಾಧನೆಯನ್ನು ಹಾಗೆಯೇ ಮುಂದುವರಿಸಿದಾಗ ಎರಡನೆಯ ಜಾವದಲ್ಲಿ ಮನಸ್ಸು ಪರಿಶೂನ್ಯವಾಗಿ ಎಲ್ಲರ ಜನ್ಮ ಪರಂಪರೆಗಳನ್ನು ತಿಳಿದುಕೊಳ್ಳಲು ಸಾಧ್ಯವಾಯಿತು. ತನ್ನ ಸಾಧನೆಯನ್ನು ಇನ್ನೂ ಮುಂದುವರಿಸಿ ಮೂರನೆಯ ಜಾವದಲ್ಲಿ ಮಹಾಪರಿಶೂನ್ಯ ಸ್ಥಿತಿಗೆ ಸೇರಿದಾಗ ಸಮಸ್ತ ಸೃಷ್ಟಿಯ ಬಗ್ಗೆ ತಿಳಿಯಲು ಸಾಧ್ಯವಾಯಿತು. ಬುದ್ಧನಾಗಲು ಸಾಧ್ಯವಾಯಿತು. ಸಂಪೂರ್ಣ ಜ್ಞಾನವನ್ನು ಪಡೆಯಲು ಸಾಧ್ಯವಾಯಿತು.

ಈ ಸ್ಥಿತಿಯನ್ನು ಹೊಂದಿದವರು ಸಂಪೂರ್ಣವಾಗಿ ದೇವರಂತೆ ಪ್ರವರ್ತಿಸುತ್ತಾರೆ. ಅಂದರೆ ಮಾನವನು ಮಾಧವನಾಗಿ ಬದಲಾದ ಸ್ಥಿತಿ. ನರನು ನಾರಾಯಣನಾಗಿ ಬದಲಾದ ಸ್ಥಿತಿ. ಈ ಸ್ಥಿತಿಯಲ್ಲಿ ಅವರ ಮೂರನೇಯ ಕಣ್ಣು ಸಂಪೂರ್ಣವಾಗಿ ತೆರೆದುಕೊಳ್ಳುತ್ತದೆ. ಪರಶಿವನ ಮೂರನೇ ಕಣ್ಣಿನಂತೆ ಇರುತ್ತದೆ. ಆದ್ದರಿಂದ ಸಮಸ್ತ ಸೃಷ್ಟಿಯಲ್ಲಿನ ಸಮಸ್ತ ಲೋಕಗಳಿಗೆ ಸಂಬಂಧಿಸಿದ ಪೂರ್ಣ ಜ್ಞಾನವು ಅವರಿಗೆ ಲಭಿಸುತ್ತದೆ. ಇಂತಹವರನ್ನು ಬ್ರಹ್ಮಜ್ಞಾನಿ ಎನ್ನುತ್ತಾರೆ. ಇದರ ಸಂಪೂರ್ಣ ಜ್ಞಾನದಿಂದ ಸೃಷ್ಟಿಯಲ್ಲಿನ ಸಮಸ್ತ ಲೋಕಗಳ ಬಗ್ಗೆ ತಿಳಿದುಕೊಳ್ಳುತ್ತಾರೆ. ಇನ್ನು ಸೃಷ್ಟಿಯಲ್ಲಿ ಅವರಿಗೆ ತಿಳಿಯದ್ದು ಯಾವುದೂ ಇರುವುದಿಲ್ಲ. ಸಂಪೂರ್ಣ ಅರಿವಿರುತ್ತದೆ. ಇವರಿಗೆ ಸಮಸ್ತ

ಶಕ್ತಿಗಳು ದೊರೆಯುತ್ತವೆ. ಎಂತಹ ಶಕ್ತಿ ಎಂದರೆ ಸೃಷ್ಟಿಗೆ ಪ್ರತಿ ಸೃಷ್ಟಿ ಮಾಡಬಲ್ಲರು. ಇವರನ್ನು ಬ್ರಹ್ಮರ್ಷಿಗಳು ಎನ್ನುತ್ತಾರೆ: ಪೂರ್ಣಾತ್ಮ ಎಂದೂ ಕರೆಯುತ್ತಾರೆ.

ಸಾಮಾನ್ಯ ಮನುಷ್ಯನಂತೆ ಪ್ರಾರಂಭವಾದ ಆ ರೀತಿಯ ಜೀವನವು ಧ್ಯಾನದ ಮೂಲಕ ಬ್ರಹ್ಮ ಜ್ಞಾನವನ್ನು ಸಂಪಾದಿಸಿಕೊಂಡು ಬ್ರಹ್ಮರ್ಷಿಯಾಗಿ, ಪೂರ್ಣಾತ್ಮವಾಗಿ, ಕೋಕ್ರಿಯೇಟರ್ ಆಗಿ ಬೆಳೆಯುತ್ತಾರೆ. ಇದೆಲ್ಲವೂ ಧ್ಯಾನದಿಂದಲೇ ಸಾಧ್ಯವಾಗುತ್ತದೆ ಆದ್ದರಿಂದ "ಧ್ಯಾನದಿಂದಲೇ ಜ್ಞಾನ" ಎಂದು ಹೇಳಲಾಗಿದೆ.

‘ಜ್ಞಾನವನ್ನು ಸುಲಭವಾಗಿ ಹೊಂದಬಲ್ಲೆವೇ?’

ಆಸಕ್ತಿ, ಛಲ, ಪರಿಶ್ರಮ ಇದ್ದರೆ ಜ್ಞಾನವನ್ನು ಯಾರು ಬೇಕಾದರೂ ಸುಲಭವಾಗಿ ಹೊಂದಬಹುದು. ಇವು ಗಳಿಲ್ಲದೇ ಜ್ಞಾನವನ್ನು ಹೊಂದಬೇಕು ಎಂದುಕೊಳ್ಳುವವರಿಗೆ ಪ್ರತಿಯೊಂದೂ, ಪ್ರತಿ ವಿಷಯದಲ್ಲಿಯೂ ಕಷ್ಟವೆಂದೇ ತೋರುತ್ತದೆ, ಕಷ್ಟವೇ ಆಗುತ್ತದೆ. ಏಕೆಂದರೆ ಅಂತಹವರಿಗೆ ಜ್ಞಾನವನ್ನು ಹೊಂದುವುದು ಅಷ್ಟು ಸುಲಭವಾದ ವಿಷಯವಲ್ಲ. ಕಾರಣ ಪ್ರಾರಂಭದಲ್ಲಿ ಚಂಚಲವಾದ ಮನಸ್ಸನ್ನು ನಿಶ್ಚಲ ಮಾಡಿಕೊಳ್ಳಬೇಕು. ಮನಸ್ಸು ನಿಶ್ಚಲವಾದರೇನೇ ‘ಧ್ಯಾನಸ್ಥಿತಿ’ಯನ್ನು ಹೊಂದಿದಂತೆ. ಹೀಗೆ ಮನಸ್ಸನ್ನು ನಿಶ್ಚಲ ಮಾಡಿಕೊಳ್ಳುವುದೇ ಬಹಳ ಬಹಳ ಕಷ್ಟ. ಏಕೆಂದರೆ ಮನಸ್ಸು ಒಂದು ವಿಧದಲ್ಲಿ ಅಷ್ಟು ಸುಲಭವಾಗಿ ಮಣಿಯುವುದಿಲ್ಲ. ನಾವು ಒಂದು ಹೇಳಿದರೆ ಅದು ಇನ್ನೊಂದು ಮಾಡುತ್ತದೆ. ನಾವು ಹೇಳಿದ್ದನ್ನು ಮಾಡುವುದು ಅದರ ಲಕ್ಷಣವಲ್ಲ. ಇನ್ನು ಅದನ್ನು ಗಮನಿಸಿದರೆ ನಾವು ಏನನ್ನು ಬೇಡ ಎನ್ನುತ್ತೇವೆಯೋ, ಅದನ್ನೇ ಮಾಡುತ್ತದೆ. ಮಾಡು ಎಂದಿದ್ದನ್ನು ಅದು ಮಾಡುವುದಿಲ್ಲ.

ಆದಕ್ಕಾಗಿಯೇ ನೀವು ಗಮನಿಸಿ ನಾವು ಶ್ವಾಸವನ್ನು ಗಮನಿಸಲು ಹೇಳಿದರೆ ಸುಮ್ಮನೆ ಎರಡು–ಮೂರು ಶ್ವಾಸಗಳನ್ನು ಗಮನಿಸುತ್ತದೆ. ತಕ್ಷಣವೇ ನಮಗೆ ತಿಳಿಯದಂತೆಯೇ ಬೇರೊಂದು ಆಲೋಚನೆಯೊಳಗೆ ಹೊರಟು ಹೋಗುತ್ತದೆ. ಸಹಜವಾಗಿ ನಾವು ಇದನ್ನು ಗಮನಿಸುತ್ತಲೇ ಇರುತ್ತೇವೆ.

ಗಮನಿಸಿ ನಮಗೆ ದುಃಖವನ್ನುಂಟು ಮಾಡುವ ಆಲೋಚನೆಗಳು ಬಂದಾಗ ಸಹಜವಾಗಿ ದುಃಖ ಪಡುತ್ತಿರುತ್ತೇವೆ. ನೋವು ಪಡುತ್ತೇವೆ. ಆ ನೋವನ್ನು ಸಹಿಸಲಾರದೇ ಬೇರೆ ಇನ್ನೊಂದು ವಿಧವಾದ ವಿಷಯಗಳನ್ನು ಆಲೋಚಿಸೋಣ ಎಂದುಕೊಂಡರೂ ಮನಸ್ಸು ಪುನಃ ಅವೇ ಆಲೋಚನೆಗಳನ್ನು ನೆನಪು ಮಾಡುತ್ತಿರುತ್ತದೆ. ಅಂತಹ ಆಲೋಚನೆಗಳುಳ್ಳ ಅನೇಕರು ರಾತ್ರಿಯ ವೇಳೆ ನಿದ್ದೆ ಬಾರದೇ ಬಹಳ ಕಷ್ಟ ಪಡುತ್ತಿರುತ್ತಾರೆ. ಅಂತಹವರು ವೈದ್ಯರನ್ನು ಸಂಪರ್ಕಿಸಿದರೆ ನಿದ್ರೆ ಮಾತ್ರೆಗಳನ್ನು ತೆಗೆದುಕೊಳ್ಳಲು ಹೇಳುತ್ತಾರೆ. ಹೀಗೆ ನಿದ್ರೆ ಮಾತ್ರೆಗಳನ್ನು ಹಾಕಿಕೊಳ್ಳದಿದ್ದರೆ ಅವರಿಗೆ ನಿದ್ರೆ

ಬರುವುದಿಲ್ಲ. ಈ ಪರಿಸ್ಥಿತಿಗೆ ಕಾರಣ ಮನಸ್ಸು ಬೇಡವಾದ ಆಲೋಚನೆಗಳನ್ನು ನೆನಪು ಮಾಡುವುದೇ ಆಗಿದೆ. ಅದು ಮನಸ್ಸಿನ ಸಹಜ ಗುಣ.

ಮನಸ್ಸು ನಾವು ಒಂದನ್ನು ಹೇಳಿದರೆ ಇನ್ನೊಂದನ್ನು ಮಾಡುತ್ತದೆ ಎಂಬುದನ್ನು ತಿಳಿದುಕೊಳ್ಳಲು ಚಿಕ್ಕ ಉದಾಹರಣೆಯನ್ನು ನೋಡೋಣ.

ಎಲ್ಲರಿಗೂ ಕೋತಿಯ ಬಗ್ಗೆ ತಿಳಿದಿದೆ. ಇಲ್ಲಿಯವರೆಗೂ ನಿಮಗೆ ಕೋತಿಯ ಪ್ರಸ್ತಾವನೆ ಇರಲಿಲ್ಲ. ಕೋತಿಯ ಬಗೆಗಿನ ಆಲೋಚನೆಯೂ ಇಲ್ಲ. ಆದರೆ ನೀವು ಈಗ ಕಣ್ಣುಗಳನ್ನು ಮುಚ್ಚಿಕೊಂಡು ಮೂರು ನಿಮಿಷಗಳು ಕೋತಿಯನ್ನು ಹೊರತುಪಡಿಸಿ ಬೇರೆ ಏನನ್ನಾದರೂ ಯೋಚಿಸಲು ಪ್ರಯತ್ನಿಸಿ. ಖಂಡಿತವಾಗಿಯೂ ನಿಮಗೆ ಆಶ್ಚರ್ಯ ಉಂಟಾಗುತ್ತದೆ. ಇಲ್ಲಿಯವರೆಗೂ ಕೋತಿಯ ಪ್ರಸ್ತಾವನೆಯೇ ಇಲ್ಲದ ನಿಮಗೆ ಕಣ್ಣುಗಳನ್ನು ಮುಚ್ಚಿಕೊಂಡಾಗಿನಿಂದ ಕೋತಿಯೇ ನೆನಪಿಗೆ ಬರುತ್ತದೆ. ಅಂದರೆ ಮನಸ್ಸು ಕೋತಿಯನ್ನೇ ನೆನಪು ಮಾಡುತ್ತದೆ. ಅಂದರೆ ಬೇಡವೆಂದ ಕೆಲಸವನ್ನೇ ಮಾಡುತ್ತದೆ.

ಇದನ್ನಾಧರಿಸಿ ಮನಸ್ಸು ನಮ್ಮ ಹಿಡಿತದಲ್ಲಿ ಇರುವುದಿಲ್ಲ ಎಂಬುದು ಸ್ಪಷ್ಟವಾಗಿ ಅರ್ಥವಾಗುತ್ತದೆ. ಅಂತಹ ಮನಸ್ಸನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದು ಅಷ್ಟು ಸುಲಭವಾದ ವಿಷಯವಲ್ಲ, ಅಂದರೆ ಆಲೋಚಿಸದಂತೆ ಮನಸ್ಸನ್ನು ಇರಿಸುವುದು, ಬಹಳ ಬಹಳ ಕಷ್ಟವೆಂದು ತಿಳಿದುಕೊಳ್ಳಬೇಕು ಅಂದರೆ ಆಲೋಚನೆಗಳಿಲ್ಲದ 'ಧ್ಯಾನ ಸ್ಥಿತಿ'ಯನ್ನು ಪಡೆಯುವುದು ಬಹಳ ಕಷ್ಟವೆಂದು ಅರ್ಥ ಮಾಡಿಕೊಳ್ಳಬಹುದು. ಮೊದಲ ಸ್ಥಿತಿಯನ್ನು ಸಾಧಿಸುವುದು ಅಂದರೆ ಮನಸ್ಸನ್ನು ನಿಶ್ಚಲಗೊಳಿಸಲು ಎಷ್ಟು ಕಷ್ಟಪಡಬೇಕೆಂದು ಅರ್ಥ ಮಾಡಿಕೊಳ್ಳಬಹುದು.

ಒಂದು ವೇಳೆ ಕಷ್ಟಪಟ್ಟು ಬಹಳಷ್ಟು ಗಂಟೆಗಳು ಕುಳಿತುಕೊಳ್ಳುತ್ತಾ ಆ ಸ್ಥಿತಿಯನ್ನು ಸಾಧಿಸಿ ಒಂದೇ ಸಿಟ್ಟಿಂಗ್‌ನಲ್ಲಿ ಬಹಳಷ್ಟು ಗಂಟೆಗಳು ಕುಳಿತು ಕೊಳ್ಳಬಹುದಾದರೂ ಲೌಕಿಕ ಜವಾಬ್ದಾರಿಗಳು, ಸಂಸಾರಿಕ ಕಷ್ಟಗಳಿಂದ, ಮಧ್ಯ ಮಧ್ಯದಲ್ಲಿ ಸಾಧನೆಗೆ ಅಡೆತಡೆಗಳು ಉಂಟಾಗುತ್ತಿರುತ್ತವೆ. ಹೀಗೆ ಅಡೆತಡೆಗಳು ಉಂಟಾದರೆ ಅಂದರೆ ಅನುನಿತ್ಯ ಸಾಧನೆ ಮಾಡಲಾರದೇ ಹೋದರೆ ಪುನಃ ಆರಂಭಕ್ಕೆ (ಮೊದಲಿಗೆ) ಬರುವ ಅಪಾಯವಿರುತ್ತದೆ. ಅಂತಹ ಪರಿಸ್ಥಿತಿಯಲ್ಲಿ ಮತ್ತೆ ಅದೇ ಸ್ಥಿತಿಗೆ ಸೇರಿಕೊಳ್ಳಲು ಎಷ್ಟು ಕಷ್ಟಪಡಬೇಕು? ಹೀಗೆ ಮೊದಲ ನಿಶ್ಚಲ ಸ್ಥಿತಿಗೆ ಸೇರಿಕೊಳ್ಳುವುದೇ ಅಷ್ಟು ಕಷ್ಟವಾಗಿರುವಾಗ ಇನ್ನು ಎರಡನೆಯ ನಿರ್ಮಲಸ್ಥಿತಿಗೆ ಯಾವಾಗ ತಲುಪುತ್ತಾರೆ?

ಆಲೋಚಿಸಿ? ಅಂದರೆ ಮನಸ್ಸನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದು. ನಿಗ್ರಹಿಸುವುದು ಎಷ್ಟು ಕಷ್ಟವೆಂದು ತಿಳಿದುಕೊಳ್ಳಬಹುದು. ಅದಕ್ಕಾಗಿಯೇ ಗೀತೆಯಲ್ಲಿ ಅರ್ಜುನನು ಈ ವಿಷಯವನ್ನೇ ಶ್ರೀ ಕೃಷ್ಣ ಭಗವಾನನನ್ನು ಕೇಳಿದನು. ಎಷ್ಟೇ ಪ್ರಯತ್ನಿಸಿದರು ಮನಸ್ಸನ್ನು ನಿಗ್ರಹಿಸುವುದು ತುಂಬಾ ಕಷ್ಟವಾಗಿದೆ? ಏನು ಮಾಡಬೇಕು? ಎಂದು ಕೇಳಿದಾಗ ಶ್ರೀ ಕೃಷ್ಣನು"ಅಭ್ಯಾಸ, ವೈರಾಗ್ಯಗಳಿಂದ ಸಾಧಿಸಬಹುದು"ಎಂದು ಹೇಳಿದನು.

'ಅಭ್ಯಾಸ' ಎಂದರೆ ನಿರಂತರ ಸಾಧನೆ ಮಾಡಬೇಕು. 'ವೈರಾಗ್ಯ' ಎಂದರೆ ಎಲ್ಲವನ್ನೂ ಬಿಟ್ಟು ಎಲ್ಲಿಗೋ ಹೋಗುವುದಲ್ಲ. ಸಂಸಾರದಲ್ಲಿ ಇರುತ್ತದೆ ಎಲ್ಲವುಗಳ ಮೇಲೆ ಮಮಕಾರವನ್ನು ಬಿಡುವುದು ಅಂದರೆ ಸಂಸಾರ ಮಾಡಬಹುದು ಆದರೆ ಮಕ್ಕಳ ಮೇಲೆ, ಹೆಂಡತಿಯ ಮೇಲೆ, ಗಂಡನ ಮೇಲೆ ಮಮಕಾರ ಇರಬಾರದು. ಅವರನ್ನು ಪೋಷಿಸಬೇಕು ಆದರೆ ಅವರಿಗೆ ಏನಾದರೂ ಸಂಭವಿಸಿದರೆ ವಿಲವಿಲ ಒದ್ದಾಡಬಾರದು. ನಾನು ಬದುಕಿ ಏನು ಪ್ರಯೋಜನ? ನಾನು ಇರುವುದಿಲ್ಲ, ಸತ್ತು ಹೋಗುತ್ತೇನೆ ಎಂಬ ಮಾತುಗಳು ಬರಬಾರದು. ಅದೇ ರೀತಿ ಹಣವನ್ನೂ ಸಂಪಾದಿಸಬಹುದು ಆದರೆ ಹಣದ ಮೇಲೆ ವ್ಯಾಮೋಹ ಇರಬಾರದು. ಇದ್ದರೆ ತಪ್ಪುಗಳನ್ನು, ಪಾಪಗಳನ್ನು ಮಾಡುತ್ತಾರೆ. ಅಧರ್ಮದ ಮಾರ್ಗಗಳನ್ನು ಅನುಸರಿಸುತ್ತಾರೆ. ಆದರೆ ವ್ಯಾಮೋಹವಿಲ್ಲದವರು ನ್ಯಾಯಯುತವಾಗಿ, ಧರ್ಮ ಬದ್ಧವಾಗಿ ಸಂಪಾದಿಸುತ್ತಾರೆ. ಇರುವುದರಲ್ಲಿ ತೃಪ್ತಿಪಡುತ್ತಾರೆ.

ಆದರೆ ನಾವು ಇಲ್ಲಿ ಗಮನಿಸಿದರೆ ಪ್ರಾಥಮಿಕ ಹಂತದಲ್ಲಿ ಧ್ಯಾನ ಮಾಡುವವರು, ವ್ಯಾಮೋಹವಿಲ್ಲದಂತೆ ಎಲ್ಲಿದ್ದಾರೆ? ಸಾಧನೆ ಮಾಡಿದರೆ ಮಾಡಬಹುದು ಆದರೆ ಮಮಕಾರವನ್ನು ತ್ಯಜಿಸಿಲ್ಲ ಅಲ್ಲವೇ? ಹಾಗಾದರೆ ಮನಸ್ಸನ್ನು ಹೇಗೆ ನಿಗ್ರಹಿಸುತ್ತಾರೆ? ಹೇಗೆ ಹತೋಟಿಯಲ್ಲಿ ಇಟ್ಟುಕೊಳ್ಳುತ್ತಾರೆ? ಮೊದಲನೆಯ ಸ್ಥಿತಿಯಿಂದ ಎರಡನೆಯ ಸ್ಥಿತಿಗೆ ಹೇಗೆ ಸೇರುತ್ತಾರೆ?

ಅಭ್ಯಾಸದ ಬಗ್ಗೆ ವಶಿಷ್ಠರು ಈ ರೀತಿ ಹೇಳುತ್ತಾರೆ. "ಬ್ರಹ್ಮದ ಬಗ್ಗೆ ಅಂದರೆ ಆತ್ಮದ ಬಗ್ಗೆ ಚಿಂತನೆ ಮಾಡುವುದು ಅದನ್ನೇ ಇತರರಿಗೆ ಹೇಳುವುದು, ಪರಸ್ಪರ ಆದರ ಬಗ್ಗೆಯೇ ಉಪದೇಶಿಸುವುದು, ಇದರಲ್ಲಿಯೇ ನಿಷ್ಠೆಯನ್ನು ಹೊಂದಿರುವುದು, ಇದನ್ನೇ ನಿಪುಣರು ಅಭ್ಯಾಸವೆಂದು ಹೇಳುತ್ತಾರೆ".

ಆದ್ದರಿಂದ 'ಜ್ಞಾನವನ್ನು ಪಡೆಯಲು ಬಯಸುವವರು ಎಷ್ಟು ಕಷ್ಟಪಡಬೇಕೆಂದು ಅರ್ಥ ಮಾಡಿಕೊಳ್ಳಬಹುದು'. ಆದ್ದರಿಂದಲೇ ಎಷ್ಟು ಜನರನ್ನು ನೋಡಿದರೂ

ಪ್ರಾರಂಭದ ಸ್ಥಿತಿಯಲ್ಲಿಯೇ ಇರುತ್ತಿದ್ದಾರೆ ಹೊರತು ಎರಡನೆಯ ಸ್ಥಿತಿಯನ್ನು ಸೇರಲು ಸಾಧ್ಯವಾಗುತ್ತಿಲ್ಲ. ಮನಸ್ಸನ್ನು ಶುದ್ಧೀಕರಿಸಲು ಸಾಧ್ಯವಾಗುತ್ತಿಲ್ಲ, ಗುಣಗಳನ್ನು ಬದಲಾಯಿಸಲು ಸಾಧ್ಯವಾಗುತ್ತಿಲ್ಲ, ನಡವಳಿಕೆಯನ್ನು ಬದಲಾಯಿಸಲು ಸಾಧ್ಯವಾಗುತ್ತಿಲ್ಲ, ಕೆಲಸಗಳು ಬದಲಾಗುತ್ತಿಲ್ಲ, ಫಲಿತಾಂಶಗಳು ಮೊದಲಿನಂತೆಯೇ ಇರುತ್ತಿವೆ. ಕೆಲವು ಸಮಸ್ಯೆಗಳು ಪರಿಹಾರವಾದರೂ ಪುನಃ ಸಮಸ್ಯೆಗಳು ಬರುತ್ತಿವೆ.

ಆದರೆ ಜ್ಞಾನವನ್ನು ಪಡೆಯಬೇಕೆಂಬ ಬಯಕೆ ಇದ್ದು ಯಾವುದೋ ವಿಧದಲ್ಲಿ ಕಷ್ಟಪಟ್ಟು ಹೆಚ್ಚು ಗಂಟೆಗಳ ಕಾಲ ಧ್ಯಾನದಲ್ಲಿ ಕುಳಿತುಕೊಂಡರೆ ಮೊದಲನೇ ಸ್ಥಿತಿಯನ್ನು ಸಾಧಿಸುತ್ತಾರೆ. ಅಂದರೆ ಮನಸ್ಸನ್ನು ನಿಶ್ಚಲಗೊಳಿಸಿಕೊಳ್ಳುತ್ತಾರೆ. ಹೀಗೆ ಗಂಟೆಗಳು, ದಿನಗಳು, ತಿಂಗಳುಗಟ್ಟಲೆ ಸಾಧನೆ ಮಾಡುತ್ತಿದ್ದರೆ ನಿಧಾನವಾಗಿ ಅವರ ಮನಸ್ಸು ಶುದ್ಧಿಯಾಗುತ್ತದೆ.

ಹೀಗೆ ಕಷ್ಟಪಟ್ಟು ಸಾಧನೆ ಮಾಡುವವರ ಮನಸ್ಸು ಎಷ್ಟೇ ಶುದ್ಧತೆ ಹೊಂದಿದರೂ! ಅವರಿಗೆ ಆಹಾರದ ವಿಷಯದಲ್ಲಿ ಬಹಳಷ್ಟು ತೊಂದರೆಗಳು ಎದುರಾಗುತ್ತವೆ. ಏಕೆಂದರೆ ಸಾಧನೆ ಮಾಡುವವರು ಸಂಸಾರ ಜೀವನದಲ್ಲಿ ಇರುವುದಷ್ಟೇ ಅಲ್ಲದೇ ಸಮಾಜದಲ್ಲಿ ಅನೇಕ ರೀತಿಯ ಜನರೊಂದಿಗೆ ಬಾಳಬೇಕಾಗಿರುತ್ತದೆ, ವ್ಯವಹಾರಗಳನ್ನು ನಿರ್ವಹಿಸಬೇಕಾಗಿರುತ್ತದೆ, ಬಹಳಷ್ಟು ಕೆಲಸಗಳು ಇರುತ್ತವೆ, ಬಹಳಷ್ಟು ಒತ್ತಡಗಳು ಇರುತ್ತವೆ. ಅಂತಹ ಸಂದರ್ಭದಲ್ಲಿ ಮನೆಯಲ್ಲಿ ಆಹಾರ ನಿಯಮಗಳನ್ನು ಪಾಲಿಸಿದರೂ ಹೊರಗಡೆ ಹೋದಾಗ, ಸಮಾರಂಭಗಳಿಗೆ ಹೋದಾಗ, ಎಲ್ಲೋ ಒಂದು ಕಡೆ ತನಗೆ ತಿಳಿಯದಂತೆಯೇ ನಿಯಮ ಮೀರಬೇಕಾಗಿ ಬರುತ್ತದೆ. ಆಗ ಅವರಿಗೆ ತಿಳಿಯದಂತೆಯೇ ಇಷ್ಟು ಕಷ್ಟಪಟ್ಟು ಶುದ್ಧಿ ಮಾಡಿಕೊಂಡ ಮನಸ್ಸು ಮತ್ತೆ ಮಲಿನವಾಗುತ್ತದೆ. ಅಂದರೆ ಅವರ ಗುಣ ಮಲಿನವಾಗಿ ಬದಲಾಗುತ್ತದೆ.

ಅವರಿಗೆ ಮನಸ್ಸು ಮಲಿನವಾದಂತೆ, ಗುಣ ಬದಲಾದಂತೆ ಅನಿಸುವುದಿಲ್ಲ. ತಾವು ಹೆಚ್ಚಾಗಿ ಸಾಧನೆ ಮಾಡುತ್ತಿದ್ದೇವೆ, ಸಾಧನೆಯಲ್ಲಿ ಅಭಿವೃದ್ಧಿಯನ್ನು ಸಾಧಿಸುತ್ತಿದ್ದೇವೆ ಎಂದು ಭಾವಿಸುತ್ತಿರುತ್ತಾರೆ, ಬೆಳೆಯುತ್ತಿದ್ದೇವೆ ಎಂದು ಕೊಳ್ಳುತ್ತಾರೆ. ಆದರೆ ಮೊದಲಿಗೆ ಬಂದಿರುವ ವಿಷಯವನ್ನು ಗ್ರಹಿಸುವುದಿಲ್ಲ. ಇದನ್ನಾಧರಿಸಿ ಸಾಧನೆ ಮಾಡುವವರಿಗೆ ಆಹಾರ ನಿಯಮಗಳು ಎಷ್ಟು ಪ್ರಮುಖವೆಂದು ಅರ್ಥಮಾಡಿಕೊಳ್ಳಬಹುದು. ಏಕೆಂದರೆ ಆಹಾರದ ಪ್ರಭಾವ ಮನಸ್ಸಿನ ಮೇಲೆ ಸಹ ಇರುತ್ತದೆ.

ಆಲೋಚಿಸಿ ಇಂತಹವರಿಗೆ ಸಮಾಜದಲ್ಲಿ ಎಷ್ಟು ಅಡೆತಡೆಗಳು? ಎಷ್ಟು ಪ್ರಲೋಭನೆಗಳು? ಎಷ್ಟು ಒತ್ತಡಗಳು? ಬಹಳಷ್ಟು ಜನರಿಗೆ ಮನೆಯಲ್ಲಿಯೇ ಸಹಕಾರ ಸಿಗುವುದಿಲ್ಲ. ಇನ್ನು ಸಾಧನೆಯಲ್ಲಿ ಹೇಗೆ ಅಭಿವೃದ್ಧಿ ಸಾಧಿಸುತ್ತಾರೆ? ಮನಸ್ಸನ್ನು ಹೇಗೆ ಶುದ್ಧವಾಗಿಸಿಕೊಳ್ಳುತ್ತಾರೆ?

ಈ ಎರಡನೆಯ ಸ್ಥಿತಿಯನ್ನು ದಾಟಿದವರು ಮೂರನೇ ಸ್ಥಿತಿಯನ್ನು ಹೇಗೆ ಸೇರುತ್ತಾರೆ? ಅಂದರೆ ಮನಸ್ಸು ಶುದ್ಧವಾಗದಿದ್ದರೆ ಹೇಗೆ ಶೂನ್ಯವಾಗುತ್ತದೆ? ಮನಸ್ಸನ್ನು ಶುದ್ಧಿಗೊಳಿಸಿಕೊಳ್ಳುವುದೇ ಕಷ್ಟವಾಗುತ್ತಿದ್ದರೇ ಮನಸ್ಸನ್ನು ಶೂನ್ಯಗೊಳಿಸಿಕೊಳ್ಳುವುದು ಎಷ್ಟು ಕಷ್ಟ? ಸಾಮಾನ್ಯ ಸಾಧಕರಿಗೆ ಹೇಗೆ ಸಾಧ್ಯವಾಗುತ್ತದೆ?

ಈ ಧ್ಯಾನ ಮಾರ್ಗಕ್ಕೆ ಬಂದವರಲ್ಲಿ ಬಹಳಷ್ಟು ಜನ ಲಾಭಾಕಾಂಕ್ಷೆಯಿಂದ ಬಂದವರೇ ಹೊರತು ತೀವ್ರವಾದ ಜ್ಞಾನಾಕಾಂಕ್ಷೆ ಇರುವವರಲ್ಲ ಅಲ್ಲವೇ? ಹಾಗಾದರೆ ಅವರಿಗೆ ತೀವ್ರವಾದ ಸಾಧನೆ ಮಾಡಬೇಕೆಂಬ, ಆಹಾರ ನಿಯಮಗಳನ್ನು ಪಾಲಿಸಬೇಕೆಂಬ ಛಲ ಹೇಗೆ ಇರುತ್ತದೆ? ಯಾವಾಗಲೂ ಮಾಡುವ ಸಾಧನೆಗಿಂತ ಬರುವ ಲಾಭಗಳ ಮೇಲೆಯೇ ಹೆಚ್ಚು ಗಮನ ಇರುತ್ತದೆ. ಅಂದರೆ ರೋಗ ಕಡಿಮೆಯಾಗಿದೆಯೇ? ಇಲ್ಲವೇ? ಕೋರಿಕೆ ಈಡೇರಿದೆಯೇ? ಇಲ್ಲವೇ? ಸಮಸ್ಯೆ ಪರಿಹಾರವಾಯಿತೇ? ಇಲ್ಲವೇ? ಎಂಬುದರ ಮೇಲೆಯೇ ಗಮನವಿರುತ್ತದೆ. ಆದರೆ ಮನಸ್ಸು ಶುದ್ಧ ವಾಯಿತೇ? ಶೂನ್ಯವಾಯಿತೇ? ಎಂಬ ಆಲೋಚನೆ ಎಲ್ಲಿರುತ್ತದೆ. ಅವರಿಗೆ ಬರುವ ಲಾಭಗಳಷ್ಟೇ ಮುಖ್ಯ.

ಇಂತಹವರಿಗೆ ಜ್ಞಾನ ಹೇಗೆ ಬರುತ್ತದೆ ಹೇಳಿ? ತೀವ್ರವಾದ ಜ್ಞಾನಾಕಾಂಕ್ಷೆ ಇರುವವರಿಗೆ ಮಾತ್ರ ಜ್ಞಾನ ಬರುತ್ತದೆ ಹೊರತು ಲಾಭಕಾಂಕ್ಷೆ ಇರುವವರಿಗೆ ಜ್ಞಾನ ಹೇಗೆ ಬರುತ್ತದೆ? ಧ್ಯಾನದಿಂದಲೇ ಜ್ಞಾನ ಅಂದರೆ ಸುಮ್ಮನೆ ಕೆಲವು ದಿನಗಳು ಧ್ಯಾನದಲ್ಲಿ ಕುಳಿತುಕೊಂಡರೆ ಜ್ಞಾನವಂತರಾಗುತ್ತಾರೆಯೇ? ಸ್ವಲ್ಪ ಸಮಯದ ಧ್ಯಾನಕ್ಕೆ ವಿವೇಕಾನಂದರು ಆಗುತ್ತಾರೆಯೇ? ರಮಣ ಮಹರ್ಷಿಗಳು ಆಗುತ್ತಾರೆಯೇ? ಬುದ್ಧರಾಗುತ್ತಾರೆಯೇ?

ಅವರೆಲ್ಲರೂ ಜೀವನವನ್ನು ಎಷ್ಟು ತ್ಯಾಗ ಮಾಡಿದ್ದಾರೆ? ಸಾಧನೆ ಮಾಡಲು ಎಷ್ಟು ಕಷ್ಟಪಟ್ಟಿದ್ದಾರೆ? ಕೆಲವು ವರ್ಷಗಳ ಕಾಲ ಹೊರಗೆ ಬರದೆ ಸಾಧನೆಯಲ್ಲಿಯೇ ಇದ್ದರು. ಲೌಕಿಕ ಸುಖಗಳ ಮೇಲೆ ಅಂದರೆ ಆಹಾರದ ಮೇಲೆ, ಸಂಸಾರದ ಮೇಲೆ, ಸಂಪತ್ತಿನ ಮೇಲೆ, ವ್ಯಾಮೋಹವನ್ನು ತ್ಯಜಿಸಿದ್ದರು. ಒಂದು ರೀತಿಯಲ್ಲಿ ಜ್ಞಾನವನ್ನು ಹೊಂದಲು

ಜೀವನವನ್ನೇ ಪಣವಾಗಿ ಇಟ್ಟಿದ್ದರು. ಜ್ಞಾನ ಹೊಂದಲು ಎಷ್ಟು ಕಷ್ಟಪಟ್ಟರು? ಬಹಳಷ್ಟು ಕಷ್ಟಗಳನ್ನು ಎದುರಿಸಿದರು. ಅಂತಹದ್ದು ದಿನದಲ್ಲಿ ಬೆಳಗ್ಗೆ ಒಂದು ಗಂಟೆ ರಾತ್ರಿ ಒಂದು ಗಂಟೆ ಕಣ್ಣುಗಳನ್ನು ಮುಚ್ಚಿಕೊಂಡರೆ ಜ್ಞಾನವಂತರಾಗುತ್ತಾರೆಯೇ? ಆಲೋಚಿಸಿ? ಅವರಂತೆ ಎಷ್ಟು ಕಷ್ಟ ಪಡಬೇಕು? ಎಷ್ಟು ಸಾಧನೆ ಮಾಡಬೇಕು?

ಜ್ಞಾನ ಸಂಪಾದಿಸುವುದು ಬಹಳ ಕಷ್ಟ! ಆದ್ದರಿಂದಲೇ ರಮಣ ಮಹರ್ಷಿಗಳ ನಂತರ ಅವರ ಬೋಧನೆಗಳಿಗೆ ಪ್ರಭಾವಿತರಾದ ಲಕ್ಷಾಂತರ ಜನ ಅವರ ಮಾರ್ಗದಲ್ಲಿ ನಡೆದರು. ಆದರೆ ಎಷ್ಟು ಜನ ರಮಣ ಮಹರ್ಷಿಗಳಾದರು? ಅದೇ ರೀತಿ ವಿವೇಕಾನಂದರ ನಂತರ ಕೋಟ್ಯಾಂತರ ಜನ ಅವರನ್ನು ಅಧ್ಯಯನ ಮಾಡಿದರು, ಅವರನ್ನು ಅನುಸರಿಸಿದರು. ಆದರೆ ಎಷ್ಟು ಜನ ವಿವೇಕಾನಂದರಾಗಲು ಸಾಧ್ಯವಾಯಿತು?

ಅದೇರೀತಿ ಕೋಟ್ಯಾಂತರ ಜನ ಬುದ್ಧನನ್ನು ಅನುಸರಿಸಿದರು. ಆದರೆ ಎಷ್ಟು ಜನ ಬುದ್ಧರಾಗಲು ಸಾಧ್ಯವಾಯಿತು? ಅದಕ್ಕಾಗಿಯೇ ಶ್ರೀ ಕೃಷ್ಣ ಭಗವಾನ್ ಈ ಸಂದೇಶವನ್ನು ನೀಡಿದರು.

ಶ್ಲೋಕ॥ ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ।
ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ವತಃ॥ (ಭ.ಗೀ.7–3)

ತಾ:–ಸಾವಿರಾರು ಮನುಷ್ಯರಲ್ಲಿ ಒಬ್ಬನು ಮೋಕ್ಷಸಿದ್ಧಿಗಾಗಿ ಪ್ರಯತ್ನಿಸುವನು. ಹೀಗೆ ಪ್ರಯತ್ನಿಸುವ ಸಾವಿರಾರು ಜನರಲ್ಲಿ ಒಬ್ಬನು ಮಾತ್ರ ನನ್ನನ್ನು ಯಥಾರ್ಥವಾಗಿ ತಿಳಿದುಕೊಳ್ಳುವನು.

ಇದನ್ನಾಧರಿಸಿ ನೋಡಿದರೆ ಜ್ಞಾನ ಸಂಪಾದಿಸುವುದು ಅಷ್ಟು ಸುಲಭವಾದ ವಿಷಯವಲ್ಲವೆಂದು ಅರ್ಥವಾಗುತ್ತದೆ ಅಲ್ಲವೇ? ಆದ್ದರಿಂದ ಜ್ಞಾನವನ್ನು ಪಡೆಯಲು ಬಯಸುವವರು ಅಷ್ಟು ಸುಲಭವಾಗಿ ತೆಗೆದುಕೊಳ್ಳಬೇಡಿ.

ಪತ್ರೀಜಿ ಹೇಳಿರುವಂತೆ ಧ್ಯಾನದಿಂದಲೇ ಅಂದರೆ ಧ್ಯಾನ ಮಾಡಿದರೇನೇ ಜ್ಞಾನ ಬರುತ್ತದೆ. ಅದರಲ್ಲಿ ಸಂದೇಹವೇ ಇಲ್ಲ. ಧ್ಯಾನದ ಮೂಲಕ ಜ್ಞಾನವನ್ನು ಹೇಗೆ ಸಂಪಾದಿಸುತ್ತೇವೆ ಎಂಬುದನ್ನು ಈ ಮೇಲ್ಕಂಡಂತೆ ತಿಳಿದುಕೊಂಡಿದ್ದೇವೆ. ಆದರೆ ಅದಕ್ಕೆ ತಕ್ಕ ಶ್ರಮ, ದೀಕ್ಷೆ, ಹಠ ಇರಬೇಕು. ಜ್ಞಾನ ಹೊಂದಬೇಕೆಂಬ ತೀವ್ರವಾದ ಆಕಾಂಕ್ಷೆ ಇರಬೇಕು. ಆಗ ಮಾತ್ರ ಯಾರಾದರೂ ಸಾಧಿಸಬಲ್ಲರು. ಅಷ್ಟೇ ಹೊರತು 'ಆನಂದಿಸುವುದಕ್ಕಾಗಿಯೇ' ಜೀವನ ಎಂದುಕೊಳ್ಳುವವರಿಗೆ ಜ್ಞಾನ ಹೇಗೆ

ದೊರೆಯುತ್ತದೆ? ಜ್ಞಾನ ಸಂಪಾದಿಸುವುದಕ್ಕಾಗಿಯೇ ಜೀವನ ಎಂದುಕೊಳ್ಳುವವರಿಗೆ ಸ್ವಲ್ಪವಾದರೂ ಜ್ಞಾನ ದೊರೆಯುತ್ತದೆ. ಆಸಕ್ತಿ ಇಲ್ಲದವರಿಗೆ ಜ್ಞಾನ ಹೇಗೆ ಲಭಿಸುತ್ತದೆ? ಆತ್ಮ ಜ್ಞಾನಿಯಾಗುವುದು ಎಂದರೆ ದೇವರಾಗಿ ಬದಲಾಗುವ ದೈವ ಸ್ಥಿತಿಯನ್ನು ಹೊಂದುವುದು. ಹಾಗಾದರೆ ಸಾಮಾನ್ಯ ಮನುಷ್ಯ ದೇವರಾಗುವುದು ಅಷ್ಟು ಸುಲಭವೇ? ದೇವರಿಗೆ ಎಷ್ಟು ಅರ್ಹತೆಗಳು ಇರಬೇಕು? ಆ ಅರ್ಹತೆಗಳೆಲ್ಲವೂ ಸಂಪೂರ್ಣ ಜ್ಞಾನವನ್ನು ಹೊಂದಿದರೇ ತಾನೇ ಲಬಿಸುತ್ತವೆ? ಅದಕ್ಕಾಗಿಯೇ ಅಂತಹ ಜ್ಞಾನವನ್ನು ಹೊಂದಬೇಕು ಎಂದುಕೊಳ್ಳುವವರಿಗೆ, ಆ ಪ್ರಯತ್ನವನ್ನು ಮಾಡುವವರಿಗೆ ಈ ಸೃಷ್ಟಿಯಲ್ಲಿ ಪ್ರತಿ ಹಂತದಲ್ಲಿಯೂ ಬಹಳಷ್ಟು ಪರೀಕ್ಷೆಗಳನ್ನು ಇಡಲಾಗುತ್ತದೆ. ಆತಂಕಗಳು, ಅಡೆತಡೆಗಳು ಸೃಷ್ಟಿಯಾಗುತ್ತವೆ. ಅವುಗಳನ್ನೆಲ್ಲಾ ಮೆಟ್ಟಿ ನಿಲ್ಲಬೇಕಾದರೆ ಬಹಳಷ್ಟು ಶ್ರಮ ಪಡಬೇಕು, ಕಷ್ಟಗಳನ್ನು ಪಡಬೇಕು. ಅವುಗಳನ್ನೆಲ್ಲಾ ಮೆಟ್ಟಿ ನಿಂತಾಗಲೇ ಜ್ಞಾನವನ್ನು ಹೊಂದುವ ಅರ್ಹತೆ ಲಭಿಸುತ್ತದೆ. ಹೀಗೆ ಕಷ್ಟಪಟ್ಟು ಸಾಧಿಸಿದವರೇ ನಾವೆಲ್ಲರೂ ಅಂದುಕೊಳ್ಳುತ್ತಿರುವ ದೇವತೆಗಳು.

ಮೂಲ ಸೃಷ್ಟಿಯಲ್ಲಿ ಇಂತಹ ಪರೀಕ್ಷೆಗಳು ಆತಂಕಗಳು ಅಡೆತಡೆಗಳು ಇಲ್ಲದೆ ಹೋದರೆ ಪ್ರತಿಯೊಬ್ಬರೂ ಕೆಲವು ದಿನಗಳ ಧ್ಯಾನ ಮಾಡಿ ಜ್ಞಾನ ಸಂಪಾದಿಸಿ ದೇವರುಗಳಾಗುತ್ತಿದ್ದರು ಅಲ್ಲವೇ? ಮತ್ತೆ ಆಗುತ್ತಿದ್ದಾರೆ ಯೇ? ಆಗುತ್ತಿಲ್ಲ ಅಲ್ಲವೇ? ಕಾರಣ ದೇವರಾಗಲು ಬಹಳಷ್ಟು ಅರ್ಹತೆಗಳು ಇರಬೇಕು. ಈ ಅರ್ಹತೆಗಳನ್ನು ಸಂಪಾದಿಸಿಕೊಳ್ಳುವುದಕ್ಕೋಸ್ಕರವೇ ಸೃಷ್ಟಿಯಲ್ಲಿ ಈ ವ್ಯವಸ್ಥೆ. ಅಂದರೆ ಪರೀಕ್ಷೆಗಳು, ಅಡೆತಡೆಗಳು, ಕಷ್ಟಗಳು.

ಆದ್ದರಿಂದ ಈ ಮಾರ್ಗದಲ್ಲಿ ಬೆಳೆದವರು ಎಲ್ಲೋ ಅಲ್ಲಿ, ಯಾವುದೋ ಒಂದು ಸಂದರ್ಭದಲ್ಲಿ, ಯಾವುದೋ ಒಂದು ಲೋಪ ದೋಷದಿಂದ ಪುನಃ ಮೊದಲಿಗೆ ಬರುತ್ತಾರೆ. ಎಲ್ಲೆಂದರಲ್ಲಿ ಜಾಗ್ರತೆಯಿಂದ ಇರುತ್ತಾ, ಕಷ್ಟಪಟ್ಟು ಸಾಧನೆ ಮಾಡುತ್ತಾ, ನಿಯಮಗಳನ್ನು ಪಾಲಿಸಿದರೆ ಮಾತ್ರ ಬೆಳೆಯುತ್ತಾರೆ. ಅಂದರೆ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಾರೆ. ದೈವತ್ವವನ್ನು ಸಂಪಾದಿಸಿಕೊಳ್ಳುತ್ತಾರೆ.

ಇಲ್ಲಿ ನಾವು ಗಮನಿಸಬೇಕಾದದ್ದು ಏನೆಂದರೆ! ದೇವರೆಲ್ಲರೂ ಬಹಳಷ್ಟು ಶಕ್ತಿವಂತರು. ಶಕ್ತಿಯುಳ್ಳವರನ್ನೇ ದೇವರುಗಳು ಎನ್ನುತ್ತೇವೆ. ಆ ಶಕ್ತಿಯನ್ನು ಅವರು ಧ್ಯಾನದಿಂದಲೇ ಸಂಪಾದಿಸಿಕೊಂಡರು. ಒಂದು ರೀತಿಯಲ್ಲಿ ಶಕ್ತಿ ಹೆಚ್ಚಿದರೇನೇ ಗುಣ ಬದಲಾಗುತ್ತದೆ. ಅದೇ ರೀತಿ ಗುಣ ಬದಲಾಗಿದೆ ಎಂದರೆ ಶಕ್ತಿ ಹೆಚ್ಚಾದಂತೆಯೇ. ಆದ್ದರಿಂದ ತಮೋ

ಗುಣದಲ್ಲಿ ಇರುವವರಿಗಿಂತ ರಜೋಗುಣದಲ್ಲಿ ಇರುವವರಿಗೆ ಹೆಚ್ಚು ಶಕ್ತಿ ಇದ್ದಂತೆ. ಅದೇ ರೀತಿ ರಜೋಗೋಣದಲ್ಲಿ ಇರುವವರಿಗಿಂತ ಸಾತ್ವಿಕ ಗುಣದಲ್ಲಿರುವವರಿಗೆ ಇನ್ನಷ್ಟು ಶಕ್ತಿ ಇದ್ದಂತೆ, ಅದೇ ರೀತಿ ಸಾತ್ವಿಕ ಗುಣದಲ್ಲಿ ಇರುವವರಿಗಿಂತ ಶುದ್ಧ ಸಾತ್ವಿಕ ಗುಣದಲ್ಲಿರುವವರಿಗೆ ಇನ್ನಷ್ಟು ಶಕ್ತಿ ಹೆಚ್ಚಿರುತ್ತದೆ. ಶುದ್ಧ ಸಾತ್ವಿಕದಲ್ಲಿ ಇರುವವರಿಗಿಂತ ನಿರ್ಗುಣದಲ್ಲಿ ಇರುವವರಿಗೆ ಸಂಪೂರ್ಣ ಶಕ್ತಿ ಇದ್ದಂತೆ. ಆದ್ದರಿಂದ ಅವರು ಸಂಪೂರ್ಣ ಜ್ಞಾನದಿಂದ ಬಹುಮುಖ ಪ್ರಜ್ಞೆಯನ್ನು ಪ್ರದರ್ಶಿಸಲು ಸಮರ್ಥರಾಗಿರುತ್ತಾರೆ.

ಶಕ್ತಿಯು ಕಡಿಮೆಯಾದಂತೆ ಪುನಃ ಗುಣವು ಪ್ರಾರಂಭಕ್ಕೆ ಮರಳುತ್ತದೆ. ಮತ್ತೆ ಅವರು ಆ ಗುಣವನ್ನು ಆಧರಿಸಿ ಸಾಮಾನ್ಯವಾಗಿ ವರ್ತಿಸುತ್ತಾರೆ. ಆದ್ದರಿಂದ ಸೃಷ್ಟಿಯಲ್ಲಿ ಇಡಲ್ಪಡುವ ಪರೀಕ್ಷೆಗಳನ್ನು ಮೆಟ್ಟಿನಿಂತಾಗಲೇ ಅವರ ಸಂಪಾದಿಸಿಕೊಂಡ ಶಕ್ತಿ ಹಾಗೆಯೇ ಉಳಿಯುತ್ತದೆ. ಗುಣದಲ್ಲಿಯೂ ಸಹ ಬದಲಾವಣೆಯಾಗುವುದಿಲ್ಲ. ಆದ್ದರಿಂದ ಗುಣ ಕಡಿಮೆಯಾಗಿದೆ ಅಂದರೆ ಶಕ್ತಿ ಕಡಿಮೆಯಾಗಿದೆ ಎಂದು ಗುಣ ಹೆಚ್ಚಿದೆ ಎಂದರೆ ಶಕ್ತಿ ಹೆಚ್ಚಾಗಿದೆ ಎಂದು ನಾವು ಅರ್ಥಮಾಡಿಕೊಳ್ಳಬಹುದು. ಸೃಷ್ಟಿಯಲ್ಲಿರುವ ಪರೀಕ್ಷೆಗಳೆಲ್ಲವೂ ಶಕ್ತಿಯನ್ನು ಬರಿದು ಮಾಡುವಂತಹವೇ.

ಅಂತಹ ಪರೀಕ್ಷೆಗಳಲ್ಲಿ ಆಹಾರವು ಒಂದಾಗಿದೆ. ಕೆಲವು ವಿಧದ ಆಹಾರ ಪದಾರ್ಥಗಳು ಮಾನವನ ಗುಣವನ್ನು ಕಡಿಮೆ ಮಾಡುತ್ತವೆ. ಅಂದರೆ ಶಕ್ತಿಯನ್ನು ಕಡಿಮೆ ಮಾಡುತ್ತವೆ. ಹೀಗೆ ಕೆಲವು ಆಹಾರಗಳು ರಜೋಗುಣವನ್ನು ಉಂಟು ಮಾಡುತ್ತವೆ. ತಮೋ ಗುಣವನ್ನು ಉಂಟು ಮಾಡುವ ಕೆಲವು ಆಹಾರ ಪದಾರ್ಥಗಳು ಇವೆ. ತಮೋ ಗುಣ ಎಂದರೆ ಅತ್ಯಂತ ಕಡಿಮೆ ಶಕ್ತಿ ರಜೋಗುಣ ಎಂದರೆ ಅತ್ಯಂತ ಕಡಿಮೆ ಶಕ್ತಿ ಆದರೆ, ತಮೋ ಗುಣಕ್ಕಿಂತ ಜಾಸ್ತಿ.

ಸಾತ್ವಿಕ ಗುಣದಲ್ಲಿರುವವರಾಗಲೀ, ಶುದ್ಧ ಸಾತ್ವಿಕದಲ್ಲಿರುವವರಾಗಲೀ, ರಜೋಗುಣ ತಮೋ ಗುಣದ ಆಹಾರಗಳನ್ನು ಸೇವಿಸಿದರೆ ಅವರ ಮನಸ್ಸು ಆ ಗುಣದಂತೆ ಬದಲಾಗುತ್ತದೆ. ಅಂದರೆ ಅವರ ಶಕ್ತಿ ಕಡಿಮೆಯಾಗುತ್ತದೆ. ಬಹಳ ಶ್ರಮಪಟ್ಟು... ಆರು ತಿಂಗಳುಗಳಾಗಲೀ, ಆರು ವರ್ಷಗಳು ಧ್ಯಾನ ಮಾಡಿ ಸಂಪಾದಿಸಿದ ಶಕ್ತಿಯೆಲ್ಲ ಅಂತಹ ಆಹಾರಗಳನ್ನು ಸೇವಿಸುವುದರಿಂದ ಕಳೆದು ಹೋಗುತ್ತದೆ. ಬಹಳಷ್ಟು ವರ್ಷಗಳಿಂದ ಮಾಡಿದ ಸಾಧನೆ ಯನ್ನೆಲ್ಲಾ ವ್ಯರ್ಥ ಮಾಡಿಕೊಂಡಂತೆ ಆಗುತ್ತದೆ. ಪುನಹ ಸಾಧಾರಣ ಮನುಷ್ಯರಂತೆ ಪ್ರವರ್ತಿಸುತ್ತಾರೆ. ಇದು ಸೃಷ್ಟಿಯಲ್ಲಿ ಆಹಾರದ ಮೂಲಕ ಇವರಿಗೆ ಇಡಲ್ಪಟ್ಟ ಪರೀಕ್ಷೆ ಎಂದುಕೊಳ್ಳಬೇಕು.

ಮಾನವನಿಗೆ ನಾಲಿಗೆ ಚಪಲ ಹೆಚ್ಚು ಅಂದರೆ ರುಚಿಗೆ ಪ್ರಾಮುಖ್ಯತೆ ಕೊಡುತ್ತಾನೆ. ರುಚಿಗೆ ಅಡಿಯಾಳು ಆಗುತ್ತಾನೆ. ಆ ಬಲಹೀನತೆಯಿಂದ ಹಸಿವಿಗೆ ತಡೆಯದೇ ಇರುವುದರಿಂದ ಆಹಾರ ತೆಗೆದುಕೊಳ್ಳುತ್ತಾನೆ. ಅಷ್ಟೇ ಹೊರತು ತೆಗೆದುಕೊಳ್ಳುತ್ತಿರುವ ಆಹಾರ ತನಗೆ ಲಾಭ ಉಂಟು ಮಾಡುತ್ತಿದೆಯೇ? ನಷ್ಟ ಉಂಟು ಮಾಡುತ್ತಿದೆಯೇ? ಎಂದು ಆಲೋಚಿಸುವುದಿಲ್ಲ. ತನ್ನ ಶಕ್ತಿಯನ್ನು ಕಬಳಿಸುತ್ತಿದೆಯೇ? ಇಲ್ಲವೇ? ಎಂದು ಆಲೋಚಿಸುವುದಿಲ್ಲ. ಜ್ಞಾನವನ್ನು ಹೊಂದಬೇಕು ಎಂದುಕೊಳ್ಳುವವರಿಗೆ ಅಂದರೆ ಆಧ್ಯಾತ್ಮಿಕವಾಗಿ ಬೆಳೆಯಬೇಕು ಎಂದುಕೊಳ್ಳುವವರಿಗೆ ಆಹಾರದ ಮೂಲಕ ಕೆಳಗೆ ಎಳೆಯಲ್ಪಡುತ್ತಿದ್ದೇನೆ ಎಂಬ ವಿಷಯ ತಿಳಿಯುವುದಿಲ್ಲ. ಆದರೆ ಸರಿಯಾದ ಗುರುಗಳನ್ನು ಆಶ್ರಯಿಸಿ ಆಹಾರ ನಿಯಮಗಳನ್ನು ತಿಳಿದುಕೊಂಡರೆ ಪ್ರಕೃತಿಯಲ್ಲಿರುವ ಈ ಪರೀಕ್ಷೆಯನ್ನು ಮೆಟ್ಟಿ ನಿಲ್ಲಬಹುದು.

ಅದೇ ರೀತಿ ಜ್ಞಾನವನ್ನು ಪಡೆಯಲು ಬಯಸುವವರಿಗೆ ಅಂದರೆ ಜ್ಞಾನಕ್ಕೋಸ್ಕರ ಧ್ಯಾನ ಮಾಡುವವರಿಗೆ ಮತ್ತಷ್ಟು ಪರೀಕ್ಷೆಗಳನ್ನು ಸೃಷ್ಟಿಯಲ್ಲಿ ಇಡಲ್ಪಡುತ್ತವೆ. ಅವು1) ಕಾಮ, 2) ಕ್ರೋಧ, 3) ಲೋಭ.

ಈ ಕಾಮ, ಕ್ರೋಧ, ಲೋಭಗಳೆಂಬ ವಿಷಯಗಳಲ್ಲಿ ಪರೀಕ್ಷೆಗಳನ್ನು ಇಡಲ್ಪಡುತ್ತವೆ ಎಂಬುದಕ್ಕೆ ಪುರಾಣಗಳಲ್ಲಿನ ವಿಶ್ವಾಮಿತ್ರನ ಜೀವನವೇ ಒಂದು ಉದಾಹರಣೆ. ವಿಶ್ವಮಿತ್ರನು ಸಾವಿರ ವರ್ಷಗಳು ತಪಸ್ಸು ಮಾಡಿ ಅಂದರೆ ಧ್ಯಾನ ಮಾಡಿ ಅಪಾರವಾದ ಶಕ್ತಿಯನ್ನು ಸಂಪಾದಿಸಿದನು. ಒಂದು ವಿಧದಲ್ಲಿ ಸೃಷ್ಟಿಗೆ ಪ್ರತಿಸೃಷ್ಟಿ ಮಾಡಬಲ್ಲ ಶಕ್ತಿಯನ್ನು ಸಂಪಾದಿಸಿದನು. ಅಂತಹ ವಿಶ್ವಾಮಿತ್ರನು ಆ ಶಕ್ತಿಯಿಂದ ಲೋಕಕ್ಕೆ ಒಳ್ಳೆಯದು ಮಾಡುತ್ತಾನೆಯೇ? ಕೆಡುಕು ಮಾಡುತ್ತಾನೆಯೇ? ಎಂದು ಪರೀಕ್ಷೆ ಮಾಡಲು ಬಯಸಿ ಇಂದ್ರನು ಮೇನಕೆಯನ್ನು ಕಳುಹಿಸಿ ವಿಶ್ವಾಮಿತ್ರನ ಕಾಮಕ್ಕೆ (ಕೋರಿಕೆಗಳಿಗೆ) ಪರೀಕ್ಷೆ ಇಟ್ಟನು.

ಮೇನಕೆಯ ಸೌಂದರ್ಯಕ್ಕೆ ವಿಶ್ವಾಮಿತ್ರ ಮನಸೋತನು. ಮೇನಕೆಯನ್ನು ಮದುವೆಯಾಗುವಂತೆ ಕೇಳಿಕೊಂಡನು. ಆಗ ಮೇನಕೆ ಒಂದು ಚಿಕ್ಕ ಷರತ್ತನ್ನು ಇಟ್ಟಳು. ನನ್ನ ಕೋರಿಕೆಯನ್ನು ತಿರಸ್ಕರಿಸಿದ ಮರಕ್ಷಣ ನಿನ್ನನ್ನು ಬಿಟ್ಟು ಹೋಗುತ್ತೇನೆ ಎಂದಳು. ಅದಕ್ಕೆ ವಿಶ್ವಾಮಿತ್ರ ಅಂಗೀಕರಿಸಿ ವಿವಾಹ ಮಾಡಿಕೊಂಡನು. ಮೇನಕೆ ಪ್ರತಿದಿನವೂ ಚಿತ್ರ ವಿಚಿತ್ರವಾದ ಕೋರಿಕೆಗಳನ್ನು ಕೋರುತ್ತಿದ್ದಳು. ಯಾವುದು ಸಿಗುವುದಿಲ್ಲವೋ ಅವುಗಳನ್ನು ಬೇಕೆನ್ನುತ್ತಿದ್ದಳು. ವಿಶ್ವಾಮಿತ್ರನು ಇಲ್ಲ ಎನ್ನಲಾರದೇ ತನ್ನ ಶಕ್ತಿಯನ್ನು ಸ್ವಲ್ಪ ಖರ್ಚು

ಮಾಡಿ ಆಕೆಯ ಕೋರಿಕೆಯನ್ನು ಈಡೇರಿಸುತ್ತಿದ್ದನು. ಹೀಗೆ ಆಕೆಯ ಕೋರಿಕೆಗಳನ್ನು ತೀರಿಸುತ್ತಾ ತನ್ನ ಶಕ್ತಿಯನ್ನೆಲ್ಲಾ ಖರ್ಚು ಮಾಡಿದನು.

ಒಂದು ದಿನ ಆಕಾಶ ವಿಹಾರ ಮಾಡೋಣವೆಂದು ಮೇನಕೆ ಕೇಳಿದರೆ ವಿಶ್ವಾಮಿತ್ರ ಪ್ರಯತ್ನಿಸಿದನು ಆದರೆ ಶಕ್ತಿಯೆಲ್ಲಾ ಖರ್ಚಾಗಿದ್ದರಿಂದ ಆತನಿಗೆ ಅದು ಸಾಧ್ಯವಾಗಲಿಲ್ಲ. ಆಗ ಅರ್ಥವಾಯಿತು. ಕಾಮ ಗೋಸ್ಕರ ಅಂದರೆ ಕೋರಿಕೆಗಳಿಗೋಸ್ಕರ ತನ್ನ ಶಕ್ತಿಯನ್ನೆಲ್ಲ ಖರ್ಚು ಮಾಡಿಕೊಂಡೆನೆಂದು ತಿಳಿದು ದುಃಖ ಪಟ್ಟನು. ಕಾಮಕ್ಕೆ ಒಳಗಾಗಬಾರದೆಂದು ಆಗ ಅರ್ಥ ಮಾಡಿಕೊಂಡನು.

ಏನೂ ಮಾಡಲಾರದೇ ಪುನಹ ಸಾವಿರಾರು ವರ್ಷಗಳ ಕಾಲ ತಪಸ್ಸು ಮಾಡಿ ಮತ್ತಷ್ಟು ಶಕ್ತಿಯನ್ನು ಸಂಪಾದಿಸಿದನು. ಈ ಬಾರಿ ಇಂದ್ರನು ಕ್ರೋಧಕ್ಕೆ ಪರೀಕ್ಷೆ ಒಡ್ಡಿದನು. ಈ ಬಾರಿ ರಂಭೆಯನ್ನು ಕಳುಹಿಸಿದನು. ರಂಭೆಯನ್ನು ನೋಡಿದ ತಕ್ಷಣವೇ ವಿಶ್ವಾಮಿತ್ರನಿಗೆ ವಿಪರೀತವಾದ ಕೋಪ ಬಂತು. ನನಗೆ ಇಂದ್ರನು ಪರೀಕ್ಷೆಗಳನ್ನು ಇಡುತ್ತಾನೆಯೇ? ಎಂದು ಕೋಪದಿಂದ ರಂಭೆಯನ್ನು ಶಿಲೆಯಾಗುವಂತೆ ಶಪಿಸಿದನು. ಶಪಿಸಿದ ತಕ್ಷಣವೇ ತನ್ನ ಶಕ್ತಿಯೆಲ್ಲಾ ಖಾಲಿಯಾಯಿತು. ಸಾಮಾನ್ಯ ಮನುಷ್ಯನಾದನು. ಆಗ ಕ್ರೋಧಕ್ಕೂ ಸಹ ಒಳಗಾಗಬಾರದೆಂದು ಅರ್ಥಮಾಡಿಕೊಂಡನು.

ಮತ್ತೆ ಸಾವಿರ ವರ್ಷಗಳ ಕಾಲ ತಪಸ್ಸು ಮಾಡಿ ಮತ್ತೆ ಬಹಳಷ್ಟು ಶಕ್ತಿ ಸಂಪಾದಿಸಿದನು. ಈ ಬಾರಿ ಇಂದ್ರನು ಲೋಭಕ್ಕೆ ಪರೀಕ್ಷೆ ಒಡ್ಡಿದನು. ವಿಶ್ವಾಮಿತ್ರನು ಊಟಕ್ಕೆ ಕುಳಿತುಕೊಂಡ ತಕ್ಷಣವೇ ಇಂದ್ರನು ಮಾರುವೇಷದಲ್ಲಿ ಬಂದು ಭಿಕ್ಷೆಯನ್ನು ಕೇಳಿದನು. ಆಗ ವಿಶ್ವಾಮಿತ್ರ ಆಲೋಚಿಸಿದನು. ಇದು ಸಹ ಇಂದ್ರನ ಪರೀಕ್ಷೆಯೆಂದು ಪರಿಗಣಿಸಿ ತಾನು ತಿನ್ನಲಿದ್ದ ಆಹಾರವನ್ನು ಇಂದ್ರನಿಗೆ ಕೊಟ್ಟನು.

ಆಗ ಇಂದ್ರ ಹೇಳಿದ. ಈಗ ನೀನು ಎಲ್ಲವನ್ನೂ ಜಯಿಸಿದ್ದೀಯ. ನೀನು ಬ್ರಹ್ಮ ಜ್ಞಾನ ಪದವಿಗೆ ಅರ್ಹನಾಗಿದ್ದೀಯಾ ಎಂದು ತನ್ನ ನಿಜ ಸ್ವರೂಪವನ್ನು ತೋರಿಸಿದನು.

ಮೇಲಿನ ಪುರಾಣ ಕಥೆಯನ್ನಾದರಿಸಿ ಜ್ಞಾನವನ್ನು ಸಂಪಾದಿಸಿಕೊಳ್ಳಲು ಪ್ರಯತ್ನಿಸುವವರಿಗೆ ತಿಳಿಯದಂತೆಯೇ ಇಂತಹ ಪರೀಕ್ಷೆಗಳು ಸೃಷ್ಟಿಯಲ್ಲಿ ಇಡಲ್ಪಡುತ್ತವೆ. ಅದರಲ್ಲಿ ವಿಫಲರಾದವರು ತಮ್ಮ ಶಕ್ತಿಯನ್ನು ಕಳೆದುಕೊಳ್ಳುವುದಷ್ಟೇ ಅಲ್ಲದೇ ಸಾಮಾನ್ಯ ಸ್ಥಿತಿಗೆ ಸೇರುತ್ತಾರೆ. ಅಂದರೆ ಸಾಧನೆಯಲ್ಲಿ ಪ್ರಾರಂಭದ ಹಂತಕ್ಕೆ ಬರುತ್ತಾರೆ. ಮರಳಿ ಪ್ರಯತ್ನವನ್ನು ಪ್ರಾರಂಭಿಸಬೇಕಾದದ್ದೇ ಶ್ರಮ ಪಡಬೇಕಾದದ್ದೇ.

ಹೀಗೆ ಜ್ಞಾನವನ್ನು ಸಂಪಾದಿಸಬೇಕು ಎಂದುಕೊಳ್ಳುವವರು ಎಲ್ಲಾ ವಿಧಗಳಲ್ಲಿಯೂ ಅರ್ಹರೇ? ಇಲ್ಲವೇ? ಎಂದು ನೋಡಲು ಈ ಪರೀಕ್ಷೆಗಳನ್ನು ಸೃಷ್ಟಿಯಲ್ಲಿ ಇಡಲ್ಪಡುತ್ತವೆ. ಅವು ಸಾಧಕರಿಗೆ ತಿಳಿಯುವುದಿಲ್ಲ. ಸೃಷ್ಟಿಯಲ್ಲಿನ ಪರೀಕ್ಷೆಗಳು ಸಹ ಅನಿರೀಕ್ಷಿತವಾಗಿರುತ್ತವೆ. ಅವು ಪರೀಕ್ಷೆಗಳಂತೆ ಇರುವುದಿಲ್ಲ. ಆದ್ದರಿಂದ ಯಾವುದೇ ಸಂಯಮವಿಲ್ಲದಿದ್ದರೆ ಪತನಕ್ಕೆ ಒಳಗಾಗುತ್ತಾರೆ.

ಅವರು ಎಲ್ಲಾ ರೀತಿಯ ಪರೀಕ್ಷೆಗಳನ್ನು ಜಯಿಸಿ ಪರಿಶ್ರಮದಿಂದ ತೀವ್ರವಾದ ಅಭ್ಯಾಸ ಮುಂದುವರೆಸಿದರೆ ಮೂರನೇ ಸ್ಥಿತಿಯನ್ನು ತಲುಪುತ್ತಾರೆ ಅಂದರೆ ಶುದ್ಧವಾದ ಮನಸ್ಸನ್ನು ಶೂನ್ಯ ಮಾಡಿಕೊಳ್ಳುತ್ತಾರೆ. ಈ ಸ್ಥಿತಿಯಲ್ಲಿ ಅವರಲ್ಲಿ ಜ್ಞಾನ ಉದಯಿಸುತ್ತದೆ. ಇದಲ್ಲದೆ ಈ ಸ್ಥಿತಿಯಲ್ಲಿ ಅವರಿಗೆ ಕೆಲವು ಪ್ರೀತಿಯ ಅತಿಂದ್ರೀಯ ಶಕ್ತಿಗಳು, ಸಿದ್ಧಿಗಳನ್ನು ಪ್ರಕೃತಿಯಿಂದ ನೀಡಲ್ಪಡುತ್ತವೆ. ಆ ಶಕ್ತಿಗಳು ಸಹ ಅವರ ಜ್ಞಾನವನ್ನು ಹೆಚ್ಚಿಸಿಕೊಳ್ಳಲು, ವಿಸ್ತರಿಸಿಕೊಳ್ಳಲು ಮಾತ್ರ ನೀಡಲ್ಪಡುತ್ತವೆ.

ಅಂತಹವರು ಆ ಶಕ್ತಿಗಳ ಸದ್ವಿನಿಯೋಗ ಮಾಡಿಕೊಳ್ಳುತ್ತಾರೆಯೇ? ದುರ್ವಿನಿಯೋಗ ಮಾಡಿಕೊಳ್ಳುತ್ತಾರೆಯೇ? ಎಂದು ಅವರಿಗೆ ಮತ್ತೆ ಕೆಲವು ಅಂದರೆ (1) ಕೀರ್ತಿ, (2) ಕಾಂತ, (3) ಕನಕಗಳೆಂಬ ವಿಷಯಗಳು ಪರೀಕ್ಷೆಗಳನ್ನು ಇಡಲ್ಪಡುತ್ತವೆ.ಅವು ಸಹಜವಾಗಿ ಪರೀಕ್ಷೆಗಳಂತೆ ಇರುವುದಿಲ್ಲ. ಹಾಗಿದ್ದರೆ ಯಾರಾದರೂ ಎಚ್ಚರಿಕೆಯಿಂದ ಇರುತ್ತಾರೆ.

ಆ ಶಕ್ತಿಗಳನ್ನು ಪ್ರದರ್ಶಿಸುತ್ತಿದ್ದರೆ ಸಾಮಾನ್ಯರು ಆಶ್ಚರ್ಯ ಪಡುತ್ತಾರೆ. ಆತ ದೈವಾಂಶ ಸಂಭೂತನೆಂದು ಕೊಂಡಾಡುತ್ತಾರೆ, ಪಾದಾಭಿ ವಂದನೆಗಳನ್ನು ಮಾಡುತ್ತಾರೆ, ಸನ್ಮಾನಗಳನ್ನು ಮಾಡುತ್ತಾರೆ, ಹೊಗಳುತ್ತಾರೆ, ಶ್ರೇಷ್ಠರೆಂದು ಕೀರ್ತಿಸುತ್ತಾರೆ, ಆರತಿ ಮಾಡುತ್ತಾರೆ. ಸಹಜವಾಗಿ ಇಂತಹ ಪರಿಸ್ಥಿತಿಯಲ್ಲಿ ಯಾರಲ್ಲಾದರೂ ಅಹಂಕಾರ ಬೆಳೆಯುತ್ತದೆ. ತಾನೇ ಶ್ರೇಷ್ಠನೆಂದು ಭಾವಿಸುತ್ತಾನೆ. ಆತ ಏನು ಹೇಳಿದರೂ ಎಲ್ಲರೂ ಒಪ್ಪುತ್ತಾರೆ. ಏನು ಮಾಡಲು ಹೇಳುತ್ತಾರೋ ಅದನ್ನೇ ಮಾಡುತ್ತಾರೆ. ಅಂತಹ ಪರಿಸ್ಥಿತಿಯಲ್ಲಿ ಅಹಂಕಾರದಿಂದ ಮಾಡಬಾರದ ಕೆಲಸಗಳನ್ನು ಮಾಡುತ್ತಾರೆ. ಸೃಷ್ಟಿ ವಿರುದ್ಧವಾದ ಕೆಲಸಗಳನ್ನು ಮಾಡುತ್ತಾರೆ, ಮಾಡಿಸುತ್ತಾರೆ. ಹೀಗೆ ಪ್ರವರ್ತಿಸುವುದರಿಂದ ತನಗೆ ನೀಡಲ್ಪಟ್ಟ ಶಕ್ತಿಗಳೆಲ್ಲವನ್ನೂ ಕಳೆದುಕೊಳ್ಳಬೇಕಾಗುತ್ತದೆ. ಅಂದರೆ ಯಾವ ಸೃಷ್ಟಿ ಆ ಶಕ್ತಿಗಳನ್ನು ನೀಡಿತೋ ಆ ಸೃಷ್ಟಿಯೇ ಅವೆಲ್ಲವುಗಳನ್ನು ಉಪಸಂಹಾರ ಮಾಡಿಕೊಳ್ಳುತ್ತದೆ. ಹೀಗೆ ಕೀರ್ತಿ ಎಂಬ ಪರೀಕ್ಷೆಯಲ್ಲಿ ಸೋಲುವುದರಿಂದ ಸಾಮಾನ್ಯ ಮನುಷ್ಯನಾಗುತ್ತಾನೆ. ಒಂದು ವೇಳೆ ಆ ಪರೀಕ್ಷೆಯಲ್ಲಿ ತೇರ್ಗಡೆಯಾದರೆ ಅವರಿಗೆ ಕನಕ ಎಂಬ ಪರೀಕ್ಷೆಯನ್ನು ನೀಡಲಾಗುತ್ತದೆ.

ಅಂತಹವರು ಭಕ್ತರು ಕೇಳದೆಯೇ ಕಾಣಿಕೆಗಳನ್ನು ಸಮರ್ಪಿಸುತ್ತಾರೆ. ಕೇಳದಂತೆ ಲಕ್ಷಗಳು ಕೋಟಿಗಳನ್ನು ಆಶ್ರಮಕ್ಕೆ ಸಮರ್ಪಿಸುತ್ತಾರೆ. ಮೊದಮೊದಲು ಅವುಗಳ ಬಗ್ಗೆ ಹೆಚ್ಚು ಗಮನಹರಿಸುವುದಿಲ್ಲ ಆದರೆ ಆಶ್ರಮಗಳನ್ನು ವಿಸ್ತರಿಸುವ ನೆಪದಲ್ಲಿ ಅವುಗಳನ್ನು ತೆಗೆದುಕೊಂಡು ಹೋಗುವುದಲ್ಲದೇ ಭಕ್ತರಿಂದ ಜ್ಞಾನ ಕಾರಣಗಳಿಂದ ಹಣ, ಬಂಗಾರ, ಭೂಮಿಗಳನ್ನು ಶೇಖರಿಸುತ್ತಾರೆ. ಹೀಗೆ ಅವರ ಆಸೆಗಳಿಗೆ ಅಂತ್ಯವಿರುವುದಿಲ್ಲ. ಆ ಹಣಕ್ಕೋಸ್ಕರ ಭಕ್ತರಿಗೆ ನಾನಾ ಆಸೆಗಳನ್ನು ಕಲ್ಪಿಸುತ್ತಾರೆ. ಭರವಸೆಗಳನ್ನು ನೀಡುತ್ತಾರೆ. ಏನೇನೋ ಮಾಡುತ್ತೇವೆ ಎಂದು ಭ್ರಮೆಗೊಳಪಡಿಸುತ್ತಾರೆ. ತಿರಸ್ಕರಿಸಿದವರನ್ನು ನಾನಾ ವಿಧದ ಭಯಗಳಿಗೆ ಒಳಪಡಿಸುತ್ತಾರೆ. ಕೊನೆಗೆ ಸೃಷ್ಟಿಗೆ ವಿರುದ್ಧವಾದ ಕೆಲಸಗಳನ್ನು ಸಹ ಮಾಡುತ್ತಾರೆ.

ಸೃಷ್ಟಿಯ ನಿಯಮವೇನೆಂದರೆ ಗಳಿಸಿದ್ದನ್ನು ಹಂಚಬೇಕೇ ಹೊರತು, ಉಳಿಸಿಕೊಂಡು ಹೆಚ್ಚಿಸಿಕೊಳ್ಳಬಾರದು. ಹಂಚುವುದಕ್ಕೋಸ್ಕರ ನೀಡಲ್ಪಟ್ಟಿವೆಯೇ ಹೊರತು ಹೆಚ್ಚಿಸಿಕೊಳ್ಳಲು ನೀಡಿಲ್ಲ.

ಹೀಗೆ ಯಾವಾಗ ಸೃಷ್ಟಿಗೆ ವಿರುದ್ಧವಾಗಿ ಪ್ರವರ್ತಿಸುತ್ತಾರೋ ಹಣದ ಮೇಲೆ ಆಕಾಂಕ್ಷೆ ಹೆಚ್ಚುತ್ತದೆಯೋ! ಮಾಡಬಾರದ ಕೆಲಸಗಳನ್ನು ಮಾಡುತ್ತಾರೋ! ಅವರ ಶಕ್ತಿಗಳನ್ನೆಲ್ಲಾ ಕಳೆದುಕೊಳ್ಳಬೇಕಾಗುತ್ತದೆ. ಅಂದರೆ ಕೀರ್ತಿಯನ್ನು ಗೆದ್ದರೂ ಕನಕದ ವಿಷಯದಲ್ಲಿ ಇಡಲ್ಪಟ್ಟ ಪರೀಕ್ಷೆಯಲ್ಲಿ ಸೋಲುತ್ತಾರೆ.

ಈ ಧ್ಯಾನ ಮಾರ್ಗದಲ್ಲಿ ಪ್ರವೇಶಿಸಿದವರು ಬಹಳಷ್ಟುಮಂದಿ ಈ ವಿಷಯದಲ್ಲಿಯೇ ವಿಫಲರಾಗುತ್ತಿದ್ದಾರೆ. ಎಷ್ಟೇ ಸಾಧನೆ ಮಾಡಿದರು ಪುನಹ ಮೊದಲಿಗೇ ಬರುತ್ತಾರೆ. ಒಂದು ವೇಳೆ ಈ ವಿಷಯದಲ್ಲಿಯೂ ಸಹ ಗೆದ್ದರೂ 'ಕಾಂತ' ಎಂಬ ಪರೀಕ್ಷೆಯಲ್ಲಿ ಎಂಥಹವರಾದರು ಪತನ ಹೊಂದುತ್ತಾರೆ.

ಅಂತಹವರ ಮಹಿಮೆಗಳು, ಜ್ಞಾನವನ್ನು ನೋಡಿ ಪ್ರಭಾವಿತರಾದ ಪುರುಷರಿಗೆ ಮಹಿಳೆಯರು, ಮಹಿಳೆಯರಿಗೆ ಪುರುಷರು ಆಕರ್ಷಿತರಾಗುತ್ತಾರೆ. ಅಂತಹವರಿಗೆ ತುಂಬಾ ಹತ್ತಿರವಾಗುತ್ತಾರೆ. ಅಂಥಹವರಿಂದ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದೆಂದು, ತಮ್ಮ ನೋವುಗಳನ್ನು ದೂರ ಮಾಡಿಕೊಳ್ಳಬಹುದೆಂದು ಅವರಿಗೆ ಹತ್ತಿರವಾಗುತ್ತಾರೆ. ಅಂತಹ ಸಂದರ್ಭಗಳಲ್ಲಿ ಇವರು ಮಾಡಬಾರದ ಕೆಲಸಗಳನ್ನು ಮಾಡಿದರೂ, ಸೃಷ್ಟಿಗೆ ವಿರುದ್ಧವಾಗಿ ಪ್ರವರ್ತಿಸಿದರೂ ತಮ್ಮ ಶಕ್ತಿಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ಎಷ್ಟು ಪರೀಕ್ಷೆಗಳನ್ನು ಗೆದ್ದರೂ 'ಕಾಂತ' ಎಂಬ ಪರೀಕ್ಷೆಯಲ್ಲಿ ಎಂತಹವರಾದರು ಪತನ ಹೊಂದುತ್ತಿದ್ದಾರೆ.

ಆದರೆ ಇದನ್ನೂ ಸಹ ಗೆದ್ದರೆ ಅವರಿಗೆ ನೀಡಲ್ಪಟ್ಟ ಶಕ್ತಿಗಳ ಮೂಲಕ ಪೂರ್ಣ ಜ್ಞಾನವನ್ನು ಸಂಪಾದಿಸಿಕೊಳ್ಳಬಹುದು. ದೇವರಾಗಿ ಬದಲಾಗುತ್ತಾರೆ. ಸೃಷ್ಟಿಯಲ್ಲಿಯೇ ಶ್ರೇಷ್ಠರೆಂದು ಕೀರ್ತಿಸಲ್ಪಡುತ್ತಾರೆ.

ಆದ್ದರಿಂದ ತಿಳಿದುಕೊಳ್ಳಿ "ಧ್ಯಾನದಿಂದಲೇ ಜ್ಞಾನ"ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಆದರೆ ಸ್ವಲ್ಪ ಧ್ಯಾನ ಮಾಡುವುದರಿಂದ 'ಜ್ಞಾನ' ಬರುವುದಿಲ್ಲವೆಂದು ತಿಳಿದುಕೊಳ್ಳಬೇಕು. ಧ್ಯಾನಕ್ಕೆ... ಜ್ಞಾನವನ್ನು ಹೊಂದುವುದಕ್ಕೆ ನಡುವೆ ಬಹಳಷ್ಟು ತತಂಗವಿದೆ. ಅಂದರೆ ಬಹಳಷ್ಟು ಸ್ಥಿತಿಗಳು ಇವೆ. ಪರೀಕ್ಷೆಗಳಿವೆ. ಅಡೆತಡೆಗಳಿವೆ. ಆದ್ದರಿಂದ ಕಷ್ಟಪಟ್ಟು ಧ್ಯಾನ ಮಾಡಿ. ನಿಯಮಗಳನ್ನು ಪಾಲಿಸಿ. ಜ್ಞಾನಿಗಳಾಗಿ. ಜೀವನವನ್ನು ಧನ್ಯವಾಗಿಸಿಕೊಳ್ಳಿ. ದೈವತ್ವವನ್ನು ಪಡೆಯಿರಿ.

ಮತ್ತೊಮ್ಮೆ ತಿಳಿದುಕೊಳ್ಳಿ!

ಇಲ್ಲಿ ನಾವು ತಿಳಿದುಕೊಳ್ಳಬೇಕಾದದ್ದು ಏನೆಂದರೆ, ಶ್ವಾಸದ ಮೇಲೆ ಗಮನವಿಟ್ಟರೂ ಚಂಚಲ ಮನಸ್ಸು ನಿಶ್ಚಲವಾಗುವುದಿಲ್ಲ. ಅಂದರೆ ಆಲೋಚನೆಗಳಿಲ್ಲದ ಸ್ಥಿತಿಗೆ ಸೇರಿಕೊಳ್ಳುವುದಿಲ್ಲ. ಮನಸ್ಸು ನಿಶ್ಚಲವಾಗದ ಹೊರತು ಆನಂತರದ ಸ್ಥಿತಿಗೆ ಸೇರುವುದಿಲ್ಲ. ಅಂದರೆ ಮನಸ್ಸು ನಿರ್ಮಲವಾಗುವುದಿಲ್ಲ, ಅಂದರೆ ಶುದ್ಧಿಯಾಗುವುದಿಲ್ಲ. ಮನಸ್ಸು ಶುದ್ಧಿಯಾದರೇನೇ ಬುದ್ಧಿ ವಿಕಸಿಸುತ್ತದೆ.

ಮನಸ್ಸು ಶುದ್ಧಿಯಾದರೇನೇ ಅದರ ನಂತರದ ಸ್ಥಿತಿ ಉಂಟಾಗುತ್ತದೆ ಅಂದರೆ ಶೂನ್ಯವಾಗುತ್ತದೆ. ಮನಸ್ಸು ಶೂನ್ಯವಾದರೇನೇ ಜ್ಞಾನ ಉದಯಿಸುತ್ತದೆ. ಹಾಗೆ ಮನಸ್ಸು ಎಷ್ಟು ಶೂನ್ಯವಾದರೆ ಅಷ್ಟು 'ಜ್ಞಾನ' ಹೆಚ್ಚುತ್ತದೆ.

ಇದನ್ನಾದರಿಸಿ ಯಾವುದೇ ವ್ಯಕ್ತಿಯಾದರೂ ಜ್ಞಾನ ಹೊಂದಬೇಕೆಂದರೆ ಆಂತರಿಕವಾಗಿ ಮನಸ್ಸಿನಲ್ಲಿ ಎಷ್ಟು ಬದಲಾವಣೆಗಳು ನಡೆಯಬೇಕೆಂದು ತಿಳಿದುಕೊಳ್ಳಬಹುದು. ಆ ಬದಲಾವಣೆಗಳೆಲ್ಲವೂ ಧ್ಯಾನದ ತೀವ್ರತೆ ಹೆಚ್ಚಾದರೆ ಮಾತ್ರ ಸಾಧ್ಯವಾಗುತ್ತದೆ.

ಒಂದು ವಿಧದಲ್ಲಿ ಮನಸ್ಸನ್ನು ನಿರ್ಮಲಗೊಳಿಸುವುದು ಎಂದರೆ ತಮೋಗುಣವನ್ನು, ರಜೋಗುಣವನ್ನು ತೊಲಗಿಸಿಕೊಂಡು ಸತ್ವ ಗುಣವನ್ನು ಸಂಪಾದಿಸುವುದು. ಅದೇರೀತಿ ಮನಸ್ಸನ್ನು ಶೂನ್ಯಗೊಳಿಸುವುದು ಎಂದರೆ ಸತ್ವಗುಣವನ್ನು ತೊಲಗಿಸಿ ನಿರ್ಗುಣವನ್ನು ಸಂಪಾದಿಸುವುದು.

ಇಲ್ಲಿ ಗಮನಿಸಿದರೆ ಸತ್ವ ಗುಣದಲ್ಲಿ 'ಬುದ್ಧಿ' ವಿಕಸಿಸುತ್ತದೆ. ನಿರ್ಗುಣದಲ್ಲಿ 'ಜ್ಞಾನ' ಉದಯಿಸುತ್ತದೆ. ಅಂದರೆ ಬುದ್ಧಿಯ ಮೂಲಕವೇ ಜ್ಞಾನವನ್ನು ಸಂಪಾದಿಸಿಕೊಳ್ಳಬಹುದು. ಜ್ಞಾನವನ್ನು ಹೊಂದಿದ ನಂತರ ಆ ಬುದ್ಧಿ ಮತ್ತಷ್ಟು ಉದಾತ್ತವಾಗುತ್ತದೆ.

ಆದ್ದರಿಂದ ಧ್ಯಾನ ಮಾಡುವವರು ಈ ಬದಲಾವಣೆಗಳನ್ನೆಲ್ಲಾ ಗಮನಿಸುತ್ತಿರಬೇಕು. ಅಂತಹ ಬದಲಾವಣೆಗಳು ಬರದೇ ಇದ್ದರೆ ಸಾಧನೆಯಲ್ಲಾಗಲೀ, ಆಹಾರದ

ನಿಯಮಗಳಲ್ಲಾಗಲೀ, ಇನ್ನೆಲ್ಲಾದರೂ ದೋಷವಿದೆಯೆಂದು ತಿಳಿಯಬೇಕು. ಇವುಗಳನ್ನು ಸರಿ ಪಡಿಸಿಕೊಳ್ಳಬೇಕು.

ಹಾಗೆ ಎಚ್ಚರಿಕೆಯಿಂದ ಸಾಧನೆ ಮಾಡಿದರೆ 'ಜ್ಞಾನ'ವನ್ನು ಪಡೆಯಬಯಸುವವರಿಗೆ ಜ್ಞಾನಪ್ರಾಪ್ತಿಯಾಗುತ್ತದೆ. ಜ್ಞಾನವನ್ನು ಹೊಂದಲು ಬಯಸುವ ಸಾಧಕರು ಧ್ಯಾನ ಸಾಧನೆಯೊಂದಿಗೆ ಜ್ಞಾನದಿಂದ ತುಂಬಿದ ಪುಸ್ತಕಗಳನ್ನು ಓದುವುದು, ಜ್ಞಾನಿಗಳೊಂದಿಗೆ ಸಾಂಗತ್ಯ ಮಾಡುವುದನ್ನು ಸಹ ಮಾಡಿದರೆ ಇನ್ನೂ ಶೀಘ್ರವಾಗಿ ಜ್ಞಾನವನ್ನು ಹೊಂದುವ ಅವಕಾಶವಿದೆ.

ಅದರೊಂದಿಗೆ ಪಡೆದ ಜ್ಞಾನವನ್ನು ಎಲ್ಲರಿಗೂ ಹಂಚುತ್ತಿದ್ದರೆ ಅಂದರೆ ಈ ಜ್ಞಾನಮಾರ್ಗದಲ್ಲಿ 'ಸೇವೆ' ಮಾಡುತ್ತಿದ್ದರೆ ಇನ್ನೂ ಶೀಘ್ರವಾಗಿ ಜ್ಞಾನಿಗಳಾಗುವ ಅವಕಾಶವಿರುತ್ತದೆ.

ಅದೇನೇ ಇರಲಿ ಮನಸ್ಸು ಶೂನ್ಯವಾದ ನಿರ್ಗುಣ ಸ್ಥಿತಿಯಲ್ಲಿಯೇ ಅನುಭವ ಜ್ಞಾನ ಉಂಟಾಗುತ್ತದೆ ಎಂದು ತಿಳಿದುಕೊಳ್ಳಿ. ಅನುಭವ ಜ್ಞಾನವೇ ನಿಜವಾದ 'ಜ್ಞಾನ'. ಆಗ ಜ್ಞಾನವೇ ಕರ್ಮಗಳನ್ನು ದಗ್ಧ (ಭಸ್ಮ) ಮಾಡುತ್ತದೆ. ಮೋಕ್ಷವನ್ನು ತರುತ್ತದೆ. ಜನ್ಮಗಳಿಲ್ಲದಂತೆ ಮಾಡುತ್ತದೆ.

ಅದೇನೇ ಇರಲಿ ಮಾನವ ಕಷ್ಟಪಟ್ಟರೆ ಅಸಾಧ್ಯವಾದದ್ದು ಯಾವುದೂ ಇಲ್ಲ.

ಖಾಲಿ ಮನಸ್ಸು-ಶೂನ್ಯ ಮನಸ್ಸು

ಇಲ್ಲಿ ತಿಳಿಯಬೇಕಾದ ಇನ್ನೊಂದು ವಿಷಯವೆಂದರೆ ಖಾಲಿ ಮನಸ್ಸಿಗೂ, ಶೂನ್ಯ ಮನಸ್ಸಿಗೂ ನಡುವೆ ಇರುವ ವ್ಯತ್ಯಾಸವನ್ನು ತಿಳಿಯಬೇಕು. ಕಾರಣವೆಂದರೆ ಬಹಳಷ್ಟು ಜನ ಖಾಲಿ ಮನಸ್ಸನ್ನೇ ಶೂನ್ಯ ಮನಸ್ಸು ಎಂದು ಭಾವಿಸುತ್ತಿದ್ದಾರೆ.

ಖಾಲಿ ಮನಸ್ಸು ಅಂದರೆ ಆಲೋಚನೆಗಳಿಲ್ಲದ ಮನಸ್ಸು ಅಂದರೆ ನಿಶ್ಚಲವಾದ ಮನಸ್ಸು ಅಂದರೆ ಪ್ರಾರಂಭದ ಸ್ಥಿತಿ. ಆದರೆ ಶೂನ್ಯ ಮನಸ್ಸು ಎಂದರೆ ಮನಸ್ಸು ಶೂನ್ಯವಾದ ಸ್ಥಿತಿ. ಇನ್ನು ಅಲ್ಲಿ ಮನಸ್ಸಿನ ಪ್ರಾಮುಖ್ಯತೆ ಇಲ್ಲವೆಂದು ಅರ್ಥ. ಇದನ್ನೇ ರಮಣ ಮಹರ್ಷಿಗಳು ಸುಟ್ಟುಹೋದ ಹಗ್ಗದೊಂದಿಗೆ ಹೋಲಿಸಿದ್ದಾರೆ. ಇದು ಕೊನೆಯ ಸ್ಥಿತಿ.

ಮೊದಲನೇ ಸ್ಥಿತಿಯಲ್ಲಿ ಮನಸ್ಸು ಖಾಲಿಯಾಗುತ್ತದೆ ಆದರೆ ಮನಸ್ಸು ಇರುತ್ತದೆ. ಮೇಲಾಗಿ ಮಲಿನವಾಗಿ ಇರುತ್ತದೆ. ಅಂದರೆ ಇನ್ನೂ ಶುದ್ಧವಾಗಿಲ್ಲ. ನಂತರದ ಸ್ಥಿತಿಯಲ್ಲಿಯೇ ಶುದ್ಧವಾಗುತ್ತದೆ. ಉದಾಹರಣೆಗೆ ಖಾಲಿ ಮಡಕೆ(ಮಣ್ಣಿನ ಪಾತ್ರೆ) ಎನ್ನುತ್ತೇವೆ, ಅಂದರೆ ಮಡಕೆ ಇದೆ ಆದರೆ ಖಾಲಿಯಾಗಿದೆ. ಮಡಕೆಯಲ್ಲಿ ಸಾರು ಮಾಡಿದ್ದಾರೆ. ತಿಂದಿದ್ದಾರೆ ಅಂದರೆ ಖಾಲಿ ಮಾಡಿದ್ದಾರೆ. ಆದ್ದರಿಂದ ಖಾಲಿ ಮಡಕೆ ಎನ್ನುತ್ತೇವೆ. ಆದರೆ ಈ ಮಡಿಕೆಯನ್ನು ಇನ್ನೂ ತೊಳೆದಿಲ್ಲ ಅಂದರೆ ಶುದ್ಧ ಮಾಡಿಲ್ಲ. ಅಂದರೆ ಮಲಿನವಾದ ಖಾಲಿ ಮಡಕೆ ಎಂದು ಅರ್ಥ.

ಅದೇ ರೀತಿ ಮನಸ್ಸು ಆಲೋಚನೆಗಳಿಲ್ಲದೆ ಖಾಲಿಯಾಗಿದೆ ಹೊರತು ಅದು ಇನ್ನೂ ಶುದ್ಧವಾಗಿಲ್ಲ. ಅಂದರೆ ಮಲಿನವಾದ ಖಾಲಿ ಮನಸ್ಸು ಎಂದರ್ಥ. ಇದು ಪ್ರಾರಂಭದ ಸ್ಥಿತಿ ನಂತರ ಶುದ್ಧವಾದ ಮನಸ್ಸು. ಇದು ಎರಡನೆಯ ಸ್ಥಿತಿ. ನಂತರ ಶೂನ್ಯವಾದ ಮನಸ್ಸು, ಇದು ಕೊನೆಯ ಸ್ಥಿತಿ. ಆದ್ದರಿಂದಲೇ ಆಲೋಚನೆಗಳಿಲ್ಲದ ಮೊದಲನೇ ಸ್ಥಿತಿಯಲ್ಲಿರುವವರು ಮನಸ್ಸು ಶುದ್ಧವಾಗದಿರುವುದರಿಂದ ಅವರ ಪ್ರವರ್ತನೆಯಲ್ಲಿ ಹೇಳಿಕೊಳ್ಳುವ ಬದಲಾವಣೆ ಕಾಣಿಸುವುದಿಲ್ಲ, ಅದಕ್ಕಿಂತ ಮುಂಚೆ ತಪ್ಪುಗಳು, ಪಾಪಗಳನ್ನು ಮಾಡುತ್ತಿದ್ದರೆ ಈ ಸ್ಥಿತಿಯಲ್ಲಿರುವವರು ಅಂತಹ ತಪ್ಪುಗಳನ್ನೇ

ಮಾಡುತ್ತಿರುತ್ತಾರೆ. ಅವರಿಗೆ ಧ್ಯಾನದಿಂದ ಕೆಲವು ಲಾಭಗಳು ಬರಬಹುದೇ ಹೊರತು ಪ್ರವರ್ತನೆಯಲ್ಲಿ ಬದಲಾವಣೆ ಕಾಣಿಸುವುದಿಲ್ಲ.

ಪ್ರವರ್ತನೆಯಲ್ಲಿ ಬದಲಾವಣೆ ಬರಬೇಕೆಂದರೆ ಮನಸ್ಸು ಶುದ್ಧವಾಗಬೇಕು. ಪ್ರವರ್ತನೆ ದೈವದಂತೆ ಇರಬೇಕೆಂದರೆ ಮನಸ್ಸು ಶೂನ್ಯ ವಾಗಬೇಕು.

ಮನೋ ಶೂನ್ಯವೇ 'ಜ್ಞಾನ'

ಆದ್ದರಿಂದ ಮನಸ್ಸನ್ನು ಶೂನ್ಯಗೊಳಿಸಿಕೊಳ್ಳಲು ಪ್ರಯತ್ನಿಸಿ. ಜ್ಞಾನವಂತರಾಗಿ ಎಲ್ಲರಿಗೂ ಆದರ್ಶ ವ್ಯಕ್ತಿಗಳಾಗಿ. ಶ್ರೀ ಕೃಷ್ಣ, ಬುದ್ಧ, ಜೀಸಸ್, ಮೊಹಮ್ಮದ್, ನಾನಕ್, ಪತ್ರೀಜಿಯವರಂತೆ ಪ್ರಪಂಚಕ್ಕೆ ಸೇವೆ ಮಾಡಿ, ಎಲ್ಲರನ್ನೂ ಜ್ಞಾನವಂತರನ್ನಾಗಿಸಲು ಶ್ರಮಿಸಿ.

ಯಾವುದು ಏನಾದರೂ ಈ ಬದಲಾವಣೆಗಳೆಲ್ಲವೂ ಧ್ಯಾನದಿಂದಲೇ ಸಾಧ್ಯವೆಂದು ತಿಳಿದುಕೊಳ್ಳಿ, ಧ್ಯಾನ ಮಾಡಿ. ಪತ್ರೀಜಿ ಮಾರ್ಗದಲ್ಲಿ ಪ್ರಯಾಣಿಸಿ.

ಪಿರಮಿಡ್ ಧ್ಯಾನಿಗಳ ತತ್ವಸಾರ

ಜ್ಞಾನ ನವರತ್ನಗಳು

1. ಆತ್ಮವೇ ಪರಬ್ರಹ್ಮ
2. ಜೀವಿಯೇ ದೇವರು
3. ದೇಹವೇ ದೇವಾಲಯ
4. ಶ್ವಾಸವೇ ಗುರು
5. ಸಮಯವೇ ಸಾಧನೆ
6. ಸಹನೆಯೇ ಪ್ರಗತಿ
7. ಅನುಭವವೇ ಜ್ಞಾನ
8. ದಾನವೇ ಧರ್ಮ
9. ಧರ್ಮವೇ ಪುಣ್ಯ



ಧ್ಯಾನ.. ಎಂದರೆ.. ಶ್ವಾಸಧಾರೆಯ.. ಮೇಲೆ.. ಧ್ಯಾಸಧಾರೆ

'ಅನುನಿತ್ಯ ಸಾಧನೆ'

"ಸಾಧನೆ"ಎಂಬುದೇ... ಸರ್ವಸ್ವ
ಸರ್ವಸ್ವವನ್ನೂ ಕೊಡುವುದೇ... "ಸಾಧನೆ"
ಆತ್ಮಜ್ಞಾನ ಮುಮುಕ್ಷುಗಳಿಗೆ ಸಂಬಂಧಿಸಿದವರೆಗೂ
"ಸಾಧನೆ" ಎಂದರೆ "ಧ್ಯಾನ ಸಾಧನೆ"
ಯೋಗಿ ಆಗಬೇಕೆಂದರೆ.. ಧ್ಯಾನ ಸಾಧನೆ
ಋಷಿ ಆಗಬೇಕೆಂದರೆ.. ಮಹಾ ಧ್ಯಾನಸಾಧನೆ
"ಮಹರ್ಷಿ" ಆಗಬೇಕೆಂದರೆ.. ಮಹಾಮಹಾ ಧ್ಯಾನಸಾಧನೆ
"ಬ್ರಹ್ಮರ್ಷಿ" ಆಗಬೇಕೆಂದರೆ.. ಮಹಾಮಹಾ ಧ್ಯಾನಸಾಧನೆ..
ಮತ್ತೆ ಬಹಳಷ್ಟು ಬಹಳಷ್ಟು ಧ್ಯಾನ ಸಾಧನೆ
ಸಾಧನೆಗೆ ಮುನ್ನ (ಪೂರ್ವ) "ಲಘು".. ಸಾಧನೆಯ ನಂತರ "ಗುರು"
ಸಾಧನೆಯನ್ನು ಎಲ್ಲರಿಗೂ ಸದಾ, ಒದಗಿಸುತ್ತಿದ್ದರೆ.. ಪರಮ ಗುರು
ಸಾಧನೆಯನ್ನು ಎಲ್ಲರಿಗೂ ಒದಗಿಸುತ್ತಿರುವವನು ಮಹಾಪುರುಷ, ಬುದ್ಧ ಪುರುಷ
ಧ್ಯಾನ ಸಾಧನಗೆ ಪೂರ್ವ.. ಪಾಮರ
ಧ್ಯಾನ ಸಾಧನೆಯ ನಂತರ.. ಪಂಡಿತ, ಸಿದ್ಧಪುರುಷ
"ಸಾಧನೆ" ಎಂದರೆ "ಅನುನಿತ್ಯ ಸಾಧನೆ"..
"ಸಾಧನೆ" ಎಂಬುದು ದೈನಂದಿನ ಖಡ್ಡಾಯ ಕಾರ್ಯಕ್ರಮ
"ಸಾಧನೆ" ಎಂದರೆ ಸರ್ವದೇಶ ಕಾಲಮಾನ ಪರಿಸ್ಥಿತಿಗಳಲ್ಲಿಯೂ.. ಸಾಧನೆ
"ಸಾಧನೆ" ಎಂದರೆ ತೀವ್ರ ಪುರುಷ ಪ್ರಯತ್ನ.. ದೀಕ್ಷಾಯುತ ಪುರುಷ ಪ್ರಯತ್ನ
ಸಾಧನೆ ಎಂದರೆ.. ಅಕುಂಠಿತ ದೀಕ್ಷೆ

ಯಾರ ಸಾಧನೆ ಅವರದೇ.. ಯಾರ ಸಿದ್ಧತ್ವ ಅವರದೇ

ಲಘುಗಳೆಲ್ಲರನ್ನೂ ಸಾಧನೆಗೆ ಸದಾ ಪ್ರೋತ್ಸಾಹಿಸುವುದೇ ಗುರುಗಳೆಲ್ಲರ ಧ್ಯೇಯ. ಅಸ್ತಿತ್ವವು ಗುರುಗಳೆಲ್ಲರ ಸಮೀಪದಿಂದ ಸಾಧನೆಗೆ ಬೇಕಾದ ಪ್ರೋತ್ಸಾಹವನ್ನೂ, ಸ್ಫೂರ್ತಿಯನ್ನು ಹೊಂದುವುದೇ ಲಘುಗಳೆಲ್ಲರ ಮಹಾಭಾಗ್ಯ

ಸಾಧನೆಯಿಂದ ಎಲ್ಲಾ ಕೆಲಸಗಳು ಕೈಗೂಡುತ್ತವೆ.. ಧರಣಿಯಲ್ಲಿ, ವಿಶ್ವದಲ್ಲಿ ಅನು ನಿತ್ಯ ಸಾಧನೆ ಜಯಹೋ.. ನಿರಂತರ ಸಾಧನೆ ಜಯ ಜಯಹೋ.

ಅನುಬಂಧ

"ಪಾರಿಜಾತ ಪುಷ್ಪಗಳು"

"ಎನ್‌ಲೈಟೆನ್‌ಮೆಂಟ್"ಎಂಬ ಆಂಗ್ಲ ಪದಕ್ಕೆ ಕನ್ನಡದಲ್ಲಿ "ಯಥಾರ್ಥಜ್ಞಾನಪ್ರಕಾಶ" ಎಂದು ಒಂದು ಅರ್ಥ

ಇನ್ನೊಂದು ವಿಧದಲ್ಲಿ ಹೇಳಬೇಕೆಂದರೆ...

"ಎನ್‌ಲೈಟೆನ್‌ಮೆಂಟ್" ಎಂದರೆ "ಬುದ್ಧಿಯ ಸಂಪೂರ್ಣ ಪರಿಪಕ್ವ ಸ್ಥಿತಿ"

ಮತ್ತು "ಮಾನವ ಜಾತಿಯ ವಿಕಾಸದಲ್ಲಿನ ಅತ್ಯುನ್ನತವಾದ ಪರಾಕಾಷ್ಠೆಯ ಸ್ಥಿತಿ"

ಮಾನವ ಜೀವನವನ್ನು ಮೌಲ್ಯವುಳ್ಳ ಯಥಾರ್ಥ ಸ್ವರೂಪವಾಗಿ ತಿಳಿದುಕೊಂಡವನೇ

"ಎನ್‌ಲೈಟೆನ್ಡ್‌ಮಾಸ್ಟರ್" ಮದರ್ ತೆರೇಸಾ, ಮಹಾತ್ಮಗಾಂಧಿಯಂತಹವರು

ಪ್ರಾಪಂಚಿಕಪರವಾಗಿ ಎನ್‌ಲೈಟೆನ್ಡ್‌ಮಾಸ್ಟರ್ಸ್ ಗೌತಮ ಬುದ್ಧ, ಮಹಾವೀರ, ಯೇಸುಪ್ರಭು ಇಂತಹವರು ಆಧ್ಯಾತ್ಮಿಕ ಪರವಾಗಿ ಎನ್‌ಲೈಟೆನ್ಡ್ ಮಾಸ್ಟರ್ಸ್.

ಸಕಲ ಪ್ರಾಣಿಕೋಟಿಯ ಉನ್ನತಿಗೆ, ಪ್ರಗತಿಗೆ ಕೈಲಾದಷ್ಟು ಸಹಾಯ ಸಹಕಾರಗಳನ್ನು ಸದಾ ಒದಗಿಸುತ್ತಿರುವವರೇ "ಎನ್‌ಲೈಟೆನ್ಡ್‌ಮಾಸ್ಟರ್ಸ್".

ಪ್ರಾಪಂಚಿಕ ಎನ್‌ಲೈಟೆನ್‌ಮೆಂಟ್ – ಯಥಾರ್ಥಜ್ಞಾನಪ್ರಕಾಶ.. ಎಂಬುದು ಮೊದಲ ಮೆಟ್ಟಿಲು

ಆಧ್ಯಾತ್ಮಿಕ ಎನ್‌ಲೈಟೆನ್‌ಮೆಂಟ್ – ದಿವ್ಯಜ್ಞಾನಪ್ರಕಾಶ.. ಎಂಬುದು ಎರಡನೆಯ ಮೆಟ್ಟಿಲು

"ನಿರಂತರ ಪರೋಪಕಾರ" ಎಂಬುದು ಪ್ರಾಪಂಚಿಕ ಎನ್‌ಲೈಟೆನ್‌ಮೆಂಟ್

ಆದರೆ ಅದರೊಂದಿಗೆ "ಪರಲೋಕ ಜ್ಞಾನವನ್ನು" ಹೊಂದುತ್ತಾ ಇರುವುದೇ "ಸ್ಪಿರಿಚುವಲ್ ಎನ್‌ಲೈಟೆನ್ಮೆಂಟ್"

ಭೂಮಿಗೆ ಸಂಬಂಧಿಸಿದ್ದು "ಯಥಾರ್ಥಜ್ಞಾನಪ್ರಕಾಶ"ವಾದರೆ

"ಸ್ಪಿರಿಚುವಲ್ ಎನ್‌ಲೈಟೆನ್‌ಮೆಂಟ್" ಎಂಬುದು ಆಕಾಶ(ದಿವಿ)ಕ್ಕೆ ಸಂಬಂಧಿಸಿದ

"ದಿವ್ಯಜ್ಞಾನ ಪ್ರಕಾಶ" "ಸ್ಪಿರಿಚುವಲ್‌ಎನ್‌ಲೈಟೆನ್‌ಮೆಂಟ್" ಎಂದರೆ

"ಪರಲೋಕ ಜ್ಞಾನದಿಂದ ಕೂಡಿದ ಆತ್ಮದ ಪೂರ್ಣ ವಿಕಸನಸ್ಥಿತಿ"

ಪರಲೋಕ ಜ್ಞಾನದಿಂದ ಪರಿಪೂರ್ಣರಾದವರೇ

ದಿವ್ಯಜ್ಞಾನಪ್ರಕಾಶದಿಂದ ತುಂಬಿದ ಮಾಸ್ಟರ್ಸ್

"ಎನ್‌ಲೈಟೆನ್‌ಮೆಂಟ್"ಗೆ "ಸ್ಪಿರಿಚುವಾಲಿಟಿ" ಎಂಬುದು ಜೊತೆಯಾದರೇನೆ (ಪುಷ್ಪಕ್ಕೆ ಪರಿಮಳ ಹಬ್ಬಿದಂತೆ, ಪರಿಮಳ ಇಲ್ಲದ ಪುಷ್ಪ) ಸಂಪೂರ್ಣವಾದ ಪುಷ್ಪ ಆಗಲಾರದು!

ಪ್ರತಿಯೊಬ್ಬ ಮಾನವನ ಧ್ಯೇಯ.. ದಿವ್ಯ ಜ್ಞಾನ ಪ್ರಕಾಶದಿಂದ ತುಂಬಿದ

ಸುಗಂಧ ಪರಿಮಳಭರಿತವಾದ "ಪಾರಿಜಾತ ಪುಷ್ಪ"ದಂತೆ ಅರಳುವುದೇ(ಇರುವುದೇ)

"ಪಾರಿಜಾತ ಪುಷ್ಪ" ಎಂಬುದು ಭೂಮಿಗೆ ಸಂಬಂಧಿಸಿದ ಸಾಧಾರಣ ಪುಷ್ಪ ಅಲ್ಲ..

ಅದು "ಸ್ವರ್ಗ"ಕ್ಕೆ ಸಂಬಂಧಿಸಿದ "ದೇವಲೋಕದ ಕುಸುಮ"

ಸ್ಪಿರಿಚುವಲ್ ಎನ್‌ಲೈಟೆನ್‌ಮೆಂಟ್="ಪಾರಿಜಾತ ಪುಷ್ಪ"

ಸ್ಪಿರಿಚುವಲ್ ಎನ್‌ಲೈಟೆನ್‌ಮೆಂಟ್ =

ಧ್ಯಾನಾಭ್ಯಾಸ+ಸಜ್ಜನ ಸಾಂಗತ್ಯ ಅಭ್ಯಾಸ+ಸ್ವಾಧ್ಯಾಯ ಅಭ್ಯಾಸ

ಎಷ್ಟು ಹೆಚ್ಚಾಗಿ ಧ್ಯಾನ ಅಭ್ಯಾಸ ಮಾಡಿದರೆ..

ಎಷ್ಟು ಹೆಚ್ಚಾಗಿ ಸ್ವಾಧ್ಯಾಯ ಅಭ್ಯಾಸ ಮಾಡಿದರೆ..

ಎಷ್ಟು ಹೆಚ್ಚಾಗಿ ಸಜ್ಜನ ಸಾಂಗತ್ಯ ಅಭ್ಯಾಸ ಮಾಡಿದರೆ..

ಅಷ್ಟು ಹೆಚ್ಚಾಗಿ ನಾವು ಸುಗಂಧ ಪರಿಮಳ ಭರಿತ

ದಿವ್ಯ ಪಾರಿಜಾತ ಪುಷ್ಪಗಳಂತೆ ವಿಕಸಿಸುತ್ತೇವೆ.

ಪಿರಮಿಡ್ ಮಾಸ್ಟರ್‌ಗಳೆಲ್ಲರೂ ದಿವ್ಯಜ್ಞಾನಪ್ರಕಾಶದಿಂದ ವಿಕಸಿಸಿದ (ಅರಳಿದ) ಪಾರಿಜಾತ ಕುಸುಮಗಳು!

ಭೂಲೋಕದಲ್ಲಿ ಇನ್ನು ಎಲ್ಲರೂ ಪಾರಿಜಾತ ಪುಷ್ಪಗಳಂತೆ ಅರಳುವಂತಾಗಲಿ!

'ಬುದ್ಧಿ+ಜ್ಞಾನ=ಬುದ್ಧತ್ವ'

"ಏನೋ ದಡ್ಡ?! ಬುದ್ಧಿ, ಜ್ಞಾನ ಇಲ್ಲವೇ?!" ಇದನ್ನು ಬಾಲ್ಯದಲ್ಲಿ ಎಷ್ಟೋ ಸಲ ಕೇಳಿದ್ದೇವೆ.. ಆದರೆ ಆಗ ಅರ್ಥವಾಗಲಿಲ್ಲ

"ನಾವು ಯಾವುದೋ ತಪ್ಪು ಮಾಡಿದ್ದೇವೆ ಅದಕ್ಕೆ 'ಹಿರಿಯರು' ಬೈದಿದ್ದಾರೆ" ಎಂದುಕೊಂಡೆವು

ಇಷ್ಟಕ್ಕೂ "ಬುದ್ಧಿ" ಎಂದರೆ ಏನು? "ಜ್ಞಾನ" ಎಂದರೆ ಏನು?

"ಬುದ್ಧಿ" ಎಂದರೆ... "ಮೂಲಭೂತ ಸಾಮಾನ್ಯ ಜ್ಞಾನ"

"ಬುದ್ಧಿ" ಎಂದರೆ "ವರ್ತಮಾನ ಪರಿಸ್ಥಿತಿಗಳ ಬಗ್ಗೆ ಸರಿಯಾದ ತಿಳುವಳಿಕೆ"

"ಬುದ್ಧಿಯನ್ನು ಹೊಂದಿರುವುದು" ಎಂದರೆ "ಸದಾ ಸಂದರ್ಭಕ್ಕೆ ಅನುಸಾರವಾಗಿ ವ್ಯವಹರಿಸುವುದು". "ಸದಾ ಅರಿವಿನಿಂದ ಪ್ರತಿಕ್ರಿಯಿಸುವುದು".

"ಸದಾ ಅರಿವಿನಿಂದ ಕೆಲಸ ಮಾಡುವುದು".

"ಬುದ್ಧಿಯನ್ನು ಹೊಂದಿರುವುದು ಎಂದರೆ".. "ಶಾಸ್ತ್ರೀಯವಾದ ಪ್ರಾಪಂಚಿಕ ಯೋಚನೆಗಳು, ಲೌಕಿಕ ಮಾತುಗಳನ್ನು ಹೊಂದಿರುವುದು"ಎಲ್ಲವೂ ಒಟ್ಟಾಗಿ "ಬುದ್ಧಿ" ಎಂದರೆ.. "ಬೇಸಿಕ್ ಕಾಮನ್‌ಸೆನ್ಸ್".. ಮೂಲಭೂತ ಸಾಮಾನ್ಯ ಜ್ಞಾನ"

"ಜ್ಞಾನ" ಎಂದರೆ "ಸ್ವಯಂ ಆತ್ಮದ ಬಗ್ಗೆ ಸ್ವಯಂ ಅನುಭವ ಜ್ಞಾನ"

"ಜ್ಞಾನ" ಎಂದರೆ.. ಪುನರ್ಜನ್ಮ ಸಿದ್ಧಾಂತ ಸತ್ಯದ ಬಗ್ಗೆ

ಕರ್ಮ ಸಿದ್ದಾಂತ ಸತ್ಯದ ಬಗ್ಗೆ ಅನುಭವ ಜ್ಞಾನ"

"ಜ್ಞಾನ" ಎಂದರೆ "ಪರಲೋಕಗಳ ಬಗೆಗಿನ ಶಾಸ್ತ್ರೀಯವಾದ ಸಮಾಚಾರ"

"ಜ್ಞಾನವನ್ನು ಹೊಂದಿರುವುದು ಎಂದರೆ"ಶಾಸ್ತ್ರೀಯವಾದ ಪಾರಲೌಕಿಕ ಆತ್ಮದ

ಅನುಭವಗಳನ್ನು ಹೊಂದಿರುವುದು ಹಿಂದಕ್ಕೆ ತಿರುಗಿ ನೋಡಿದರೆ...

ಈ "ಜ್ಞಾನ"ದ ಬಗ್ಗೆ ಆ ದೊಡ್ಡವರಿಗೆ "ಏನೂ ತಿಳಿಯದು" ಎಂದೇ ಹೇಳಬೇಕು

ಆ ಹಿರಿಯರಿಗೆ ವಾಸ್ತವಗಳು ಯಥಾವತ್ತಾಗಿ "ಯಾವುದೂ ತಿಳಿಯದಿದ್ದರೂ...

ಯಾವುದೋ ಸಾಮಾನ್ಯ ಪದದಂತೆ "ಬುದ್ದಿ", "ಜ್ಞಾನ"ಎನ್ನುತ್ತಾ ಸುಮ್ಮನೆ ಪದಗಳನ್ನು ಹಾಗೆ

ಬಳಸುತ್ತಾ ಇರುತ್ತಾರೆ. ಬುದ್ಧಿ+ಜ್ಞಾನ=ಬುದ್ಧತ್ವ

ಪಿರಮಿಡ್ ಸ್ಪಿರಿಚುವಲ್ ಸೊಸೈಟೀಸ್ ಮೂವ್ಮೆಂಟ್‌ನಲ್ಲಿ.. ಬುದ್ಧಿ ವಿಭಾಗಕ್ಕೂ ಮತ್ತು ಜ್ಞಾನ ವಿಭಾಗಕ್ಕೂ ಸರಿಸಮಾನವಾದ ಪ್ರಾಮುಖ್ಯತೆ ಇದೆ ಪಿರಮಿಡ್ಸ್ ಸ್ಪಿರಿಚುವಲ್ ಸೊಸೈಟೀಸ್ ಮೂವ್ಮೆಂಟ್‌ನಲ್ಲಿ... ಬುದ್ಧಿ ವಿಕಾಸಕ್ಕೂ, ಜ್ಞಾನಸಮಪಾರ್ಜನೆಗೂ ವಿಶೇಷವಾಗಿ ಪ್ರಶಿಕ್ಷಣ ಕೊಡಲ್ಪಡುತ್ತಿರುತ್ತದೆ.

.... ಪ್ರತಿಯೊಬ್ಬರೂ ಬುದ್ಧಿ, ಜ್ಞಾನವನ್ನು ಹೊಂದುವಂತಾಗಲಿ!

"ಬುದ್ಧಿ", "ಜ್ಞಾನ".. ಈ ಎರಡನ್ನೂ ಸಮ ಪ್ರಮಾಣದಲ್ಲಿ ಹೊಂದಿರುವವರೇ.. "ಬುದ್ಧರು"

ಅನೇಕ ಜನರಿಗೆ ಬುದ್ಧಿ ಇರಬಹುದು ಆದರೆ.. 'ಜ್ಞಾನ' ಇಲ್ಲದೇ ಇರಬಹುದು..

ಕೆಲವರಿಗೆ ಜ್ಞಾನ ಇರಬಹುದು ಆದರೆ.. ಬುದ್ಧಿ ಇಲ್ಲದೇ ಇರಬಹುದು.. ಜನರೆಲ್ಲರೂ ಬುದ್ಧಿ, ಜ್ಞಾನವನ್ನು ಹೊಂದುವಂತಾಗಲಿ!

ಎಲ್ಲರೂ ಬುದ್ಧರಾಗಲಿ! ಧ್ಯಾನ = ಬುದ್ಧಿ+ಜ್ಞಾನ

ಪ್ರಪ್ರಥಮವಾಗಿ "ಧ್ಯಾನ", "ಧ್ಯಾನ ಸಾಧನೆ" ಎನ್ನುವಂತಹವು ಮಾನವರಿಗೆ "ಬುದ್ಧಿ"ಯನ್ನು ಉಂಟುಮಾಡುತ್ತವೆ

"ಬುದ್ಧಿ ಇಲ್ಲದವರು".. "ಬುದ್ಧಿ ಇರುವವರಾಗಿ" ತಯಾರಾಗುತ್ತಾರೆ.

ಅನುಕ್ರಮವಾಗಿ "ಧ್ಯಾನ", "ಧ್ಯಾನ ಸಾಧನೆ" ಎನ್ನುವಂತಹವು ಜ್ಞಾನವನ್ನು ಉಂಟು ಮಾಡುತ್ತವೆ.

"ಧ್ಯಾನಿಗಳು" ಅಚಿರಕಾಲದಲ್ಲಿಯೇ "ಜ್ಞಾನಿ"ಗಳಾಗಿ ಬದಲಾಗುತ್ತಾರೆ

ಪಿರಮಿಡ್ಸ್ ಸ್ಪಿರಿಚುವಲ್ ಸೊಸೈಟೀಸ್ ಮೂವ್ಮೆಂಟ್.. ಬುದ್ಧರಾಗಬೇಕು ಎಂದು ಬಯಸುವವರಿಗೆಲ್ಲಾ.. ಆಹ್ವಾನ ನೀಡುತ್ತಿದೆ.

ಭೂಲೋಕದಲ್ಲಿ ಎಲ್ಲರೂ ವಿಶೇಷವಾದ ಬುದ್ಧಿ ಮತ್ತು ಅಪಾರವಾದ ಜ್ಞಾನವನ್ನು ಹೊಂದಿರುವಂತಾಗಲಿ! ಬುದ್ಧಿ+ಜ್ಞಾನ–ಸುಖ

"ಬುದ್ಧಿ", "ಜ್ಞಾನ"ವನ್ನು ಹೊಂದಿದ್ದರೇನೇ "ಜೀವನ ಸುಖಮಯ"

"ಲೋಕಾ ಸಮಸ್ತ ಸುಖಿನೋ ಭವಂತು"ಸಮಸ್ತ ಲೋಕಗಳೆಲ್ಲವೂ ಸುಖವಾಗಿ ಜೀವಿಸಲಿ!

ಧ್ಯಾನ–ಬುದ್ಧಿ+ಜ್ಞಾನ=ಬುದ್ಧತ್ವ = ಸುಖಮಯ ಜೀವನ.

'ಬುದ್ಧಿ+ಜ್ಞಾನ=ಪುಷ್ಪ+ಪರಿಮಳ'

ಧನ ಇದ್ದರೆ.. "ಧನವಂತೆ/ಧನವಂತ"ಎನ್ನುತ್ತಾರೆ.

ಬಲ ಇದ್ದರೆ "ಬಲವಂತೆ/ಬಲವಂತ"ಎನ್ನುತ್ತಾರೆ.

ಸೌಂದರ್ಯ ಇದ್ದರೆ.. "ಸುಂದರಿ/ ಸುಂದರ" ಎನ್ನುತ್ತಾರೆ.

"ಬುದ್ಧಿ".. ಇದ್ದರೆ "ಬುದ್ಧಿವಂತೆ/ ಬುದ್ಧಿವಂತ" ಎನ್ನುತ್ತಾರೆ.

ಧನ(ಹಣ)ಕ್ಕಿಂತಲೂ.. ಬಲಕ್ಕಿಂತಲೂ.. ಸೌಂದರ್ಯಕ್ಕಿಂತಲೂ ಮಹತ್ತರವಾದದ್ದು "ಬುದ್ಧಿ"

ಶ್ರೇಷ್ಠರನ್ನು ಮತ್ತು ಸಾಮಾನ್ಯರನ್ನು ಸಮವಾಗಿ ನೋಡುವುದೇ ಬುದ್ಧಿಯ ನೈಜತೆ.

ಬುದ್ಧಿಗೆ ಮತ್ತೊಂದು ಹೆಸರು.. "ವಿವೇಕ"

ವಿವೇಕಕ್ಕೆ ಮತ್ತೊಂದು ಅರ್ಥ.. "ಸಮಯಸ್ಫೂರ್ತಿ"

ವಿವೇಕಕ್ಕೆ ಮತ್ತೊಂದು ಅರ್ಥ.. "ಸಂದರ್ಭಸ್ಫೂರ್ತಿ"

ವಿವೇಕಕ್ಕೆ ಮತ್ತೊಂದು ಅರ್ಥ.."ಸಾಮಾನ್ಯ ಜ್ಞಾನ"

ಸಮಯೋಚಿತವಾಗಿ, ಸೌಮ್ಯವಾಗಿ, ಉಭಯ ಕುಶಲೋಪರಿಯಿಂದ ವ್ಯವಹರಿಸುವುದೇ...

"ಇಂಗಿತ ಜ್ಞಾನ–ಹೊಂದಿರುವುದು"ಅಂದರೆ

ಬುದ್ಧಿಗೆ ಮತ್ತೊಂದು ಹೆಸರು ಸಮತ್ವ"(ಸಮಭಾವ)

ಹೊಂದಿರುವವರನ್ನೂ(ಉಳ್ಳವರು) ಹೊಂದಿಲ್ಲದವರನ್ನೂ(ಇಲ್ಲದವರು)

ಎಲ್ಲಾಕಡೆ, ಸಮಾನವಾಗಿ ನೋಡುವುದೇ "ಸಮತ್ವವನ್ನು ಹೊಂದಿರುವುದು"ಅಂದರೆ

ಬುದ್ಧಿಗೆ ಮತ್ತೊಂದು ಹೆಸರು.."ಮೃದು ಮಧುರ ಹಾಸ್ಯ"

ಅಹಂಕಾರ ಪಡುವುದು, ಅಪಹಾಸ್ಯ ಮಾಡುವುದು ಎನ್ನುವಂತಹ ಬುದ್ದಿ ಇಲ್ಲದೇ ಇರುವುದಕ್ಕೆ ಸೂಚಕಗಳು

ವ್ಯಂಗ್ಯಭಾಷಣ.. ವ್ಯಂಗ್ಯವ್ಯವಹಾರ... ಎನ್ನುವಂತಹವು ಬುದ್ಧಿಯ ಕೊರತೆಗೆ ನಿದರ್ಶನಗಳು

ಒಂದು ವೃಕ್ಷವನ್ನು ನೋಡಿದಾಗ ನಮ್ಮ ದೃಷ್ಟಿ ಪುಷ್ಪಗಳ ಕಡೆಗೇ ಹೋಗುತ್ತದೆ... ಒಂದು ವೃಕ್ಷಕ್ಕೆ ಶೋಭೆಯನ್ನು ನೀಡುವುದು ಪುಷ್ಪಸಂಪತ್ತೇ

ಒಬ್ಬ ಮನುಷ್ಯನಿಗೆ ಶೋಭೆಯನ್ನು ನೀಡುವುದು ಬುದ್ಧಿ ಸಂಪತ್ತೇ.

"ಬುದ್ಧಿ" ಎಂಬುದು ಒಂದು.. "ಪುಷ್ಪ"

ಆದರೆ, ಒಂದು ಪುಷ್ಪಕ್ಕೆ ಪರಿಮಳ ಇಲ್ಲದಿದ್ದರೆ ಅದು 'ಪುಷ್ಪವೇ' ಅಲ್ಲ

ಅದೇ ರೀತಿಯಾಗಿ ಬುದ್ಧಿಗೆ "ಜ್ಞಾನ" ಎಂಬುದು ಅಂಟದೇ ಇದ್ದರೆ ಅದು "ಬುದ್ಧಿಯೇ" ಅಲ್ಲ

"ಏನೋ"! ನಿನಗೆ ಬುದ್ಧಿ ಜ್ಞಾನ ಇಲ್ಲವೇ?"ಎನ್ನುತ್ತಾರಲ್ಲವೇ..

"ಜ್ಞಾನ" ಎಂಬುದು ಶಾಶ್ವತ ಆತ್ಮಕ್ಕೆ ಸಂಬಂಧಿಸಿದ್ದು

"ಜ್ಞಾನ" ಎಂಬುದು ಪರಲೋಕ ಚಿಂತನೆ ಮಾಡುವಂತಹದ್ದು

"ಜ್ಞಾನ" ಎಂದರೆ ಅದು "ಮರಣದ ನಂತರ ಏನು?"ಎಂಬುದನ್ನು ಕಂಡುಕೊಳ್ಳುವಂತಹದ್ದು

"ಜ್ಞಾನ" ಎಂದರೆ ಹುಟ್ಟಿಗೆ (ಜನನಕ್ಕೆ) ಮುಂಚೆ ಏನು?"ಎಂದು ತಿಳಿದುಕೊಳ್ಳುವಂತಹದ್ದು

"ಬುದ್ಧಿ" ಎಂಬುದು ಇಹಲೋಕದ ನಡವಳಿಕೆಗೆ ಸಂಬಂಧಿಸಿದ್ದು

ಹೂವು ಹುಟ್ಟಿದ ತಕ್ಷಣವೇ ಪರಿಮಳ ಬೀರದೇ ಇರಬಹುದು.. ಆದರೆ ಪರಿಮಳ ಬೀರಲೇಬೇಕು

"ಬಹೂನಾಂ ಜನ್ಮನಾಮಂತೇ.. ಜ್ಞಾನವಾನ್ 'ಮಾಂ'ಪ್ರಪದ್ಯತೇ

ವಾಸುದೇವ ಸರ್ವಮಿತಿ ಸ ಮಹಾತ್ಮಾ (ಸುದರ್ಲಭಃ)

ಅನೇಕ "ಬುದ್ಧಿವಂತ ಜನ್ಮಗಳ" ನಂತರವೇ ಅನುಕ್ರಮವಾಗಿ ನಮ್ಮಲ್ಲಿ "ಜ್ಞಾನ" ಎಂಬುದು ಚಿಗುರೊಡೆಯುತ್ತದೆ.

"ಹೂವಾಗಿ"ತಯಾರಾದ ನಂತರವೂ ಸಹ ಮಾನವ ಜನ್ಮ ಪರಿಮಳ ಬೀರಬೇಕಾದರೆ ಪ್ರಪಂಚಿಕ "ಬುದ್ಧಿವಂತ ಜೀವನ"ದೊಂದಿಗೆ

"ಆತ್ಮಜ್ಞಾನ+ಅಹಿಂಸಾತ್ಮಕ ಜೀವನ ವಿಧಾನ"ಎನ್ನುವಂತಹವನ್ನು ಕ್ರಮವಾಗಿ ಹೊಂದಿರಬೇಕು

"ಅಹಿಂಸಾತ್ಮಕ ಜೀವನ ವಿಧಾನ" ಎಂದರೆ.. "ಸಸ್ಯಾಹಾರಿಗಳಾಗಿ ಇರುವುದೇ" ಅಲ್ಲವೇ!

ಸಹಪ್ರಾಣಿ, ಪಕ್ಷಿ, ಮೀನುಗಳು ಎಂಬ ಪ್ರಾಣಿಕೋಟಿಯ ಬಗ್ಗೆ ಕರುಣೆ ದಯೆಯನ್ನು ಕ್ರಮವಾಗಿ ಹೊಂದಿರಬೇಕು ಪ್ರಾಪಂಚಕವಾಗಿ ಎಂತಹ ಶ್ರೇಷ್ಠ ಮೇಧಾವಿಗಳಾದರೂ, ಎಂತಹ ಶ್ರೇಷ್ಠ ಶಾಸ್ತ್ರಜ್ಞರಾದರೂ ಎಂತಹ ಶ್ರೇಷ್ಠ ಜನನಾಯಕರಾದರೂ

"ಆತ್ಮಜ್ಞಾನ" ಮತ್ತು "ಅಹಿಂಸಾತ್ಮಕ ಜೀವನ ವಿಧಾನ"ಎನ್ನುವಂತಹವು ಮೂಲಭೂತವಾಗಿ ಇಲ್ಲದಿದ್ದರೆ ಅವರ ಜೀವನವು ... "ಸುವಾಸನೆ ಇಲ್ಲದ ಹೂಗಳಂತೆ"ಯೇ ಉಳಿದುಬಿಡುತ್ತದೆ

ಇನ್ನು ಮುಂದೆ ಪ್ರಪಂಚಿಕತೆಯಿಂದ ತುಂಬಿದ ಪರಿಮಳ ಇಲ್ಲದ ಹೂಗಳೆಲ್ಲವೂ

ಆತ್ಮಜ್ಞಾನದಿಂದ ತುಂಬಿ... ಅಹಿಂಸಾತ್ಮಕ ಜೀವನ ವಿಧಾನದಿಂದ ತುಂಬಿ..

ಪರಿಮಳ ಇರುವ ಹೂಗಳಾಗಲಿ!

ಬುದ್ಧಿ+ಜ್ಞಾನ = ಪುಷ್ಪ+ಪರಿಮಳ

'ಶಿವನು–ತ್ರಿನೇತ್ರನು'

"ದಿವ್ಯಚಕ್ಷುವಿಗಿಂತ ಮುಂಚೆ 'ಜೀವನು'..(ಜೀವಿಯು) ದಿವ್ಯಚಕ್ಷುವಿನ ಉತ್ತೇಜನದ ನಂತರ 'ಶಿವನು' "

"ಶಿವ" ಎಂಬ ಪದಕ್ಕೆ "ಆನಂದ" ಎಂದು ಅರ್ಥ

"ಮಂಗಳಕರ" ಎಂಬ ಮತ್ತೊಂದು ಅರ್ಥವೂ ಸಹ ಇದೆ

ಆದ್ದರಿಂದ "ಶಿವನು" ಎಂದರೆ "ಆನಂದಮಯನು" ಎಂದರ್ಥ.

"ಶಿವನು" ಎಂದರೆ "ಮಂಗಳಕರ ಜೀವನ ಜೀವಿಸುತ್ತಿರುವವನು" ಎಂದರ್ಥ

ಆದರೆ, ಈ "ಶಿವ ಪದವಿ" ಹೇಗೆ ಸಾಧ್ಯ?

ಶಿವನಂತೆ "ಮೂರನೇ ಕಣ್ಣನ್ನು" ಅಂದರೆ, "ಆತ್ಮಚಕ್ಷುವನ್ನು" ಅಂದರೆ"ಅತೀಂದ್ರಿಯ ಶಕ್ತಿಗಳನ್ನು

"ಉತ್ತೇಜನಪಡಿಸಿಕೊಳ್ಳುತ್ತಾರೋ ಅವರೆಲ್ಲರೂ "ಶಿವರೇ" ಆಗುತ್ತಾರೆ

ದಿವ್ಯ ಚಕ್ಷುವಿಗೆ ಮುಂಚೆ "ಜೀವನು".. ದಿವ್ಯಚಕ್ಷುವಿನ ಉತ್ತೇಜನದ ನಂತರ "ಶಿವನು"

"ಮೂರನೇ ಕಣ್ಣನ್ನು" ತೆರೆದರೆ ಎಲ್ಲವೂ ಭಸ್ಮವಾಗುತ್ತದೆಯಂತೆ.. ನಿಜವೇ!

ಯಾವಾಗಲಾದರೆ ನಮ್ಮ "ದಿವ್ಯಚಕ್ಷು" ಸಂಪೂರ್ಣವಾಗಿ ತೆರೆಯುತ್ತದೆಯೋ

ಆಗಲೇ ನಮ್ಮ ಪ್ರಾಪಂಚಿಕ ಪರವಾದ ಅಜ್ಞಾನ ಭಸ್ಮವಾಗುತ್ತದೆ

ಆಗಲೇ, ನಮ್ಮ ವಿಕೃತಿ ವಿಕಾರಗಳೆಲ್ಲವೂ ಶಾಶ್ವತವಾಗಿ ಅಂತ್ಯವಾಗುತ್ತವೆ

ಧ್ಯಾನ ಸಾಧನೆಯ ಮೂಲಕವೇ "ಮೂರನೇ ಕಣ್ಣು" ಉತ್ತೇಜನವಾಗುತ್ತದೆ

ಧ್ಯಾನ ಸಾಧನೆಯ ಮೂಲಕವೇ "ಶಿವ ಪದವಿ" ಲಭ್ಯವಾಗುತ್ತದೆ

"ಮೂರನೇ ಕಣ್ಣು" ಉತ್ತೇಜನವಾದರೇ "ಮಾಯೆ" ಎಂಬುದು ಭಸ್ಮವಾಗುತ್ತದೆ

"ಮಾಯೆ" ಎಂಬುದು ಶಾಶ್ವತವಾಗಿ "ಮಾಯ"ವಾಗುತ್ತದೆ

'ಗುರುದೇವರುಗಳೆಲ್ಲರಿಗೂ ಪ್ರಣಾಮಗಳು'

"ಗುರು ಪೌರ್ಣಮಿ"ಯನ್ನು

"ವ್ಯಾಸ ಪೌರ್ಣಮಿ" ಎಂದು ಸಹ ಕರೆಯುತ್ತಾರೆ.

ಶ್ರೀ ವೇದವ್ಯಾಸರು.. ಅವರ ಆದಿಗುರುಗಳಲ್ಲಿ ಅತ್ಯಂತ ವಿಶಿಷ್ಟ ಸ್ಥಾನವನ್ನು ಅಲಂಕರಿಸಿದವರು.

ಆದ್ದರಿಂದಲೇ ಗುರುಪೂರ್ಣಿಮಾ "ವ್ಯಾಸ ಪೂರ್ಣಿಮ"ವಾಗಿ ವರ್ಣಿಸಲ್ಪಟ್ಟಿತು.

"ವ್ಯಾಸ" ಎಂದರೆ "ವ್ಯಾಪ್ತಿ"ಯಾಗುವುದು ಯಾವುದು ವ್ಯಾಪ್ತಿಯಾಗಬೇಕು...

ನಮ್ಮ ವಿವೇಕ ಎಂಬುದು ವ್ಯಾಪ್ತಿಯಾಗಬೇಕು..

ನಮ್ಮ ಕರುಣೆಯ ಹೃದಯ ಎಂಬುದು ವ್ಯಾಪ್ತಿ ಹೊಂದಬೇಕು..

ನಮ್ಮ ಆತ್ಮವಿಜ್ಞಾನ ಎಂಬುದು ವ್ಯಾಪ್ತಿ ಹೊಂದಬೇಕು..

"ವಿವೇಕ" ಎಂದರೆ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂಬುದನ್ನು ಶಾಸ್ತ್ರೀಯವಾಗಿ ಹೇಳುವುದು

"ವಿವೇಕ" ಎಂದರೆ ಯಾವುದು ಯುಕ್ತ, ಯಾವುದು ಅಯುಕ್ತ ಎಂಬುದನ್ನು ಸ್ಪಷ್ಟ ಪಡಿಸುವುದು

"ವಿವೇಕ" ಎಂದರೆ ಯಾವುದು ಶಾಶ್ವತ, ಯಾವುದು ಅಶಾಶ್ವತ ಎಂಬುದನ್ನು ತಿಳಿಯಪಡಿಸುವುದು

"ವಿವೇಕ" ಎಂದರೆ ಯಾವುದು ಪ್ರಸ್ತುತ, ಯಾವುದು ಅಪ್ರಸ್ತುತ ಎಂಬುದನ್ನು ವಿವರಿಸಿ ಹೇಳುವುದು

"ವಿವೇಕ" ಎಂದರೆ ಯಾವುದು ಸಮಂಜಸ, ಯಾವುದು ಅಸಮಂಜಸ..

ಯಾವುದು ಸಂದರ್ಭ, ಯಾವುದು ಅಸಂದರ್ಭ ಎಂಬುದನ್ನು ಅರಿವಿಗೆ ತರುವಂತಹದ್ದು.

ವಿವೇಕಕ್ಕೆ ಮತ್ತೊಂದು ಹೆಸರು "ಜ್ಞಾನ" ವಿವೇಕೋದಯವೇ "ಜ್ಞಾನೋದಯ"

"ಗುರುಪೌರ್ಣಮಿ" ಎಂಬುದು ಸಕಲ ಗುರುಗಳಿಗೂ ಮೀಸಲಾದದ್ದು

ಕಷ್ಟಪಟ್ಟು ನಮಗೆ ಬಹಳಷ್ಟು ಕಲಿಸಿದ ಪ್ರತ್ಯಕ್ಷ ಗುರುಗಳನ್ನು... ಮತ್ತು ಸಕಲ ಪರೋಕ್ಷ ಗುರುಗಳನ್ನು... ಎಲ್ಲರನ್ನು.. ಆತ್ಮೀಯವಾಗಿ ಸ್ಮರಣೆಗೆ ತಂದುಕೊಳ್ಳುವ ಸಮಯ "ಯಃ ಯಾಚಿನೋತಿ, ಆಚರತಿ, ಆಚಾರಯತಿ ಚ ಸಃ ಆಚಾರ್ಯಃ"

"ಯಾರಾದರೇ ವಿವೇಕವನ್ನು, ಜ್ಞಾನವನ್ನು ಯಾಚಿಸುತ್ತಾರೋ... ಮತ್ತು ಸ್ವತಹ ಆಚರಣೆಯಲ್ಲಿ ಇಡುತ್ತಾರೋ... ಅಷ್ಟೇ ಅಲ್ಲದೇ ಇತರರಿಂದಲೂ ಸಹ ಆಚರಿಸುವಂತೆ ಮಾಡುತ್ತಾರೋ ಅವರನ್ನು "ಆಚಾರ್ಯರು" ಎನ್ನುತ್ತಾರೆ"ಆಚಾರ್ಯರೆಲ್ಲರೂಸಹ ನಿರಂತರವಾಗಿ ತಮ್ಮ ತಮ್ಮ ಮಟ್ಟದಲ್ಲಿ(ಸ್ಥಿತಿಯಲ್ಲಿ) ವಿವೇಕವನ್ನು, ಜ್ಞಾನವನ್ನು... ಕಾಲಕಾಲಕ್ಕೆ ಮತ್ತಷ್ಟು ಆಶಿಸುತ್ತಾ, ಗಳಿಸುತ್ತಾ ಇರುತ್ತಾರೆ.

ತಮ್ಮ ತಮ್ಮ ಸ್ಥಿತಿಗಳಲ್ಲಿ ಆಚರಣೆಯಲ್ಲಿ ಇಡುವುದಕ್ಕೆ ಮತ್ತಷ್ಟು ಅಭ್ಯಾಸ ಮಾಡುತ್ತಲೇ ಇರುತ್ತಾರೆ.

ತಮ್ಮ ತಮ್ಮ ಸ್ಥಿತಿಗಳಲ್ಲಿ ಇತರರಿಂದಲೂ ಆಚರಿಸುವಂತೆ ಮಾಡಲು ಸದಾ ಶ್ರಮ ಪಡುತ್ತಲೇ ಇರುತ್ತಾರೆ.

"ಮಾತೃದೇವೋಭವ"... "ಪಿತೃದೇವೋಭವ"..

"ಆಚಾರ್ಯ ದೇವೋಭವ"

ತಾಯಿ ಪ್ರಪ್ರಥಮ ಗುರು, ತಂದೆ ದ್ವಿತೀಯ ಗುರು ಆಚಾರ್ಯರು ತೃತೀಯ ಗುರುಗಳು

ಜನ್ಮ ನೀಡಿದವರು, ಬೆಳೆಸಿದವರು ಎಲ್ಲರೂ ತಾಯಂದಿರೇ... ಮತ್ತು ತಂದೆಯರೇ...

ವಿದ್ಯಾ ಬುದ್ಧಿಗಳನ್ನು ಕಲಿಸುವವರೆಲ್ಲರೂ ಆತ್ಮ ಬೋಧನೆ ಮಾಡುವವರೆಲ್ಲರೂ.. ಆಚಾರ್ಯರೇ.

'ಆತ್ಮದ ನಿಜವಾದ ಕಥೆ'

ಆತ್ಮ ಎಂಬುದು ... ಆದಿ ಅಂತ್ಯಗಳು ಇಲ್ಲದ್ದು

ಆತ್ಮ ಎಂಬುದು ... ಭೌತಿಕವಲ್ಲ

ಆತ್ಮ ಎಂಬುದು... ಮೂಲಭೂತ ಚೈತನ್ಯದ"ಶಕಲವಲ್ಲದ ಶಕಲ"(ತುಣುಕು,ಅಂಶ)

ಆತ್ಮ ಎಂಬುದು.. ಭೌತಿಕ ರೂಪುರೇಖೆಗಳು ಇಲ್ಲದ್ದು

ಆತ್ಮ ಎಂಬುದು... ಕೇವಲ "ಅನುಭವಗಳ ರೂಪು ರೇಖೆಗಳನ್ನು" ಹೊಂದಿರುವಂತಹದ್ದು

ಆತ್ಮ ಎಂಬುದು.. ಭೌತಿಕ ಭಾರ ಇಲ್ಲದ್ದು

ಆತ್ಮ ಎಂಬುದು... "ಅನುಭವಗಳ ಭಾರ"ವನ್ನು ಹೊಂದಿರುವಂತಹದ್ದು

ಆತ್ಮ ಎಂಬುದು ಒಂದು "ಕೋರಿಕೆಗಳ ಹುತ್ತ"

ಆತ್ಮದ ಅನ್ವೇಷಣೆ ಯಾವಾಗಲೂ ನೂತನ ಅನುಭವಗಳಿಗೋಸ್ಕರವೇ

ಆತ್ಮದ ಅನ್ವೇಷಣೆ ಯಾವಾಗಲೂ ಭಿನ್ನ ವಿಭಿನ್ನ ಅನುಭವಗಳಿಗೋಸ್ಕರವೇ

ಆತ್ಮಕ್ಕೆ ಎಲ್ಲಾ ಪರಿಸ್ಥಿತಿಗಳು ಆಸೆಯನ್ನು ಹುಟ್ಟಿಸುವಂತಹವೇ

ಆತ್ಮ ಎಂಬುದು "ಎಲ್ಲಾ ಪರಿಸ್ಥಿತಿಗಳನ್ನುಅರಿವಿಗೆ ತಂದುಕೊಳ್ಳಬೇಕು"ಎಂದು ಸದಾ ಆತುರ ಪಡುವಂತಹದ್ದು

ಆತ್ಮಕ್ಕೆ ಅಪಜಯ ಎಂಬುದೇ ಇಲ್ಲ...

"ಆತ್ಮಹತ್ಯೆ"ಯನ್ನು ಮಾಡಿಕೊಂಡಾಗ ಹೊರತುಪಡಿಸಿ

(ಆತ್ಮಹತ್ಯೆ ಮಹಾಪಾಪ ಎಂದು ಹೇಳಲ್ಪಟ್ಟಿರುವುದಿಲ್ಲ. ಇದು ಆತ್ಮಜ್ಞಾನರಹಿತರೆಲ್ಲರಿಗೂ, ಖಚಿತವಾಗಿ, ಸಹಜವಾಗಿ ಅನ್ವಯಿಸುತ್ತದೆ. ಆದರೆ ಒಬ್ಬ ಆತ್ಮಜ್ಞಾನಿಗೆ, ಒಬ್ಬ ಬ್ರಹ್ಮಜ್ಞಾನಿಗೆ "ಬ್ರಹ್ಮಹತ್ಯಾ ಪಾತಕವಿಲ್ಲ... ಆತ್ಮಹತ್ಯಾ ಪಾತಕವಿಲ್ಲ)

ಆತ್ಮಕ್ಕೆ ಇರುವುದೆಲ್ಲಾ ಜಯವೇ...

ಆತ್ಮಕ್ಕೆ ಇರುವುದೆಲ್ಲ ನಿತ್ಯ ನೂತನತ್ವವೇ

ಒಂದು ಆತ್ಮ... ಒಂದು ಶರೀರವನ್ನು ಧಾರಣೆ ಮಾಡಿದಾಗ... ಒಂದಾನೊಂದು ಜೀವನ ಸ್ಥಿತಿಯನ್ನು ಎದುರುಗೊಳ್ಳುತ್ತದೆ.

ಆನಂತರ... ಇನ್ನು ವಿಧವಿಧವಾದ ಜೀವನ ಪರಿಸ್ಥಿತಿಗಳನ್ನು ಅನುಭವಿಸಲು ಆರಾಟ ಪಡುತ್ತಿರುತ್ತದೆ.

ಮಾನವ ಜೀವನದ ಪರಿಸ್ಥಿತಿಗಳೆಲ್ಲವನ್ನು ಅರಿವಿಗೆ ತಂದುಕೊಳ್ಳಲು ಆತ್ಮಕ್ಕೆ ಕನಿಷ್ಠ ನಾಲ್ಕುನೂರು ಜನ್ಮಗಳಲ್ಲಿ ಅನುಭವ ಪಡೆದ(ಪಳಗಿರುವ) ಆತ್ಮ ಒಂದು "ಅನುಭವಗಳ ಹುತ್ತ"ವಾಗಿ ತಯಾರಾಗುತ್ತದೆ. ಹಲವು ಬಾರಿ ಜನಿಸಿ... ಅಂದರೆ ಹಲವು ಬಾರಿ ಶರೀರದಲ್ಲಿ ಸೇರಿ ಹಲವು ಬಾರಿ ಮರಣಿಸಿ.. ಅಂದರೆ ಹಲವು ಬಾರಿ ಶರೀರದಿಂದ ಹೊರಬಂದು ಅನೇಕ ವಿಧದ ಅವಮಾನಗಳು–ದುಃಖ– ತಿರಸ್ಕಾರಗಳನ್ನು ಸಹಿಸಿ ಹಲವು ಬಾರಿ ಮಾನ–ಸುಖ–ಪುರಸ್ಕಾರಗಳನ್ನು ಅನುಭವಿಸಿ ಒಂದು ಸಂಪೂರ್ಣ "ಜ್ಞಾನದ ಹುತ್ತ"ವಾಗಿ ತಯಾರಾಗುತ್ತದೆ.

ಪ್ರತಿ ಜನ್ಮವೂ ಸಹ ಆತ್ಮಕ್ಕೆ ಅನೇಕಾನೇಕ ಅನುಭವಗಳನ್ನು ಒದಗಿಸುತ್ತದೆ

ಪ್ರತಿ ಅನುಭವವೂ ಸಹ ಆತ್ಮಕ್ಕೆ ಒಂದು ವಿಶಿಷ್ಟ ಜ್ಞಾನಸಾರವನ್ನು ಪ್ರಸಾದಿಸುತ್ತದೆ

ಆತ್ಮ ಎಂಬುದು... ಪ್ರಪ್ರಥಮವಾಗಿ.. ಒಂದು ಕೋರಿಕೆಗಳ ಹುತ್ತ

ಆತ್ಮ ಎಂಬುದು... ಪರಂಪರೆಯಾಗಿ.. ಒಂದು ಅನುಭವಗಳ ಹುತ್ತ

ಆತ್ಮ ಎಂಬುದು... ಅಂತಿಮವಾಗಿ ಒಂದು ಜ್ಞಾನದ ಹುತ್ತ

ಇದೂ ಆತ್ಮದ ಮೂಲ ಕಥೆ

ಓಂ ತತ್ ಸತ್



ಧ್ಯಾನದಿಂದಲೇ ಜ್ಞಾನ

"ಜ್ಞಾನವನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು"

ಅರ್ಜುನನು ಬುದ್ಧಿಯನ್ನು ಮಾತ್ರ ಹೊಂದಿರುವನು; ಆದರೆ ಶ್ರೀಕೃಷ್ಣನು ಆತ್ಮಜ್ಞಾನವನ್ನು ಸಹ ಅಭಿವೃದ್ಧಿಪಡಿಸಿಕೊಂಡು ಪರಮಾತ್ಮನಾದನು. ಕೃಷ್ಣನು ಅರ್ಜುನನನ್ನು ಉದ್ದೇಶಿಸಿ ಅಸ್ಮಾತ್ ಯೋಗೀಭವ ಅರ್ಜುನ ಎಂದನು. ನಾವೆಲ್ಲರೂ ಸಹ ಕೇವಲ ಅರ್ಜುನನಂತೆ ಕೇವಲ ಬುದ್ಧಿಯನ್ನು ಮಾತ್ರ ಹೊಂದಿದ್ದರೆ ಸಾಲದು. ಕೃಷ್ಣನಂತೆ 'ಜ್ಞಾನವನ್ನು' ಸಹ ಅಭಿವೃದ್ಧಿಪಡಿಸಿಕೊಳ್ಳಬೇಕು. ಜ್ಞಾನ ಎಂದರೆ ಆತ್ಮದ ಜ್ಞಾನ. ಅದು ಕೇವಲ ಧ್ಯಾನದಿಂದಲೇ ಸಂಭವ. ಧ್ಯಾನ ಎಂಬುದು ಒಬ್ಬರು ಕೊಟ್ಟರೆ ಮತ್ತೊಬ್ಬರು ತೆಗೆದುಕೊಳ್ಳುವ ವಸ್ತುವಲ್ಲ. ಉದಾಹರಣೆಗೆ.... ಸಂಗೀತ.... ಅದು ತೆಗೆದುಕೊಂಡರೆ ಬರುವಂತಹದಲ್ಲ ಕೇವಲ ಸಾಧನೆಯ ಮೂಲಕವೇ ಸಾಧ್ಯವಾಗುತ್ತದೆ.

-ಬ್ರಹ್ಮರ್ಷಿ ಪತ್ರೀಜಿ

ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ

ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂದರ್ಶಿಸಿ

https: //www.youtube.com/pmckannada • www.meditationeverywhere.org • www.pssmovement.org

ಶ್ರೀರಾಮ ಪಬ್ಲಿಕೇಶನ್ಸ್
ಶ್ರೀರಾಮಧಾಮ ಧ್ಯಾನಕೇಂದ್ರ, ನಾರಾಯಣಪ್ಪ ಗಾರ್ಡನ್,
ವೈಟ್ ಫೀಲ್ಡ್, ಬೆಂಗಳೂರು - 560 066
ಸಂಪರ್ಕಿಸಿ : ಹೆಚ್.ಎನ್. ಶ್ರೀನಿವಾಸ, 9449695503
ವಿಜಯಲಕ್ಷ್ಮಿ ಎಸ್.ಎನ್. + 91 80500 82689